ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ನವೆಂಬರ್ 06, 2024

ಸಂಪುಟ : 51 ಸಂಚಿಕೆ : 173 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com

## ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ಚುನಾವಣೆ

# ಹೆಚ್.ಎಸ್.ಶಿವಶಂಕರ್ ಗುಂಪಿಗೆ ಭರ್ಜರಿ ಜಯ

ದಾವಣಗೆರೆ, ನ.5- ದಾವಣಗೆರೆ ತಾಲ್ಲೂಕು ದೊಡ್ಡಬಾತಿಯ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಗೆ ನಿನ್ನೆ ನಡೆದ ಚುನಾವಣೆಯಲ್ಲಿ ಕಾರ್ಖಾನೆಯ ಹಾಲಿ ಅಧ್ಯಕ್ಷರೂ ಆಗಿರುವ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಅವರ ನೇತೃತ್ವದ ಗುಂಪಿಗೆ ಭರ್ಜರಿ ಜಯ ಲಭಿಸಿದೆ.

ಆಡಳಿತ ಮಂಡಳಿಯ ಒಟ್ಟು 19 ಸ್ಥಾನಗಳ ಪೈಕಿ ಐವರು ಅವಿರೋಧವಾಗಿ ಆಯ್ಕೆಯಾಗಿದ್ದು, ಉಳಿದಂತೆ 14 ಸ್ಥಾನಗಳಿಗೆ ಆಯ್ಕೆ ಬಯಸಿ 26 ಜನರು ಸ್ಪರ್ಧೆ ಮಾಡಿದ್ದರು. ಇವರಲ್ಲಿ ಶಿವಶಂಕರ್ ಅವರೂ ಸೇರಿದಂತೆ, ಅವರ ಗುಂಪಿನಿಂದ ಸ್ಪರ್ಧಿಸಿದ್ದ ಎಲ್ಲಾ 14 ಜನರೂ ಜಯ ಗಳಿಸಿದ್ದಾರೆ.

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯ

### 32 ವರ್ಷಗಳ ನಂತರ ನಡೆದ ಚುನಾವಣೆ



ಆಡಳಿತ ಮಂಡಳಿಗೆ 32 ವರ್ಷಗಳ ನಂತರ ನಡೆದ ಈ ಚುನಾವಣೆಯು ಭಾರೀ ಕುತೂಹಲ ಮೂಡಿಸಿತ್ತು. 1992ರಲ್ಲಿ ಭಾರೀ ಚುನಾವಣೆ ನಡೆದು, ಮಾಜಿ ಸಚಿವ ಹೆಚ್. ಶಿವಪ್ಪ ಅವರ ನೇತೃತ್ವದ ಗುಂಪು ಆಯ್ಕೆಯಾ ಗಿತ್ತು. ಶಿವಪ್ಪ ಅವರು ಸತತವಾಗಿ ಅಧ್ಯಕ್ಷ ರಾಗಿ ಕಾರ್ಯ ನಿರ್ವಹಿಸಿದ್ದರು. 2002ರಲ್ಲಿ ಹೆಚ್. ಎಸ್. ಶಿವಶಂಕರ್ ಅವರು ನಿರ್ದೇಶ ಕರಾಗುವುದರ ಮೂಲಕ ಕಾರ್ಖಾನೆಯನ್ನು ಪ್ರವೇಶಿಸಿದ್ದರು. 2007ರಲ್ಲಿ ನಿರ್ದೇಶಕರಾಗಿ ಪುನರಾಯ್ಕೆ ಯಾಗಿದ್ದ ಶಿವಶಂಕರ್ ಅಧ್ಯಕ್ಷ ರಾಗಿ ಆಯ್ಕೆಯಾಗಿದ್ದರು. ಅಲ್ಲಿಂದ ಸತತ ನಾಲ್ಕು ಬಾರಿ ಅವಿರೋಧವಾಗಿ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದ ಶಿವಶಂಕರ್ ಅವರಿಗೂ ಈ ಚುನಾವಣೆ ಪ್ರತಿಷ್ಠೆಯ ಪ್ರಶ್ನೆಯಾಗಿತ್ತು.

**'ಎ' ವರ್ಗ**

ಕಾರ್ಖಾನೆ ಆಡಳಿತ ಮಂಡಳಿಯ ಒಟ್ಟು 19 ಸ್ಥಾನಗಳನ್ನು ಮೂರು ವರ್ಗಗಳನ್ನಾಗಿ ಹಂಚಿಕೆ ಮಾಡಲಾಗಿತ್ತು. ಬೆಳೆಗಾರರ ಸದಸ್ಯರಿಗೆ ಸೇರಿದ 'ಎ' ವರ್ಗವನ್ನು ಸಾಮಾನ್ಯ ಕ್ಷೇತ್ರವನ್ನಾಗಿಸಿ, 17 ಸ್ಥಾನಗಳನ್ನು ಮೀಸಲಿರಿಸಲಾಗಿತ್ತು. 'ಎ' ವರ್ಗದ ಸಾಮಾನ್ಯ ಕ್ಷೇತ್ರದಲ್ಲಿ ಮೂವರು ಅವಿರೋಧವಾಗಿ ಆಯ್ಕೆಯಾದ ಕಾರಣ, ಉಳಿದ 14 ಸ್ಥಾನಗಳಿಗೆ ಚುನಾವಣೆ ನಡೆಯಿತು.

ವಿಜೇತರಾದ 14 ಜನರ ಪೈಕಿ ಹೆಚ್. ಎಸ್. ಶಿವಶಂಕರ್ ಅವರು ಅತ್ಯಧಿಕ ಮತಗಳನ್ನು ಪಡೆದಿದ್ದು, ಮತ ಗಳಿಕೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಅವರು ಒಟ್ಟು 1631 ಮತಗಳನ್ನು ಗಳಿಸುವುದರ ಮೂಲಕ ಪ್ರತಿಸ್ಪರ್ಧಿಗಳಿಗೆ ತಿರುಗೇಟು ನೀಡಿದ್ದಾರೆ.

ಶಿವಶಂಕರ್ ಗುಂಪಿನಿಂದ ಸ್ಪರ್ಧಿಸಿದ್ದ ದೀಟೂರಿನ ಡಿ.ವಿ. ಚಂದ್ರಶೇಖರಪ್ಪ (1628), (4ನೇ ಪುಟಕ್ಕೆ)

# ಮುಡಾ: ಸಿಬಿಐಗೆ ವಹಿಸಲು ಹೈಕೋರ್ಟ್ ನೋಟಿಸ್



**ಸಿದ್ಧರಾಮಯ್ಯ ಸೇರಿದಂತೆ ಕೇಂದ್ರ ಹಾಗೂ ರಾಜ್ಯ ಗೃಹ ಇಲಾಖೆ ಕಾರ್ಯದರ್ಶಿ, ಸಿಬಿಐ ನಿರ್ದೇಶಕರಿಗೂ ನೋಟಿಸ್ ಜಾರಿ**

ಬೆಂಗಳೂರು, ನ. 5 - ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆಗೆ ಕೋರಿರುವ ಅರ್ಜಿ ಪುರಸ್ಕರಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜ್ಯ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ.

ಸಿದ್ದರಾಮಯ್ಯ ಮತ್ತು ಅವರ ಕುಟುಂಬ ಸದಸ್ಯರ ವಿರುದ್ಧ ಮುಡಾ ಬಿಡಿ ನಿವೇಶನ ಹಂಚಿಕೆ ಹಗರಣವನ್ನು ಸಿಬಿಐಗೆ ವಹಿಸಬೇಕೆಂದು ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ, ಪ್ರತಿವಾದಿಗಳಿಗೆ ಆಕ್ಷೇಪಣೆ ಸಲ್ಲಿಕೆಗೆ ಅವಕಾಶ ನೀಡಿ ನೋಟಿಸ್ ಜಾರಿ ಮಾಡಿದೆ.

ಸಿದ್ದರಾಮಯ್ಯ ಅಲ್ಲದೇ, ಸಿಬಿಐ, ಮೈಸೂರು ಜಿಲ್ಲಾ ಲೋಕಾಯುಕ್ತ ಅಧಿಕಾರಿ, ಲೋಕಾಯುಕ್ತ ಎಡಿಜಿಪಿ, ವಿಜಯನಗರ ಪೊಲೀಸ್ ಠಾಣಾಧಿಕಾರಿ, ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ, ಮಲ್ಲಿಕಾರ್ಜುನಸ್ವಾಮಿ ಮತ್ತು ಜೆ. ದೇವರಾಜು ಅವರಿಗೂ ನೋಟಿಸ್ ಜಾರಿಗೊಳಿಸಿ, ವಿಚಾರಣೆಯನ್ನು ನವೆಂಬರ್ 26ಕ್ಕೆ ಮುಂದೂಡಿದೆ.

ಸ್ನೇಹಮಯಿ ಕೃಷ್ಣ ಪರ ಹಿರಿಯ ವಕೀಲ ಕೆ.ಜಿ.ರಾಘವನ್, ಈ ಪ್ರಕರಣದ ಫಲಿತಾಂಶ ಏನೇ ಬಂದರೂ, ಸಾರ್ವಜನಿಕರ ವಿಶ್ವಾಸ ಉಳಿಸಿಕೊಂಡು ತನಿಖೆ ನಡೆಸಬೇಕಾಗುತ್ತದೆ. ಆದ್ದರಿಂದ ಈ ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂದು ಮಾಡಿದ ಮನವಿಯನ್ನು ಪುರಸ್ಕರಿಸಿದ ನ್ಯಾಯಪೀಠ ನೋಟಿಸ್ ನೀಡಿದೆ.

ಕೇಂದ್ರ ಹಾಗೂ ರಾಜ್ಯ ಗೃಹ ಇಲಾಖೆ ಕಾರ್ಯದರ್ಶಿ, ಸಿಬಿಐ ನಿರ್ದೇಶಕರಿಗೂ ನೋಟಿಸ್ ಜಾರಿ ಮಾಡಲಾಗಿದೆ.

ಅಷ್ಟೇ ಅಲ್ಲ, ಮುಖ್ಯಮಂತ್ರಿ ಕುಟುಂಬ ಪಡೆದಿರುವ 14 ಬಿಡಿ ನಿವೇಶನಗಳ ಸಂಬಂಧ ತನಿಖೆ ನಡೆಸುತ್ತಿರುವ ಲೋಕಾಯುಕ್ತ ನವೆಂಬರ್ 25ರೊಳಗೆ ತನ್ನ ತನಿಖಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವಂತೆ ಇದೇ ಸಂದರ್ಭದಲ್ಲಿ ಆದೇಶ ಮಾಡಿದೆ.

ಪ್ರಕರಣದ ಪ್ರಮುಖ ಆರೋಪಿ ಸಿದ್ದರಾಮಯ್ಯ ಹೊರತುಪಡಿಸಿ, ಉಳಿದೆಲ್ಲಾ ಆರೋಪಿಗಳಿಗೆ ತುರ್ತು ನೋಟಿಸ್ ಜಾರಿಗೊಳಿಸುವಂತೆ ಸೂಚಿಸಿದೆ. ಸಿಬಿಐ ಪರ (4ನೇ ಪುಟಕ್ಕೆ)

# ಈ ವರ್ಷ ದಾಖಲೆಯ 119.93 ದಶಲಕ್ಷ ಟನ್ ಭತ್ತ ಇಳುವರಿ

ನವದೆಹಲಿ, ನ. 5 - ದೇಶದಲ್ಲಿ ಈ ವರ್ಷ ಭತ್ತದ ಇಳುವರಿ ದಾಖಲೆಯ 119.93 ದಶಲಕ್ಷ ಟನ್‌ಗಳಿಗೆ ತಲುಪಲಿದೆ ಎಂದು ಕೇಂದ್ರ ಕೃಷಿ ಸಚಿವಾಲಯ ಅಂದಾಜಿಸಿದೆ.

ಸರ್ಕಾರದ ಗೋದಾಮುಗಳಲ್ಲಿ ಈಗಾಗಲೇ ಸಾಕಷ್ಟು ಅಕ್ಕಿ ದಾಸ್ತಾನಿದೆ. ಈ ನಡುವೆ ಉತ್ತಮ ಮುಂಗಾರು ಕಾರಣದಿಂದಾಗಿ ಬಂಪರ್ ಭತ್ತದ ಇಳುವರಿ ದೊರೆತಿದೆ.

ಮೆಕ್ಕೆಜೋಳದ ಉತ್ಪಾದನೆ ಸಹ 2024 - 25ರ ಸಾಲಿನಲ್ಲಿ ಸಾರ್ವ ಕಾಲಿಕ ದಾಖಲೆಯಾದ 24.54 ದಶ ಲಕ್ಷ ಟನ್‌ಗಳಿಗೆ ತಲುಪುವ ಅಂದಾಜಿದೆ. ಕಳೆದ ವರ್ಷ 22.24 ದಶಲಕ್ಷ ಟನ್ ಇಳುವರಿ ದೊರೆತಿತ್ತು. ಆಹಾರ ಧಾನ್ಯಗಳ ಇಳುವರಿ 164.70 ದಶಲಕ್ಷ ಟನ್ ಆಗಿರುವ ಅಂದಾಜಿದೆ. ಕಳೆದ ವರ್ಷ 155.76 ದಶಲಕ್ಷ ಟನ್ ಇಳುವರಿ ದೊರೆತಿತ್ತು.

ಆದರೆ ಬೇಳೆಗಳ ಇಳುವರಿ ಬಹುತೇಕ ಕಳೆದ ವರ್ಷದ ಹಂತದಲ್ಲಿ ಮುಂದುವರೆಯಲಿದೆ. ಕಳೆದ ವರ್ಷ 6.97 ದಶಲಕ್ಷ ಟನ್ ಇಳುವರಿಯಾಗಿದ್ದರೆ, ಈ ವರ್ಷ 6.95 ದಶಲಕ್ಷ ಟನ್ ಇಳುವರಿಯ ಅಂದಾಜಿದೆ. ಖಾದ್ಯ ತೈಲ ಬೀಜಗಳ ಉತ್ಪಾದನೆ ಈ ವರ್ಷ 25.74 ದಶಲಕ್ಷ ಟನ್ ಆಗಿರುವ ಅಂದಾಜಿದೆ. ಕಳೆದ ವರ್ಷ 24.16 ದಶಲಕ್ಷ ಟನ್ ಇಳುವರಿ ದೊರೆತಿತ್ತು.

# ಮನೆ ಮನೆಗೆ ಇ-ಸ್ವತ್ತು ಅಭಿಯಾನ ನಡೆಸಿ

## ಪಿ.ಡಿ.ಒ.ಗಳ ಸಭೆಯಲ್ಲಿ ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಸೂಚನೆ

ದಾವಣಗೆರೆ, ನ. 5 - ಗ್ರಾಮಸ್ಥರು ಎದುರಿಸುತ್ತಿರುವ ಇ-ಸ್ವತ್ತು ಸಮಸ್ಯೆ ಬಗೆಹರಿಸಲು ಜನವರಿ ಅಂತ್ಯದ ಒಳಗೆ ಮನೆ ಮನೆಗೆ ಇ- ಸ್ವತ್ತು ಅಭಿಯಾನ ನಡೆಸಬೇಕು ಎಂದು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಅವರ ಅಧ್ಯಕ್ಷತೆಯಲ್ಲಿ ನಡೆದ ದಾವಣಗೆರೆ ತಾಲ್ಲೂಕು ಪಿಡಿಒ ಅಧಿಕಾರಿಗಳ ಸಭೆಯಲ್ಲಿ ನಿರ್ಧರಿಸಲಾಗಿದೆ.

ಇ-ಸ್ವತ್ತಿಗೆ ಸಂಬಂಧಿಸಿದಂತೆ ಜನರಿಂದ ಸಾಕಷ್ಟು ದೂರುಗಳು ಬರುತ್ತಿವೆ. ನಾವೇ ಜನರ ಬಳಿ ಹೋಗಿ ಭೂ ದಾಖಲೆಗಳ ಡಿಜಿಟಲೀಕರಣ ಮಾಡಬೇಕು ಎಂದು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಅವರು ತಿಳಿಸಿದರು.

ಆಗ ಮಾತನಾಡಿದ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್, ಗ್ರಾಮ ಪಂಚಾಯ್ತಿ ಪಿ.ಡಿ.ಒ.ಗಳೇ ಮನೆ ಮನೆಗೆ ತೆರಳಿ ಇ-ಸ್ವತ್ತು ಅಭಿಯಾನ ಮಾಡಬೇಕು. ಜನವರಿ ಅಂತ್ಯದ ಒಳಗೆ ಈ ಅಭಿಯಾನ ನಡೆಸಬೇಕು ಎಂದು ಸೂಚನೆ ನೀಡಿದರು.

ಇ - ಸ್ವತ್ತು ಪ್ರಕ್ರಿಯೆಗೆ ಅಗತ್ಯ ಶುಲ್ಕ ಪಡೆದು, ಯಾವುದೇ ವಿವಾದ ಇಲ್ಲದ ಆಸ್ತಿಗಳನ್ನು ಇ-ಸ್ವತ್ತು ಮಾಡಿಕೊಡಬೇಕು. ಇದೇ ವೇಳೆ ಪೌತಿ ಖಾತೆಯ ಆಂದೋಲನ ನಡೆಸಬೇಕು ಎಂದು ತಿಳಿಸಿದರು.

ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ಹಳ್ಳಿಗಳು ಅಭಿವೃದ್ಧಿಯಾದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಗ್ರಾಮಸ್ಥರ ಜೊತೆ ನೇರ ಸಂಪರ್ಕ ಹೊಂದಿರುವ ಪಿ.ಡಿ.ಒ.ಗಳು ಆರೋಗ್ಯ, ನೀರು, ನೈರ್ಮಲ್ಯ ಸೇರಿದಂತೆ ಜನರ ಮೂಲಭೂತ ಅಗತ್ಯಗಳನ್ನು ಜವಾಬ್ದಾರಿಯಿಂದ ಒದಗಿಸಬೇಕು. ಪಾರದರ್ಶಕತೆ ಹಾಗೂ ನಿಷ್ಠೆಯಿಂದ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಗ್ರಾಮ ಪಂಚಾಯ್ತಿ ಪಿ.ಡಿ.ಒ.ಗಳು ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಗ್ರಾಮಗಳ ಸ್ವಸಹಾಯ ಸಂಘಗಳನ್ನು ಕಾರ್ಯನಿರ್ವಹಣೆಯಲ್ಲಿ ತೊಡಗಿಸಿಕೊಳ್ಳಬೇಕು. ತಮಗೆ ಬರುವ ಆದಾಯವನ್ನು ಬಳಕೆ ಮಾಡುವಾಗ ಶಿಕ್ಷಣ, ಆರೋಗ್ಯ, ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಬೇಕು ಎಂದು ಹೇಳಿದರು.

ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಕೈ ಜೋಡಿಸಬೇಕು. ಶಾಲೆಯ ಹಳೆಯ ವಿದ್ಯಾರ್ಥಿಗಳು ಹಾಗೂ ಶಾಲಾ ಸಮಿತಿಯ ಜೊತೆ ಸಹಭಾಗಿಯಾಗಿ ಮೂಲಭೂತ ಸೌಲಭ್ಯ ಕಲ್ಪಿಸಬೇಕು. ಉದ್ಯೋಗ ಖಾತ್ರಿ ಯೋಜನೆ ಮೂಲಕ ನೀರಾವರಿ ಕಾಲುವೆಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕು ಎಂದು ಸೂಚನೆ (2ನೇ ಪುಟಕ್ಕೆ)



### ಮೂರು ವರ್ಷಗಳಲ್ಲಿ ತೆರಿಗೆ ಸಂಗ್ರಹ ಮೂರು ಪಟ್ಟು ಹೆಚ್ಚಳ: ಸಿಇಒ

2022ರಲ್ಲಿ ಗ್ರಾಮ ಪಂಚಾಯ್ತಿಗಳಲ್ಲಿ ತೆರಿಗೆ ವಸೂಲಿಗೆ ಹೊಸ ಮಾರ್ಗಸೂಚಿ ರೂಪಿಸಲಾಗಿತ್ತು. ನಂತರದಲ್ಲಿ ದಾವಣಗೆರೆ ಜಿಲ್ಲೆಯ ಗ್ರಾಮ ಪಂಚಾಯ್ತಿಗಳಿಂದ ವಸೂಲಾಗುವ ಆಸ್ತಿ ತೆರಿಗೆ ಪ್ರಮಾಣ ಮೂರು ಪಟ್ಟು ಹೆಚ್ಚಾಗಿದೆ.

ಈ ಬಗ್ಗೆ ತಿಳಿಸಿರುವ ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್, ಮೊದಲು 10 ಕೋಟಿ ರೂ.ಗಳ ತೆರಿಗೆ ಬೇಡಿಕೆ ಇತ್ತು. ಈ ವರ್ಷ ತೆರಿಗೆ ಬೇಡಿಕೆ 36 ಕೋಟಿ ರೂ.ಗಳಿಗೆ ಹೆಚ್ಚಾಗಿದೆ. ಕನಿಷ್ಠ 30 ಕೋಟಿ ರೂ. ತೆರಿಗೆ ಸಂಗ್ರಹಿಸಲಾಗುವುದು. ಮುಂದಿನ ನವೆಂಬರ್ 11ರಿಂದ 25ರವರೆಗೆ ಇಡೀ ಜಿಲ್ಲೆಯಲ್ಲಿ ತೆರಿಗೆ ಸಂಗ್ರಹ ಅಭಿಯಾನ ನಡೆಸಲಾಗುವುದು ಎಂದು ಹೇಳಿದರು. (2ನೇ ಪುಟಕ್ಕೆ)

### ವಿಮಾನ ಏರಿದ ಕೂಲಂಬಿ ಬಿಸ್ಕತ್ತು

ಸರ್ಕಾರದ ಕೃಷಿ ಉತ್ಪನ್ನಗಳ ಯೋಜನೆಯ ನೆರವಿನಿಂದ ಕೂಲಂಬಿಯ ರಘು ಎಂಬುವವರು ಸಿರಿಧಾನ್ಯದಿಂದ ಬಿಸ್ಕತ್ತು ಉತ್ಪಾದಿಸುತ್ತಿದ್ದಾರೆ. ಈ ಬಿಸ್ಕತ್ತನ್ನು ವಿಮಾನಗಳಲ್ಲಿ ಪೂರೈಕೆ ಮಾಡಲಾಗುತ್ತಿದೆ ಎಂದು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಶ್ರೀಧರಮೂರ್ತಿ ತಿಳಿಸಿದರು.

ಮಾಳಗೊಂಡನಹಳ್ಳಿ, ಬಸಾಪುರ ಮುಂತಾದ ಗ್ರಾಮಗಳ 500 ರೈತರಿಗೆ ಈರೋಡ್ ಹಸುಗಳನ್ನು ಪೂರೈಸಲಾಗಿದೆ. ಇದರಿಂದಾಗಿ ಡೈರಿಗಳಿಗೆ ಬರುವ ಹಾಲಿನ ಪ್ರಮಾಣ ದಿನಕ್ಕೆ 500 ಲೀಟರ್‌ಗಳಷ್ಟು ಹೆಚ್ಚಾಗಿದೆ ಎಂದೂ ಅವರು ಹೇಳಿದರು.

# ಖಾಸಗಿ ಆಸ್ತಿಗಳ ಸಂಪೂರ್ಣ ವಶಕ್ಕೆ ಅಧಿಕಾರವಿಲ್ಲ : ಸುಪ್ರೀಂ

ನವದೆಹಲಿ, ನ. 5 - ಸಾರ್ವಜನಿಕರ ಒಳಿತಿಗಾಗಿ ಖಾಸಗಿ ಮಾಲೀಕತ್ವದ ಎಲ್ಲಾ ಸಂಪನ್ಮೂಲಗಳನ್ನು ರಾಜ್ಯಗಳು ತಮ್ಮ ವಶಕ್ಕೆ ತೆಗೆದುಕೊಳ್ಳಲು ಸಂವಿಧಾನದಲ್ಲಿ ಅಧಿಕಾರ ನೀಡಿಲ್ಲ ಎಂದು ಸುಪ್ರೀಂ ಕೋರ್ಟ್ 7-2ರ ಬಹುಮತದ ತೀರ್ಪು ನೀಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಒಂಭತ್ತು ಸದಸ್ಯರ ಪೀಠ ಈ ತೀರ್ಪು ನೀಡಿದೆ. ಆದರೆ, ಕೆಲ ನಿರ್ದಿಷ್ಟ ಪ್ರಕರಣಗಳಲ್ಲಿ ರಾಜ್ಯಗಳು ಖಾಸಗಿ ಆಸ್ತಿಗಳನ್ನು ತಮ್ಮ ವಶಕ್ಕೆ ಪಡೆಯಬಹುದು ಎಂದು ತಿಳಿಸಿದೆ.

ಖಾಸಗಿ ಆಸ್ತಿಗಳನ್ನು ರಾಜ್ಯಗಳು ವಶಕ್ಕೆ ತೆಗೆದುಕೊಂಡು ಹಂಚಬಹುದು ಎಂದು ನ್ಯಾಯಮೂರ್ತಿ ಕೃಷ್ಣ ಅಯ್ಯರ್ ಅವರು ಈ ಹಿಂದೆ ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

**ಕೆಲ ನಿರ್ದಿಷ್ಟ ಪ್ರಕರಣಗಳಲ್ಲಿ ಮಾತ್ರ ರಾಜ್ಯಗಳು ಖಾಸಗಿ ಆಸ್ತಿಗಳನ್ನು ತಮ್ಮ ವಶಕ್ಕೆ ಪಡೆಯಬಹುದು ಎಂದ ನ್ಯಾಯಾಲಯ.**

ಸಂವಿಧಾನದ 19(ಬಿ) ಅನ್ವಯ ರಾಜ್ಯಗಳು ಸಾರ್ವಜನಿಕ ಹಿತಕ್ಕಾಗಿ ಖಾಸಗಿಯವರ ಎಲ್ಲಾ ಆಸ್ತಿಗಳನ್ನು ಪಡೆದು ಹಂಚಬಹುದೇ ? ಎಂಬ ಕಗ್ಗಂಟಿನ ಪ್ರಶ್ನೆ ಇತ್ತು.

ತಮ್ಮ ಹಾಗೂ ಇತರೆ ಆರು (4ನೇ ಪುಟಕ್ಕೆ)

# ಹೆಚ್ಡಿಕೆ ವಿರುದ್ಧ ಬೆದರಿಕೆ ಪ್ರಕರಣ ದಾಖಲು

## ಹಾಸ್ಯಾಸ್ಪದ ಎಂದ ಕೇಂದ್ರ ಸಚಿವ

ಬೆಂಗಳೂರು ನ. 5 - ಐ.ಜಿ.ಪಿ. ಚಂದ್ರಶೇಖರ್ ನೀಡಿರುವ ದೂರು ಆಧರಿಸಿ ಕೇಂದ್ರ ಸಚಿವ ಹೆಚ್. ಡಿ. ಕುಮಾರಸ್ವಾಮಿ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.



ಕುಮಾರಸ್ವಾಮಿ ತಮಗೆ ಬೆದರಿಕೆ ಹಾಕಿದ್ದಾರೆ ಹಾಗೂ ಸರ್ಕಾರಿ ಕಾರ್ಯನಿರ್ವಹಣೆಗೆ ಅಡ್ಡಿಪಡಿಸಿದ್ದಾರೆ ಎಂದು ಚಂದ್ರಶೇಖರ್ ಅವರು ಪೊಲೀಸರಲ್ಲಿ ದೂರು ನೀಡಿದ್ದರು. ಕುಮಾರಸ್ವಾಮಿ ಆರೋಪಿಯಾಗಿರುವ ಗಣಿ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್.ಐ.ಟಿ.ಗೆ ಚಂದ್ರಶೇಖರ್ ಮುಖ್ಯಸ್ಥರಾಗಿದ್ದಾರೆ.

ಐಪಿಎಸ್ ಅಧಿಕಾರಿಯೊಬ್ಬರ ದೂರಿನ ಮೇರೆಗೆ ನನ್ನ ವಿರುದ್ಧ ಪೊಲೀಸರು (2ನೇ ಪುಟಕ್ಕೆ)

# 25 ಸಾವಿರ ಕೋಟಿ ರೂ. ಜಿಎಸ್‌ಟಿ ವಂಚನೆ ಪತ್ತೆ

ನವದೆಹಲಿ, ನ. 5 - ಜಿಎಸ್‌ಟಿ ಕಾಯ್ದೆ ಅಡಿ ನೋಂದಣಿಯಾದ 18 ಸಾವಿರ ನಕಲಿ ಕಂಪನಿಗಳು ಸುಮಾರು 25 ಸಾವಿರ ಕೋಟಿ ರೂ. ತೆರಿಗೆ ವಂಚನೆ ಮಾಡಿರುವುದನ್ನು ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

ಅಧಿಕಾರಿಗಳು ಇತ್ತೀಚೆಗೆ ನಕಲಿ ಕಂಪನಿಗಳ ವಿರುದ್ಧ ದೇಶಾದ್ಯಂತ ಅಭಿಯಾನ ನಡೆಸಿದ್ದರು. ಯಾವುದೇ ಸರಕುಗಳನ್ನು ಮಾರದೇ ಕೇವಲ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆಯುವ ಸಲುವಾಗಿ ನಕಲಿ ಕಂಪನಿಗಳನ್ನು ಸ್ಥಾಪಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ಅಭಿಯಾನದ ವೇಳೆ ಸುಮಾರು 73 ಸಾವಿರ ಕಂಪನಿಗಳ ಪರಿಶೀಲನೆ ನಡೆಸಲಾಯಿತು. (4ನೇ ಪುಟಕ್ಕೆ)

# ಬುಳ್ಳಾಪುರದ ಹೊರಕೇರಿ ನಿಂಗಮ್ಮ ನಿಧನ



ದಾವಣಗೆರೆ ಎಂಸಿಸಿ ಬಿ ಬ್ಲಾಕ್, 12ನೇ ಮುಖ್ಯ ರಸ್ತೆ ನಿವಾಸಿ
**ದಿ|| ಹೆಚ್.ಸಿ. ದೊಡ್ಡವೀರಣ್ಣ ಇವರ ಧರ್ಮಪತ್ನಿ**
ಶ್ರೀ ವಿನಾಯಕ ಟ್ರೇಡರ್ಸ್ (ಫೇವಿಕಾಲ್ ಡಿಸ್ಟ್ರಿಬ್ಯೂಟರ್) ಮತ್ತು ಅಕುಲ್ ಟ್ರೇಡರ್ಸ್‌ನ ಮಾಲೀಕರಾದ
ರುದ್ರೇಶ್ ಹೆಚ್.ವಿ. ಇವರ ತಾಯಿಯವರಾದ

## ಶ್ರೀಮತಿ ಹೊರಕೇರಿ ನಿಂಗಮ್ಮನವರು

ದಿನಾಂಕ 05.11.2024ರ ಮಂಗಳವಾರ ಮಧ್ಯಾಹ್ನ 12.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ದಿನಾಂಕ 06.11.2024ರ ಬುಧವಾರ **ಮೃತರ ಪಾರ್ಥಿವ ಶರೀರವನ್ನು ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್, 12ನೇ ಮುಖ್ಯರಸ್ತೆ ನಿವಾಸದಲ್ಲಿ ಬೆಳಿಗ್ಗೆ 10 ಗಂಟೆಯವರೆಗೆ ಅಂತಿಮ ದರ್ಶನಕ್ಕೆ ಇಡಲಾಗುವುದು.**
ನಂತರ ಅಂತ್ಯಕ್ರಿಯೆಯನ್ನು 1.00 ಗಂಟೆಗೆ ಹರಿಹರ ತಾಲ್ಲೂಕು ಕೊಂಡಜ್ಜಿ ಬುಳ್ಳಾಪುರ ಗ್ರಾಮದ ತೋಟದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತರು :** ಪುತ್ರ : ಶ್ರೀ ಹೆಚ್.ವಿ. ರುದ್ರೇಶ್ ಶ್ರೀಮತಿ ಜ್ಯೋತಿ
ಪುತ್ರಿಯರಾದ : ಶ್ರೀಮತಿ ಪುಷ್ಪಲತಾ ಶ್ರೀ ಹೆಚ್‌ಸಿ. ಶಿವಶಂಕರ
ಶ್ರೀಮತಿ ವೀಣಾ ಶ್ರೀ ಲಿಂಗರಾಜು ಜಿ.ಎಮ್.
ಹೊರಕೇರಿ ವಂಶಸ್ಥರು, ಬುಳ್ಳಾಪುರ ಮತ್ತು ಕಂಬತ್ತರು ವಂಶಸ್ಥರು, ಸಿದ್ದಯ್ಯನಕೋಟೆ ಹಾಗೂ ಬಂಧು-ಮಿತ್ರರು. ಮೊ. : 99456 66800, 98807 64646

# ಸಚಿವೆ ಹೆಬ್ಬಾಳ್ಕರ್ ಆಪ್ತ ಸಿಬ್ಬಂದಿಯ ಕಿರುಕುಳ : ಕ್ಲರ್ಕ್ ರುದ್ರಣ್ಣ ಆತ್ಮಹತ್ಯೆ



ರುದ್ರಣ್ಣ

ಬೆಳಗಾವಿ, ನ. 5 - ಬೆಳಗಾವಿಯ ತಹಶೀಲ್ದಾರ್ ಕಚೇರಿಯಲ್ಲೇ ಸಿಬ್ಬಂದಿ ಯೊಬ್ಬರು ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಮಂಗಳವಾರ ನಡೆದಿದೆ.

ಬೆಳಗಾವಿಯ ಮೂಡಲಗಿ ಪಟ್ಟಣದ ರುದ್ರಣ್ಣ ಯಡವಣ್ಣವರ ಆತ್ಮಹತ್ಯೆಗೆ ಶರಣಾದ ಸಿಬ್ಬಂದಿ ಎಂದು ಗುರುತಿಸಲಾಗಿದೆ.

ಕಳೆದ 12 ವರ್ಷಗಳಿಂದ ಬೆಳಗಾವಿ ತಹಶೀಲ್ದಾರ್ ಕಚೇರಿಯಲ್ಲಿ ಎಸ್‌ಡಿಸಿ ಆಗಿ ಕೆಲಸ ಮಾಡುತ್ತಿದ್ದರು. ನಿನ್ನೆಯಷ್ಟೇ ಸವದತ್ತಿ ಎಲ್ಲಮ್ಮ ಅಭಿವೃದ್ಧಿ ಪ್ರಾಧಿಕಾರಕ್ಕೆ ಅವರನ್ನು ವರ್ಗಾವಣೆ ಮಾಡಲಾಗಿತ್ತು. ಆದರೆ, ಈಗ ಬೆಳಗಾವಿ ತಹಶೀಲ್ದಾರ್ ಕಚೇರಿಯಲ್ಲಿ ಯೇ ರುದ್ರಣ್ಣ ನೇಣಿಗೆ ಶರಣಾಗಿದ್ದಾರೆ.

ತಹಶೀಲ್ದಾರ್ ಕಚೇರಿ ಸಿಬ್ಬಂದಿ ಕಚೇರಿ ತೆರೆದಾಗ ರುದ್ರಣ್ಣ ಅವರು ವೇಲ್ ಮೂಲಕ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ತಿಳಿದುಬಂದಿದೆ. ಈ ಬಗ್ಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಮೇಲಾಧಿಕಾರಿಗಳ ಕಿರುಕುಳ ತಾಳದೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂದು ಆರೋಪಿಸಿ ತಮ್ಮ ಮೊಬೈಲ್‌ನಲ್ಲಿ ವಿಡಿಯೊ ರೆಕಾರ್ಡ್ ಮಾಡಿಕೊಂಡಿದ್ದಾರೆ ಎಂದು ಮೂಲಗಳು (4ನೇ ಪುಟಕ್ಕೆ)



# ಹರಿಹರದಲ್ಲಿ ನಾಡಿದ್ದು ಶ್ರೀ ಸಹಸ್ರಾರ್ಜುನ ಮಹಾರಾಜರ ಜಯಂತಿ

ಹರಿಹರ, ನ. 5 - ನಗರದಲ್ಲಿ ನಾಡಿದ್ದು ದಿನಾಂಕ 8 ರ ಶುಕ್ರವಾರ ಎಸ್.ಎಸ್.ಕೆ. ಸಮಾಜದ ವತಿಯಿಂದ ಶ್ರೀ ಸಹಸ್ರಾರ್ಜುನ ಮಹಾರಾಜರ ಜಯಂತಿಯನ್ನು ಆಚರಣೆ ಮಾಡಲಾಗುವುದು ಎಂದು ಎಸ್.ಎಸ್.ಕೆ. ಸಮಾಜದ ಅಧ್ಯಕ್ಷ ಎನ್. ಮೋಹನ್ ಖಿರೋಜಿ ತಿಳಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾತನಾಡಿದರು. ದಿನಾಂಕ 8 ರ ಶುಕ್ರವಾರ ಬೆಳಗ್ಗೆ 8 ಗಂಟೆಗೆ ಶ್ರೀ ಸಹಸ್ರಾರ್ಜುನ ವೃತ್ತದಲ್ಲಿ ಶ್ರೀ ಸಹಸ್ರಾರ್ಜುನ ಮಹಾ ರಾಜರ ಭಾವ ಚಿತ್ರಕ್ಕೆ ಪುಷ್ಪ ನಮನ, ಬೆಳಗ್ಗೆ 9 ಗಂಟೆಗೆ ಎಸ್.ಎಸ್.ಕೆ. ಯುವ ಗಜಪಡೆ ಇವರಿಂದ ಶ್ರೀಮತಿ ಯಲ್ಲಮ್ಮ ತುಳಜಣಸಾ ಭೂತೆ ಸಮುದಾಯ ಭವನದಲ್ಲಿ ಶ್ರೀ ಸಹಸ್ರಾರ್ಜುನ ಮಹಾರಾಜರ ಧ್ವಜಾರೋಹಣ, ಬೆಳಗ್ಗೆ 10 ಗಂಟೆಗೆ ಬೈಕ್ ರ್‍ಯಾಲಿ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ಸರ್ಕಾರಿ ಆಸ್ಪತ್ರೆಯ ರೋಗಿಗಳಿಗೆ ಹಾಲು-ಹಣ್ಣು ವಿತರಣೆ, ಸಂಜೆ 4 ಗಂಟೆಗೆ ವಿವಿಧ ಜಾನಪದ ಕಲಾಮೇಳ ತಂಡದೊಂದಿಗೆ ಶ್ರೀ ಸಹಸ್ರಾರ್ಜುನ ಮಹಾರಾಜರ ಪುಷ್ಪಾಲಂಕೃತ ಭಾವಚಿತ್ರದ ಮೆರವಣಿಗೆ ನಡೆಯಲಿದೆ.

ಸಂಜೆ 7 ಗಂಟೆಗೆ ಮಾಜಿ ಅಧ್ಯಕ್ಷ ದಿ. ನಲ್ಲಿ ನಾಗರಾಜ್ ಮೆಹರ್ವಾಡೆ ವೇದಿಕೆಯಲ್ಲಿ ಸಭಾ ಕಾರ್ಯಕ್ರಮ ನಡೆಯಲಿದ್ದು, ಅಧ್ಯಕ್ಷತೆಯನ್ನು ಎಸ್.ಎಸ್.ಕೆ. ಸಮಾಜದ ಅಧ್ಯಕ್ಷ ಮೋಹನ್ ಎನ್. ಖೀರೋಜಿ ವಹಿಸಲಿದ್ದಾರೆ. ಉದ್ಘಾಟನೆಯನ್ನು ಎಸ್.ಎಸ್.ಕೆ. ಸಮಾಜದ ರಾಜ್ಯ ಅಧ್ಯಕ್ಷ ಶಶಿಕುಮಾರ್ ವಿ. ಮೆಹರ್ವಾಡೆ ಉದ್ಘಾಟನೆ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಎಚ್.ಎಸ್. ಶಿವಶಂಕರ್, ಎಸ್. ರಾಮಪ್ಪ, ಕಾಂಗ್ರೆಸ್ ಪಕ್ಷದ ಮುಖಂಡ ನಂದಿಗಾವಿ ಶ್ರೀನಿವಾಸ್, ಜಿ.ಪಂ. ಮಾಜಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ನಗರ ಸಭೆ ಅಧ್ಯಕ್ಷೆ ಕವಿತಾ ಮಾರುತಿ, ಮಾಜಿ ನಗರ ಸಭೆ ಅಧ್ಯಕ್ಷ ಕೃಷ್ಣ ಸಾ ಭೂತೆ, ಹುಬ್ಬಳ್ಳಿ ಅರ್ಜುನ ಸಾ. ಪವರ್, ಕೆ. ವಿನಯ ಪವರ್, ದಾವಣಗೆರೆ ರವಿಚಂದ್ರ, ಕಾಂಗ್ರೆಸ್ ಮುಖಂಡ ನಿಕ್ಕಿಲ್ ಕೊಂಡಜ್ಜಿ ಇತರರು ಭಾಗವಹಿಸಲಿದ್ದು, ಎಸ್.ಎಸ್.ಕೆ. ಸಮಾಜಕ್ಕೆ ಭದ್ರವಾದ ಬುನಾದಿ ಹಾಕಿ ಸಂಘಟನೆ ಬಲಪಡಿಸಿದ ರೇವಣಸಾ ತುಳಜಣಸಾ ಭೂತೆ ರವರಿಗೆ ಸಮಾಜಕ್ಕೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಶ್ರೀ ಸಹಸ್ರಾರ್ಜುನ ಸೇವಾ ಸಿರಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಈ ಸಂದರ್ಭದಲ್ಲಿ ಎಸ್.ಎಸ್.ಕೆ. ಸಮಾಜದ ಉಪಾಧ್ಯಕ್ಷ ಪರಶುರಾಮ್ ಕಾಟ್ವೆ, ಖಜಾಂಚಿ ಎನ್. ತುಳಜಪ್ಪ ಭೂತೆ, ನಿರ್ದೇಶಕ ವಿನಾಯಕ ಎಂ. ಲದ್ವಾ, ಗಣೇಶ ಮೆಹರ್ವಾಡೆ, ಅಶೋಕ ಭೂತೆ, ಶ್ರೀಕಾಂತ್ ಮೆಹರ್ವಾಡೆ, ಕೃಷ್ಣ ಪಿ. ರಾಜೋಳ್ಳಿ ಇತರರು ಹಾಜರಿದ್ದರು.

# ಚಿತ್ರದುರ್ಗ ಅಥವಾ ದಾವಣಗೆರೆ 2ನೇ ರಾಜಧಾನಿಯಾದರೆ ಕನ್ನಡ ಮತ್ತಷ್ಟು ಅಭಿವೃದ್ಧಿ

## ಮುರುಘಾಮಠದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶ್ರೀ ಬಸವ ಪ್ರಭು ಸ್ವಾಮೀಜಿ



ಚಿತ್ರದುರ್ಗ, ನ. 5 - ಬದುಕಲು ಉಸಿರು ಎಷ್ಟು ಮುಖ್ಯವೋ ಹಾಗೆಯೇ ನಮ್ಮ ಬದುಕಿಗೆ ಕನ್ನಡ ಉಸಿರಾಗಬೇಕು ಎಂದು ಶ್ರೀ ಬಸವಪ್ರಭು ಸ್ವಾಮೀಜಿ ಅಭಿಪ್ರಾಯಿಸಿದರು.

ಶ್ರೀ ಮುರುಘರಾಜೇಂದ್ರ ಮಠದಲ್ಲಿ ನಡೆದ 34ನೇ ವರ್ಷದ ಹನ್ನೊಂದನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವದ ನೇತೃತ್ವ ವಹಿಸಿ, ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡ ತಾಯಿ ಭುವನೇಶ್ವರಿಗೆ ಪುಷ್ಪ ನಮನ ಸಲ್ಲಿಸಿ ಶ್ರೀಗಳು ಮಾತನಾಡಿದರು.

ರಾಜಧಾನಿ ಬೆಂಗಳೂರು ಎಲ್ಲ ಕ್ಷೇತ್ರಗಳಲ್ಲಿ ಮುಂದೆ ಬಂದಿದೆ. ಆದರೆ ಕನ್ನಡಿಗರಿಗೆ ಅಲ್ಲಿ ಉದ್ಯೋಗ ಸಿಗುತ್ತಿಲ್ಲ. ಕನ್ನಡಿಗರಿಗೆ ಉದ್ಯೋಗ ಕೊಡಿ ಎಂದು ಒತ್ತಾಯಿಸುವ ಸ್ಥಿತಿ ಬಂದಿದೆ. ಕರ್ನಾಟಕದ ಎರಡನೇ ರಾಜಧಾನಿಯಾಗಿ ಚಿತ್ರದುರ್ಗ ಅಥವಾ ದಾವಣಗೆರೆಯನ್ನು ಘೋಷಣೆ ಮಾಡಿದರೆ ಕನ್ನಡ ಮತ್ತಷ್ಟು ಅಭಿವೃದ್ಧಿಯಾಗುತ್ತದೆ ಎಂದರು.

ನಾಣ್ಯದ ಎರಡು ಮುಖಗಳಂತೆ ನೂತನ ದಂಪತಿ ಗಳು ಒಂದಾಗಿರಬೇಕು. ಮನಸ್ಸುಗಳು ಒಂದಾಗಬೇಕು. ಅಹಂಕಾರದಿಂದ ಎಷ್ಟೋ ದಾಂಪತ್ಯ ವಿಚ್ಛೇದನ ವಾಗುತ್ತಿವೆ. ಪ್ರತಿಷ್ಠೆಗಳನ್ನು ಬದಿಗಿಡಬೇಕು. ಪರಸ್ಪರ ಪ್ರೀತಿ, ವಾತ್ಸಲ್ಯದಿಂದ ಜೀವನ ಸಾಗಿಸಬೇಕೆಂದರು.

ಮುಖ್ಯಅತಿಥಿ ಡಾ.ಅಶ್ವಿನಿಕುಮಾರ್ ಪಸಾರದ ಮಾತನಾಡಿ, ಸಮಾಜದಲ್ಲಿ ಆರೋಗ್ಯ ಕಾಪಾಡಿಕೊಳ್ಳುವುದು ಮುಖ್ಯ. ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಚಿಕ್ಕ ಸಮಸ್ಯೆ ಇದ್ದರೂ ಉದಾಸೀನ ಮಾಡಬಾರದು. ಹಾಗೆಯೇ ಮುಂದೆ ಅದು ದೊಡ್ಡ ಸಮಸ್ಯೆಯಾಗಿಯೇ ಉಳಿಯಬಹುದು ಎಂದರು.

ಡಾ. ಮಲ್ಲಪ್ಪ ಮಾತನಾಡಿ, ಜ್ಞಾನ ಮತ್ತು ಭಾಷೆಗೂ ವ್ಯತ್ಯಾಸ ಇದೆ. ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ಪ್ರಯತ್ನವಾಗಬೇಕು. ಕನ್ನಡ ಭಾಷೆ ಅನ್ನದ ಭಾಷೆಯಾಗಬೇಕು. ಹೃದಯದ ಭಾಷೆಯಾಗಬೇಕು. ಅತ್ಯಂತ ಪ್ರಾಚೀನ ಇತಿಹಾಸ ಹೊಂದಿರುವ ಭಾಷೆ ನಮ್ಮದು. ನಮಗೆ ಭಾಷೆಗಳ ಕೀಳರಿಮೆಗಳು ತೊಲಗಬೇಕು. ಪ್ರತಿಯೊಂದು ಭಾಷೆಗೂ ತನ್ನದೇ ಆದ ಮಹತ್ವವಿದೆ. ಅನೇಕ ಕವಿಗಳು ಕನ್ನಡ ನಾಡು ನುಡಿ ಸಾಂಸ್ಕೃತಿಕ ಶ್ರೀಮಂತಿಕೆ ಬಗ್ಗೆ ಬರೆದಿದ್ದಾರೆ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಿ.ಸಿ. ಪಾಣಿ, ಪ್ರಪಂಚದಲ್ಲಿ ಅನೇಕ ಭಾಷೆಗಳಿವೆ. ನಮ್ಮಲ್ಲಿ ಸಂಸ್ಕೃತ ಭಾಷೆ ಪ್ರಾಚೀನವಾದುದು. ನಂತರ ಹಿಂದಿ, ಬಂಗಾಳಿ, ಕನ್ನಡ, ತಮಿಳು ಮೊದಲಾದ ವುಗಳು. ಕನ್ನಡಕ್ಕೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ ಎಂದರು.

ಕಾರ್ಯಕ್ರಮದಲ್ಲಿ 5 ಜೋಡಿಗಳ ವಿವಾಹ ನೆರವೇರಿತು. 2024ನೇ ಸಾಲಿನ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರನ್ನು ಸನ್ಮಾನಿಸಲಾಯಿತು. ಶ್ರೀ ಬಸವನಾಗಿ ದೇವ ಸ್ವಾಮಿಗಳು ಇದ್ದರು.

ಗಂಜಿಗಟ್ಟಿ ಕೃಷ್ಣಮೂರ್ತಿ ಜಾನಪದ ಗೀತೆ ಹಾಡಿದರು. ಜಮುರಾ ಕಲಾವಿದರು ವಚನ ಪ್ರಾರ್ಥನೆ ಹಾಡಿದರು. ಜ್ಞಾನಮೂರ್ತಿ ಸ್ವಾಗತಿಸಿದರು. ನವೀನ್ ಮಸ್ಕಲ್ ನಿರೂಪಿಸಿದರು.

# ನಗರದಲ್ಲಿ ನಾಳೆ ವೃತ್ತಿರಂಗ ಗೀತೆಗಳ ಕಲಿಕಾ ಕಾರ್ಯಾಗಾರ ಸಮಾರೋಪ

ದಾವಣಗೆರೆ, ನ.5- ವೃತ್ತಿ ರಂಗಭೂಮಿ ರಂಗಾಯಣದ ವತಿಯಿಂದ ನಗರದ ಜಯದೇವ ವೃತ್ತದ ಶಿವಯೋಗ ಮಂದಿರದಲ್ಲಿ ನಾಡಿದ್ದು ದಿನಾಂಕ 7ರ ಗುರುವಾರ ಸಂಜೆ 6ಕ್ಕೆ ರಂಗ ಸಂಗೀತ : ವೃತ್ತಿರಂಗ ಗೀತೆಗಳ ಕಲಿಕಾ ಕಾರ್ಯಾಗಾರದ ಸಮಾರೋಪ ಮತ್ತು ಅಭಿನಯ ಸಂಗೀತ ಪ್ರದರ್ಶನ ನಡೆಯಲಿದೆ ಎಂದು ರಂಗಾಯಣದ ನಿರ್ದೇಶಕ ಮಲ್ಲಿಕಾರ್ಜುನ್ ಕಡಕೋಳ ತಿಳಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತುಮಕೂರಿನ ಕೇಂದ್ರ ಸಂಗೀತ-ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಡಾ. ಲಕ್ಷ್ಮಣದಾಸ್ ಸಮಾರೋಪ ನುಡಿಗಳನ್ನಾಡಲಿದ್ದು, ಹಿರಿಯ ರಂಗಕರ್ಮಿ ಬಾ.ಮ. ಬಸವರಾಜಯ್ಯ ಮುಖ್ಯ ಅತಿಥಿಯಾಗಿ ಭಾಗವಹಿಸುವರು ಎಂದರು.

ಇದೇ ವೇಳೆ ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತೆ ಸಾವಿತ್ರಿ ರಿತ್ತಿ, ಹಿರಿಯ ರಂಗ ನಿರ್ದೇಶಕ ಡಾ. ಪ್ರಕಾಶ್ ಗರುಡ ಮತ್ತು ಕಾರ್ಯಾಗಾರದ ನಿರ್ದೇಶಕ ರಾಘವ ಕಮ್ಮಾರ್ ಅವರುಗಳನ್ನು ಸನ್ಮಾನಿಸಲಾಗುವುದು.

ವೃತ್ತಿರಂಗ ಗೀತೆಗಳ ಕಲಿಕಾ ಕಾರ್ಯಾಗಾರಕ್ಕೆ 39 ಜನ ಅರ್ಜಿ ಸಲ್ಲಿಸಿದ್ದು, ಅದರಲ್ಲಿ 18 ಜನರನ್ನು ಆಯ್ಕೆಗೊಳಿಸಿ ಅವರೆಲ್ಲರಿಗೂ ವೃತ್ತಿ ರಂಗ ಗೀತೆಗಳ ಕಲಿಕಾ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಹೇಳಿದರು.

ಈ ವೇಳೆ ಕನ್ನಡ ಮತ್ತು ಸಂಸ್ಕೃತ ಇಲಾಖೆಯ ಉಪ ನಿರ್ದೇಶಕ ರವಿಚಂದ್ರ ಸುದ್ದಿಗೋಷ್ಠಿಯಲ್ಲಿದ್ದರು.

# 25ನೇ ವಾರ್ಡಿನಲ್ಲಿ ಕಾಮಗಾರಿ ಪರಿಶೀಲನೆ



ದಾವಣಗೆರೆ, ನ. 5- ನಗರ ಪಾಲಿಕೆಯ 25 ನೇ ವಾರ್ಡಿನಲ್ಲಿ ಕೈಗೊಂಡಿರುವ ಸ್ವಚ್ಛತಾ ಕಾಮಗಾರಿಯನ್ನು ಮಹಾಪೌರ ಕೆ. ಚಮನ್ ಸಾಬ್ ಇಂದು ಬೆಳಿಗ್ಗೆ ವೀಕ್ಷಿಸಿದರಲ್ಲದೇ, ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿದರು. ಈ ಸಂದರ್ಭದಲ್ಲಿ ಉಪ ಮೇಯರ್ ಸೋಗಿ ಶಾಂತಕುಮಾರ್, ಪಾಲಿಕೆ ಸದಸ್ಯರಾದ ಎಸ್.ಟಿ. ವೀರೇಶ್, ಕೆ.ಜಿ. ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.


# ನಗರದಲ್ಲಿ ಇಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

ಮಾಮಾಸ್ ಜಾಯಿಂಟ್ ರಸ್ತೆ, ವೈದ್ಯಕೀಯ ಬಾಲಕರ ಹಾಸ್ಟೆಲ್ ರೋಡ್, ಈಜುಕೋಳ, ಆಂಜನೇಯ ಬಡಾವಣೆ, ಭವಾನಿ ಫ್ಲೋರ್ ಮಿಲ್, ಡೆಂಟಲ್ ಕಾಲೇಜು ರಸ್ತೆ, ಗುಂಡಿ ಶಾಲೆ ಎಫ್-02 ಎಮ್.ಸಿ.ಸಿ.ಬಿ ಫೀಡರ್ ವ್ಯಾಪ್ತಿಯ ಶಾಮನೂರು ರಸ್ತೆ, ಎಸ್.ಎಸ್. ಲೇಔಟ್, ಎ ಬ್ಲಾಕ್, ಕುವೆಂಪು ನಗರ, ಬಾಟ್ಲಿ ಬಿಲ್ಡಿಂಗ್ ಸುತ್ತ ಮುತ್ತ, ಸಿದ್ದವೀರಪ್ಪ ಬಡಾವಣೆ, 1ನೇ ಅಡ್ಡ ರಸ್ತೆ ಯಿಂದ 7ನೇ ಅಡ್ಡರಸ್ತೆವರೆಗೆ, ಗ್ಲಾಸ್ ಹೌಸ್, ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಹಿಂಭಾಗದ ಪ್ರದೇಶ , ಬಿ.ಐ.ಇ.ಟಿ. ಕಾಲೇಜು ಹಾಗೂ ಸುತ್ತ ಮುತ್ತ ಪ್ರದೇಶಗಳು.

ಮಂಡಿಪೇಟೆ, ಬಿನ್ನಿ ಕಂಪನಿ ರಸ್ತೆ, ಎಮ್ ಜಿ ರಸ್ತೆ, ಎನ್ ಆರ್ ರಸ್ತೆ, ಮಹಾವೀರ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ಬಿ.ಟಿ. ಮಂಡಕ್ಕಿ ಭಟ್ಟಿ, 1 ರಿಂದ 10 ನೇ ಕ್ರಾಸ್, ಇಂದಿರಾ ನಗರ, ಸಿದ್ದರಾಮೇಶ್ವರ ಬಡಾವಣೆ, ಕಾರ್ಲ್ ಮಾರ್ಸ್ ನಗರ, ಕೋಳಿ ಚನ್ನಪ್ಪ ಬಡಾವಣೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು, ಮೌನೇಶ್ವರ ಹೆಚ್.ಕೆ. ಆರ್. ಸರ್ಕಲ್, ಕೆ.ಇ.ಬಿ ಕಾಲೋನಿ, ನಿಟುವಳ್ಳಿ ಹಾಗು ನಿಟುವಳ್ಳಿ ಹೊಸ ಬಡಾವಣೆ, ಮೌನೇಶ್ವರ ಬಡಾವಣೆ, ಸೈಯದ್ ಪೀರ್ ಬಡಾವಣೆ, ಐ.ಟಿ.ಐ. ರಿಂಗ್ ರಸ್ತೆ, ಜಯನಗರ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ,

ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಭಗೀರಥ ಸರ್ಕಲ್, ಕಾಳಿಕಾಂಬ ದೇವಸ್ಥಾನ, ಶಕ್ತಿನಗರ, ಹಾಗು ಇ.ಎಸ್.ಐ ಆಸ್ಪತ್ರೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು, ಪಿ.ಬಿ. ರಸ್ತೆ., ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ಶ್ರೀ ಮುರುಘ ರಾಜೇಂದ್ರ ಸ್ವಾಮಿಗಳ ಮಠ, ಜಾಧವ್ ಕ್ಲಿನಿಕ್ ಸುತ್ತ ಮುತ್ತ , ಶಿವಪ್ಪ ವೃತ್ತದಿಂದ ಜಯದೇವ ವೃತ್ತದವರೆಗೆ ಹಾಗು ಸುತ್ತಮುತ್ತ ಪ್ರದೇಶಗಳು, ಪೊಲೀಸ್ ಕ್ವಾಟ್ರಸ್, ತುಂಗ, ಭದ್ರ, ಸರಸ್ವತಿ, ಕೃಷ್ಣ ಬ್ಲಾಕ್, ಅರುಣಾ ಸರ್ಕಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು,

ಎಮ್.ಸಿ.ಸಿ. ಎ ಬ್ಲಾಕ್, ನ್ಯಾಯಾಧೀಶರ ವಸತಿ ಗೃಹಗಳು,



ತೊಗಟವೀರ ಕಲ್ಯಾಣ ಮಂದಿರ, ವಿನೋಬ ನಗರ 1ನೇ ಮುಖ್ಯ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ಎಸ್.ಎಸ್. ಬಡಾವಣೆ, ಎ ಬ್ಲಾಕ್, ಶಾಂತಿ ನಗರ, ಕುಂದುವಾಡ ರಸ್ತೆ, ಮಹಾನಗರ ಪಾಲಿಕೆ ಕುಡಿಯುವ ನೀರಿನ ಸ್ಥಾವರ, ಬಸವೇಶ್ವರ ಬಡಾವಣೆ, ಮಹಾಲಕ್ಷ್ಮೀ ಬಡಾವಣೆ, ಬಾಲಾಜಿ ನಗರ, ಕುಂದುವಾಡ ಕೆರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಪಿ. ಬಿ ರೋಡ್, ರಿಲಯನ್ಸ್ ಮಾರ್ಕೆಟ್, ಸುಲ್ತಾನ್ ಡೈಮೈಂಡ್ಸ್, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು, ನಿಟುವಳ್ಳಿ ಹಾಗೂ ನಿಟುವಳ್ಳಿ ಹೊಸ ಬಡಾವಣೆ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, 60 ಅಡಿ ರಸ್ತೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು

ಡೆಂಟಲ್ ಕಾಲೇಜ್ ರಸ್ತೆ, ಮ್ಯಾಕ್ಸ್, ಕೆಎಸ್‌ಪಿ, ಕಡ್ಲಿ ಬಿಲ್ಡಿಂಗ್, ಬಿಎಸ್‌ಸಿ, ಎಆರ್‌ಜಿ ಕಾಲೇಜ್‌ಹಾಗೂ ಸುತ್ತಮುತ್ತಲಿನ ಪ್ರದೇಶಗಳು ನಿಜಲಿಂಗಪ್ಪ ಬಡಾವಣೆ, ರಿಂಗ್‌ರೋಡ್, ಕುಂದವಾಡ ರಸ್ತೆ, ಯಲ್ಲಮ್ಮನಗರ, ವಿನೋಬನಗರ 4ನೇ ಮೇನ್, 3ನೇ ಮೇನ್ ಹಾಗೂ ಸುತ್ತ ಮುತ್ತಲ ಪ್ರದೇಶಗಳು,

ಎ.ವಿ.ಕೆ ಕಾಲೇಜ್ ರಸ್ತೆ, ರತ್ನಮ್ಮ ಮಹಿಳಾ ಹಾಸ್ಟೆಲ್, ಸೀತಮ್ಮ ಕಾಲೇಜ್ ಮತ್ತು ಬಡಾವಣೆ ಪೊಲೀಸ್ ಠಾಣೆ, ಹದಡಿ ರೋಡ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು, ಎಮ್.ಬಿ. ಕೇರಿ, ಹೊಂಡದ ಸರ್ಕಲ್, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇ.ಡಬ್ಲ್ಯೂ.ಎಸ್. ಕಾಲೋನಿ, ಹಳೇಪೇಟೆ, ಬಾರ್‌ಲೈನ್ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು,

ಇ.ಎಸ್.ಐ ಆಸ್ಪತ್ರೆ, ಶಕ್ತಿನಗರ, ಬನಶಂಕರಿ ದೇವಸ್ಥಾನದ ಸುತ್ತಮುತ್ತ, ರಾಜೇಂದ್ರ ಬಡಾವಣೆ, ಮೀನು ಮಾರುಕಟ್ಟೆ, ಜೋಗಲ್ ಬಾಬಾ ಲೇಔಟ್, ಮುಸ್ತಾಫಾ ನಗರ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಎಲೆಬೇತೂರಿನ ತರಳಬಾಳು ಶಾಲೆಯಲ್ಲಿ ರಾಜ್ಯೋತ್ಸವ



ದಾವಣಗೆರೆ, ನ.5- ಎಲೆಬೇತೂರಿನ ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆ ಮತ್ತು ತರಳಬಾಳು ಆಂಗ್ಲ ಮಾಧ್ಯಮ ಶಾಲೆಯ ಸಂಯುಕ್ತಾಶ್ರಯದಲ್ಲಿ 69ನೇ ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.

ಶಾಲಾ ಆವರಣವನ್ನು ಸ್ವಚ್ಛಗೊಳಿಸಿದ ವಿದ್ಯಾರ್ಥಿಗಳು ಬಾಳೆಕಂಬ, ಮಾವಿನ ತೋರಣಗಳಿಂದ ಅಲಂಕರಿಸಿದ್ದರು. ಸಾಂಸ್ಕೃತಿಕ ಚಟುವಟಿಕೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಬಣ್ಣ ಬಣ್ಣದ ಉಡುಪುಗಳು ಧರಿಸಿದ್ದು ರಾಜ್ಯೋತ್ಸವದ ಸಂಭ್ರಮ ಹೆಚ್ಚಿಸಿತ್ತು.

ಕಾರ್ಯಕ್ರಮಕ್ಕೆ ಬಂದ ಅತಿಥಿಗಳ, ಶಿಕ್ಷಕರುಗಳ ಕೊರಳಲ್ಲಿ ಹಳದಿ ಕೆಂಪು ಕನ್ನಡದ ಶಾಲುಗಳು ರಾರಾಜಿಸುತ್ತಿದ್ದವು. ಸ್ಥಳೀಯ ಸಲಹಾ ಸಮಿತಿಯ ಅಧ್ಯಕ್ಷ ಹೆಚ್. ಬಸವರಾಜಪ್ಪ ಧ್ವಜಾರೋಹಣ ನೆರವೇರಿಸಿ, ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ದಾವಣಗೆರೆ ತಾಲ್ಲೂಕು ಕಸಾಪ ನಿರ್ದೇಶಕ ಷಡಕ್ಷರಪ್ಪ ಎಂ. ಬೇತೂರು, ಅಧ್ಯಾಪಕ ಎಸ್.ಆರ್. ನಾಗರಾಜ್ ಮತ್ತು ಹೆಚ್.ಎಸ್ ದ್ಯಾಮೇಶ್ ಹಾಗೂ ವಿದ್ಯಾರ್ಥಿಗಳು ಕನ್ನಡ ನಾಡು-ನುಡಿ, ವೈಭವ, ಮಹತ್ವ, ಪ್ರಸ್ತುತ ಸವಾಲುಗಳ ಕುರಿತು ಮಾತನಾಡಿದರು.

ಮುಖ್ಯೋಪಾಧ್ಯಾಯಿನಿ ಎಂ.ಬಿ. ಪ್ರೇಮಾ ಸ್ವಾಗತಿಸಿದರು. ಅಧ್ಯಾಪಕರಾದ ಉಷಾ ಕನ್ನಡ ಗೀತೆಗಳನ್ನು ಹಾಡಿದರು.

ವೇದಿಕೆಯ ಮೇಲೆ ತರಳಬಾಳು ಶಾಲೆಯ ಮುಖ್ಯೋಪಾಧ್ಯಾಯಿನಿ ಶಶಿಕಲಾ, ಅಧ್ಯಾಪಕಿ ಅನಿತಾ ಮತ್ತು ರವಿಕುಮಾರ್ ಉಪಸ್ಥಿತರಿದ್ದರು. ಅಧ್ಯಾಪಕ ಷಣ್ಮುಖಪ್ಪ ಕಾರ್ಯಕ್ರಮ ನಿರ್ವಹಿಸಿದರು.

# ಮನೆ ಮನೆಗೆ ಇ-ಸ್ವತ್ತು ಅಭಿಯಾನ ನಡೆಸಿ

(1ನೇ ಪುಟದಿಂದ) ನೀಡಿದರು. ಪಂಚಾಯ್ತಿಗಳಲ್ಲಿ ಆಗಬೇಕಾದ ಕೆಲಸಗಳನ್ನು ಪಿ.ಡಿ.ಒ.ಗಳು ಪಟ್ಟಿ ಮಾಡಿಕೊಳ್ಳಬೇಕು. ಕ್ರಮ ತೆಗೆದುಕೊಂಡ ಬಗ್ಗೆ ದಾಖಲಿಸಿಕೊಳ್ಳಬೇಕು. ಈ ಬಗ್ಗೆ ನಿಯಮಿತವಾಗಿ ಸಭೆ ಕರೆದು ಪರಿಶೀಲನೆ ನಡೆಸಲಾಗುವುದು ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್, ನಗರ ಪಾಲಿಕೆ ನಡೆಸಿರುವ ಸಮೀಕ್ಷೆಯ ಪ್ರಕಾರ 1,200 ಮಕ್ಕಳು ಶಾಲೆಯಿಂದ ಹೊರಗಿದ್ದಾರೆ. ಇವರನ್ನು ಮತ್ತೆ ಶಾಲೆಗೆ ತರಲು ಶಿಕ್ಷಣ ಇಲಾಖೆ ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ತಾ.ಪಂ. ಸಿಇಒ ರಾಮಭೋವಿ, ದಾವಣಗೆರೆ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಶ್ರೀಧರಮೂರ್ತಿ ಮತ್ತಿತರೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಮೂರು ವರ್ಷಗಳಲ್ಲಿ ತೆರಿಗೆ

(1ನೇ ಪುಟದಿಂದ) ಮಾರ್ಗಸೂಚಿಯ ಅನ್ವಯ ಆಸ್ತಿಗಳನ್ನು ಅಳತೆ ಮಾಡಲಾಗಿದೆ ಹಾಗೂ ಆಸ್ತಿ ಮೌಲ್ಯವನ್ನು ಗುರುತಿಸಲಾಗಿದೆ. ತೆರಿಗೆ ಸಂಗ್ರಹ ಅಭಿಯಾನ ಸಹ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಶಿರಮಗೊಂಡನಹಳ್ಳಿ ದಾವಣಗೆರೆ ತಾ.ಪಂ. ವ್ಯಾಪ್ತಿಯಲ್ಲಿ ಅತಿ ಹೆಚ್ಚು ತೆರಿಗೆ ಸಂಗ್ರಹಿಸಿದೆ.

ಈ ಪಂಚಾಯ್ತಿಯಲ್ಲಿ 53 ಲಕ್ಷ ರೂ. ಗುರಿ ಇದ್ದು, ಈಗಾಗಲೇ 32 ಲಕ್ಷ ರೂ. ತೆರಿಗೆ ಸಂಗ್ರಹವಾಗಿದೆ ಎಂದು ಸಭೆಗೆ ಮಾಹಿತಿ ನೀಡಲಾಯಿತು.

# 9 ರಂದು ದೊಡ್ಡಬಾತಿ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಉದ್ಘಾಟನೆ

ದಾವಣಗೆರೆ,ನ.5-ತಾಲ್ಲೂಕಿನ ದೊಡ್ಡಬಾತಿ ಗ್ರಾಮದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಉದ್ಘಾಟನಾ ಕಾರ್ಯಕ್ರಮವನ್ನು ಇದೇ ದಿನಾಂಕ 9ರಂದು ಹಮ್ಮಿಕೊಳ್ಳಲಾಗಿದೆ.

ಹಿರಿಯ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಹಾಗೂ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ದೇವಸ್ಥಾನದ ಉದ್ಘಾಟನೆ ಮಾಡಲಿದ್ದಾರೆ ಎಂದು ಜಿಲ್ಲಾ ಕಿಸಾನ್ ಕಾಂಗ್ರೆಸ್ ವಿಭಾಗದ ಪ್ರಧಾನ ಕಾರ್ಯದರ್ಶಿ ಬಾತಿ ಶಿವಕುಮಾರ್ ತಿಳಿಸಿದ್ದಾರೆ.

# ನಗರದಲ್ಲಿ ಇಂದಿನಿಂದ ಪಶುಸಂಗೋಪನಾ ಚಟುವಟಿಕೆಗಳ ತರಬೇತಿ

ಇಲ್ಲಿನ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ರೈತರಿಗೆ ಪಶು ಸಂಗೋಪನಾ ಚಟುವಟಿಕೆಗಳ ತರಬೇತಿ ಆಯೋಜಿಸಲಾಗಿದೆ. ಇಂದು ಮತ್ತು 29, 30ರಂದು ಆಧುನಿಕ ಹೈನುಗಾರಿಕೆ ತರಬೇತಿ, ನ.11 ಮತ್ತು 12ರಂದು ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಹಾಗೂ ನ.15 ಮತ್ತು 16ರಂದು ಕೋಳಿ ಸಾಕಾಣಿಕೆ ತರಬೇತಿ ನಡೆಯಲಿದೆ. ಮಾಹಿತಿಗಾಗಿ 08192-233787 ಸಂಪರ್ಕಿಸಿ

## ಪ್ರಶಸ್ತಿ ಪ್ರದಾನ



ಶ್ರೀಮತಿ ಪ್ರೇಮಾ ಅರುಣಾಚಲ ಎನ್. ರೇವಣಕರ್ ಪ್ರತಿಷ್ಠಾನ ದಿಂದ ಶ್ರೀಮತಿ ಗೌರಮ್ಮ ನರಹರಿ ಶೇಟ್ ಸಭಾಂಗಣದಲ್ಲಿ ಇಂದು ನಡೆಯಲಿರುವ ಸಮಾರಂಭದಲ್ಲಿ ನಲ್ಲೂರು ಲಕ್ಷ್ಮಣ್‌ರಾವ್ ನರಹರಿ ರೇವಣಕರ್‌ರವರಿಗೆ 'ಸಾಂಸ್ಕೃತಿಕ ಸಮಾಜ ಸೇವಾ ರತ್ನ'ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಗುವುದು.

# ಹರಿಹರದಲ್ಲಿ ಸರಗಳ್ಳತನದ ಆರೋಪಿ ಬಂಧನ




ದಾವಣಗೆರೆ, ನ.5- ಸರಗಳ್ಳನನ್ನು ಬಂಧಿಸಿರುವ ಪೊಲೀಸರು ಆತನಿಂದ 2.10 ಲಕ್ಷ ರೂ. ಬೆಲೆಯ 28 ಗ್ರಾಂ ಬಂಗಾರದ ಸರಗಳನ್ನು ವಶ ಪಡಿಸಿಕೊಂಡಿದ್ದಾರೆ. ಹರಿಹರ ತಾಲ್ಲೂಕು ಗುಳೇದನಹಳ್ಳಿ ಹನುಮಂತ ಬಂಧಿತ ಆರೋಪಿ.

ಕಳೆದ ಅಕ್ಟೋಬರ್ 29ರಂದು ರಾತ್ರಿ 8.30ರ ವೇಳೆ ಮಲೇಬೆನ್ನೂರು ಠಾಣಾ ವ್ಯಾಪ್ತಿಯ ನೆಹರು ನಗರ ಕ್ಯಾಂಪ್‌ನ ಲಕ್ಷ್ಮಿ ಎಂಬುವರ ಕೊರಳಲ್ಲಿದ್ದ ಸರವನ್ನು ವ್ಯಕ್ತಿಯೊಬ್ಬ ಕಿತ್ತುಕೊಂಡು ಹೋದ ಬಗ್ಗೆ ಪ್ರಕರಣ ದಾಖಲಾಗಿತ್ತು.

ತನಿಖೆ ನಡೆಸಿದ ಪೊಲೀಸರು ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಿದಾಗ 2023ನೇ ಸಾಲಿನ ಕಳ್ಳತನ ಪ್ರಕರಣವೂ ಪತ್ತೆಯಾಗಿದೆ.

ಹರಿಹರ ವೃತ್ತ ನಿರೀಕ್ಷಕ ಸುರೇಶ ಸಗರಿ ಮತ್ತು ಮಲೇಬೆನ್ನೂರು ಪೊಲೀಸ್ ಠಾಣೆ ಪಿ.ಎಸ್.ಐ (ಕಾ.ಸು) ಪ್ರಭು ಡಿ ಕೆಳಗಿನ ಮನಿ, ಪಿ.ಎಸ್.ಐ (ತನಿಖೆ) ಶ್ರೀ ಚಿದಾನಂದಪ್ಪ, ಎ.ಎಸ್.ಐ ಶ್ರೀನಿವಾಸ ಡಿ.ಟಿ, ಮಹಮ್ಮದ್ ಇಲಿಯಾಜ್, ಸಿಬ್ಬಂದಿಯವರಾದ ಮಲ್ಲಿಕಾರ್ಜುನ, ಪ್ರವೀಣ್‌ಪಾಟೀಲ್, ಫೈರೋಜ್, ವೆಂಕಟರಮಣ, ಅಮ್ಜದ್, ಪ್ರದೀಪ್, ಲಕ್ಷ್ಮಣ, ವಿರೇಶ್, ಶಿವಕುಮಾರ್, ರಾಜಪ್ಪ, ಮುರುಳಿ ದರ ರವರ ತಂಡವು ಪ್ರಕರಣ ಭೇದಿಸುವಲ್ಲಿ ಯಶಸ್ವಿಯಾಗಿದೆ.

# ಶಿವನಪಾದ ಕ್ಷೇತ್ರದಲ್ಲಿ ನಾಳೆ ಲಿಂಗೈಕ್ಯ ಶ್ರೀ ಶಿವಾನಂದ ಮಹಾಸ್ವಾಮಿಗಳ ಶ್ರದ್ಧಾಂಜಲಿ

ಶಿವಮೊಗ್ಗ, ನ.5- ಶಿಕಾರಿಪುರ ತಾಲ್ಲೂಕು ಶ್ರೀ ಶಿವನಪಾದ ಕ್ಷೇತ್ರದಲ್ಲಿ ನಾಡಿದ್ದು ದಿನಾಂಕ 7ರ ಗುರುವಾರ ಬೆಳಿಗ್ಗೆ 11.30ಕ್ಕೆ ಇಕ್ಕದ ಮಾರಯ್ಯನ ಮಹಾಮಂಟಪದಲ್ಲಿ ಶ್ರೀ ಶಿವಾನಂದ ಸ್ವಾಮಿಗಳವರ ಶ್ರದ್ಧಾಂಜಲಿ ಸಮಾರಂಭವು ತರಳಬಾಳು ಜಗದ್ಗುರು ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿದೆ.

ಸಮಾರಂಭದ ಅಧ್ಯಕ್ಷತೆಯನ್ನು ಶಿವಾನಂದ ಪ್ರೌಢಶಾಲೆ (ಶಿವಾನಂದ) ಸಲಹಾ ಸಮಿತಿ ಅಧ್ಯಕ್ಷ ಸದಾಶಿವಪ್ಪ ಬಣಕಾರ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಚಿವ ಮಧು ಬಂಗಾರಪ್ಪ, ಶ್ರೀಮತ್ ಸಾಧು ವೀರಶೈವ ಸಂಘದ ಅಧ್ಯಕ್ಷ ಹೆಚ್.ಆರ್. ಬಸವರಾಜಪ್ಪ, ಸಂಸದ ಬಿ.ವೈ. ರಾಘವೇಂದ್ರ ಸೇರಿದಂತೆ, ಅನೇಕ ಗಣ್ಯರು ಆಗಮಿಸಲಿದ್ದಾರೆ.

## ಸರೋಜಮ್ಮ ನಿಧನ



ದಾವಣಗೆರೆ ಸಿಟಿ, ಮೌನೇಶ್ವರ ಬಡಾವಣೆ ವಾಸಿ ಶ್ರೀ ಹೆಚ್.ಎಂ. ಚಂದ್ರಶೇಖರಯ್ಯನವರ ತಾಯಿಯವರಾದ

**ಶ್ರೀಮತಿ ಸರೋಜಮ್ಮ (77)**

ಇವರು ದಿನಾಂಕ 5.11.2024ರ ಮಂಗಳವಾರ ಸಂಜೆ 4.20ಕ್ಕೆ ನಿಧನರಾದರು. ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 06.11.2024ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಹರಿಹರ ತಾಲ್ಲೂಕು ಹಿರೇ ಹಾಲಿವಾಣ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ.: 89715 91983**

## ಜಡಗನಹಳ್ಳಿ ಗೌಡ್ರು ಗುಡ್ಡಪ್ಪ ನಿಧನ



ಹರಿಹರ ತಾಲ್ಲೂಕು ಸಲಗನಹಳ್ಳಿ ಗ್ರಾಮದ ವಾಸಿ ಜಡಗನಹಳ್ಳಿ ಗೌಡ್ರು ನೀಲಪ್ಪ ಇವರ ಪುತ್ರ

**ಜಡಗನಹಳ್ಳಿ ಗೌಡ್ರು ಗುಡ್ಡಪ್ಪ**

ಇವರು ದಿನಾಂಕ 05.11.2024ರ ಮಂಗಳವಾರ ಸಂಜೆ 6.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 6.11.2024ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಸ್ವಗ್ರಾಮವಾದ ಸಲಗನಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ. : 98809 21770, 99800 64709**

## ಶ್ರೀಮತಿ ನಾಗರತ್ನಮ್ಮ ನಿಧನ



ದಾವಣಗೆರೆ ಸಿಟಿ ಪಿ.ಜೆ. ಬಡಾವಣೆ 4ನೇ ಮೇನ್ ವಾಸಿ ದಿ. ನವಲೆ ಮುಕುಂದರಾವ್‌ರವರ (ಇಂಡಿಯನ್ ಕಾಫಿ ಬಾರ್) ಧರ್ಮಪತ್ನಿ ಶ್ರೀಮತಿ ನಾಗರತ್ನಮ್ಮ (80) ಇವರು ದಿನಾಂಕ 5.11.2024ರ ಮಂಗಳವಾರ ಮಧ್ಯಾಹ್ನ 3.20ಕ್ಕೆ ನಿಧನರಾದರು. ಇಬ್ಬರು ಪುತ್ರಿಯರು, ಅಳಿಯಂದಿರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 6.11.2024ರ ಬುಧವಾರ ಬೆಳಿಗ್ಗೆ 10.30ಕ್ಕೆ ನಗರದ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಲಿದೆ.

# ಹೆಚ್.ಡಿ.ಕುಮಾರಸ್ವಾಮಿ ಅವರ ವಿರುದ್ಧ ಬೆದರಿಕೆ ಪ್ರಕರಣ ದಾಖಲು

(1ನೇ ಪುಟದಿಂದ) ದಾಖಲು ಮಾಡಿರುವ ಎಫ್‌ಐಆರ್ ಹಾಸ್ಯಾಸ್ಪದ, ದುರುದ್ದೇಶಪೂರಿತ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಪ್ರತಿಕ್ರಿಯಿಸಿದ್ದಾರೆ.

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ಉಪಚುನಾವಣೆಯ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಪರ ಪ್ರಚಾರ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉಪಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರ ನಮ್ಮ ವಿರುದ್ಧ ದ್ವೇಷ ಸಾಧನೆ ಮಾಡುತ್ತಿದೆ. ಇದಕ್ಕೆ ನ್ಯಾಯಾಲಯದ ಮೂಲಕವೇ ಉತ್ತರ ಕೊಡುತ್ತೇನೆ ಎಂದರು.

ಎಫ್‌ಐಆರ್ ಪ್ರತಿಯಲ್ಲಿರುವ ದೂರಿನ ಸಾರಾಂಶ ಓದಿದ್ದು, ದೂರು ಸಂಪೂರ್ಣ ಹಾಸ್ಯಾಸ್ಪದ ಹಾಗೂ ದುರುದ್ದೇಶಪೂರಿತವಾಗಿದೆ. ದೂರುದಾರರೇ ಹೇಳಿಕೊಂಡಿರುವಂತೆ, ಕುಮಾರಸ್ವಾಮಿ ಅವರು ಮಾಧ್ಯಮಗೋಷ್ಠಿ ಮಾಡಿ ನನ್ನ ವಿರುದ್ಧ ಆರೋಪ ಮಾಡಿದ್ದು ಕ್ರಮ ಕೈಗೊಳ್ಳಿ ಎಂದಿದ್ದಾರೆ. ನಾನು ಅವರ ಬಗ್ಗೆ ತಪ್ಪು ಮಾಹಿತಿ ನೀಡಿದ್ದೇನೆ ಎಂಬುದಾಗಿ ಆರೋಪಿಸಿದ್ದಾರೆ. ಬೇಕಿದ್ದರೆ, ನನ್ನ ಮಾಧ್ಯಮಗೋಷ್ಠಿಯ ವಿಡಿಯೋ ನೋಡಿಕೊಳ್ಳಲಿ ಎಂದರು.

ನಾನು ಪ್ರೆಸ್ ಮೀಟ್ ಮಾಡಿದ್ದಕ್ಕೆ ಎಫ್‌ಐಆರ್ ಹಾಕಿಸಿದ್ದಾರೆ. ಚನ್ನಪಟ್ಟಣ ಕ್ಷೇತ್ರದ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ವಿರುದ್ಧವೂ ಎಫ್‌ಐಆರ್ ಹಾಕಿಸಿದ್ದಾರೆ. ಮುಖ್ಯಕಾರ್ಯದರ್ಶಿಗೆ ದೂರು ಕೊಟ್ಟಿದ್ದಕ್ಕೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ವಿರುದ್ಧವೂ ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಕುಮಾರಸ್ವಾಮಿ ಹೇಳಿದರು. ಅಂದರೆ, ಯಾರೂ, ಯಾರ ವಿರುದ್ಧವೂ ಮಾತನಾಡಬಾರದು, ದೂರು ನೀಡಬಾರದು ಎಂಬ ಕಾನೂನು ಇದೆಯೇ? ನಮ್ಮ ಬಾಯಿ ಮುಚ್ಚಿಸಲು ಇವರಿಂದ ಸಾಧ್ಯವಿಲ್ಲ ಎಂದು ಹೇಳಿದರು.

ಇದು ಷಡ್ಯಂತ್ರ ಹಾಗೂ ಕುತಂತ್ರದ ಭಾಗ. ಚನ್ನಪಟ್ಟಣ ಉಪಚುನಾವಣೆಯಲ್ಲಿ ಮೋಸ, ಕುತಂತ್ರ ನಡೆಯಲ್ಲ ಎಂದು ಗೊತ್ತಾಗುತ್ತಿದ್ದಂತೆ, ಹೊಸ ಕುತಂತ್ರಕ್ಕೆ ಮುಂದಾಗಿದ್ದಾರೆ. ನಮಗೆ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂವಿಧಾನ ಮೇಲೆ ಗೌರವ ಇದೆ. ನನ್ನ ಚನ್ನಪಟ್ಟಣ ಜನರ ಮೇಲೆ ವಿಶ್ವಾಸ ಇದೆ, ಇಂತಹ ನೂರು ಎಫ್‌ಐಆರ್‌ಗಳು ದಾಖಲಾದರೂ ನಾವು ಧೃತಿಗೆಡಲ್ಲ ಎಂದರು.

## ಸಂಕ್ಷಿಪ್ತ ಸುದ್ದಿ

**ದೆಹಲಿ ದೇಶದ ಅತ್ಯಂತ ಮಲಿನ ನಗರ**
ನವದೆಹಲಿ : ಅಕ್ಟೋಬರ್ ತಿಂಗಳಲ್ಲಿ ದೆಹಲಿ ದೇಶದ ಅತ್ಯಂತ ಹೆಚ್ಚಿನ ವಾಯುಮಾಲಿನ್ಯ ಹೊಂದಿದ ನಗರವಾಗಿತ್ತು. ಈ ತಿಂಗಳಲ್ಲಿ ದೆಹಲಿಯಲ್ಲಿ ಪಿಎಂ 2.5 ಮಾಲಿನ್ಯ ಕಣಗಳ ಪ್ರಮಾಣ ಸರಾಸರಿ 111ರಷ್ಟಿತ್ತು ಎಂದು ವರದಿಯೊಂದು ತಿಳಿಸಿದೆ.

**ಗೂಡ್ಸ್ ರೈಲುಗಳ ಅಪಘಾತಕ್ಕೆ ಅಸಮತೋಲನ ಸರಕು ಹೇರಿಕೆ ಪ್ರಮುಖ ಕಾರಣ**
ನವದೆಹಲಿ : ಗೂಡ್ಸ್ ರೈಲುಗಳಲ್ಲಿ ಸರಕು ಹೇರಿಕೆ ಅಸಮತೋಲನವಾಗಿರುವ ಕಾರಣದಿಂದಾಗಿ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿವೆ ಎಂದು ರೈಲ್ವೆ ಮಂಡಳಿ ಅಧ್ಯಕ್ಷ ಸತೀಶ್ ಕುಮಾರ್ ಹೇಳಿದ್ದಾರೆ. ಸರಕುಗಳ ಲೋಡ್ ಹಾಗೂ ಅನ್‌ಲೋಡ್ ಮಾಡುವಾಗ ಸೂಕ್ತ ಪದ್ಧತಿಗಳನ್ನು ಪಾಲಿಸಬೇಕು ಎಂದವರು ರೈಲ್ವೆ ವಲಯಗಳಿಗೆ ಹೇಳಿದ್ದಾರೆ.

**ಗಣಿ ಹಗರಣ, 20 ಕಡೆ ಸಿಬಿಐ ದಾಳಿ**
ನವದೆಹಲಿ : ಜಾರ್ಖಂಡ್ ಗಣಿ ಹಗರಣಕ್ಕೆ ಸಂಬಂಧಿಸಿದಂತೆ ಸಿಬಿಐ ಮೂರು ರಾಜ್ಯಗಳ 20 ಕಡೆಗಳಲ್ಲಿ ದಾಳಿ ನಡೆಸಿದೆ. ಜಾರ್ಖಂಡ್‌ನ ನಿಂಬು ಪಹರ್ ಎಂಬಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸಲಾಗಿದೆ ಎಂದು ಆರೋಪಿಸಲಾಗಿತ್ತು. ಈ ಪ್ರಕರಣದಲ್ಲಿ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸುರೇನ್ ಅವರ ರಾಜಕೀಯ ಆಪ್ತ ಎನ್ನಲಾದ ಪಂಕಜ್ ಮಿಶ್ರ ಅವರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು.

**ಮೋದಿ ಕೋಮುವಾದಿ ಭಾಷಣ ಎಂದು ಸಿಪಿಐ(ಎಂ) ಆರೋಪ**
ನವದೆಹಲಿ : ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಜಾರ್ಖಂಡ್ ವಿಧಾನಸಭಾ ಚುನಾವಣೆಯ ಪ್ರಚಾರದ ವೇಳೆ ಕೋಮುವಾದಿ ಭಾಷಣ ಮಾಡಿದ್ದಾರೆ ಎಂದು ಆರೋಪಿಸಿರುವ ಸಿಪಿಐ(ಎಂ), ಈ ಬಗ್ಗೆ ಚುನಾವಣಾ ಆಯೋಗ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

**ವಕ್ಫ್ ಕಾಯ್ದೆಯಿಂದ ವಿನಾಯಿತಿಗೆ ದಾವೂದಿ ಬೋರಾಗಳ ಒತ್ತಾಯ**
ನವದೆಹಲಿ : ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ವಕ್ಫ್ (ತಿದ್ದುಪಡಿ) ಮಸೂದೆಯಲ್ಲಿ ದಾವೂದಿ ಬೋರಾ ಸಮುದಾಯದ ವಿಶೇಷ ಸ್ಥಾನವನ್ನು ಪರಿಗಣಿಸಿಲ್ಲ. ತಮ್ಮ ಸಮುದಾಯವನ್ನು ವಕ್ಫ್ ಮಂಡಳಿ ವ್ಯಾಪ್ತಿಯಿಂದ ಹೊರಗಿಡಬೇಕು ಎಂದು ಬೋರಾ ಸಮುದಾಯ ಸಂಸದೀಯ ಸಮಿತಿಗೆ ಒತ್ತಾಯಿಸಿದೆ. ಬೋರಾ ಸಮುದಾಯದ ಮುಸ್ಲಿಮರು ಅತಿ ಕಡಿಮೆ ಜನಸಂಖ್ಯೆ ಹೊಂದಿದೆಯಾದರೂ, ಅತ್ಯಂತ ಶ್ರೀಮಂತವಾಗಿದೆ.

**ಉಗ್ರರಿಗೆ ಆಶ್ರಯ ನೀಡುವ ಮನೆಗಳ ನೆಲಸಮ**
ಶ್ರೀನಗರ : ಉಗ್ರರಿಗೆ ಆಶ್ರಯ ನೀಡುವ ಮನೆಗಳನ್ನು ನೆಲಸಮಗೊಳಿಸಲಾಗುವುದು ಎಂದು ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಮಿಶ್ರಾ ಎಚ್ಚರಿಕೆ ನೀಡಿದ್ದಾರೆ. ಉಗ್ರರ ವಿರುದ್ಧ ಜನ ದೃಢವಾಗಿ ನಿಲ್ಲಬೇಕು ಎಂದವರು ಕರೆ ನೀಡಿದ್ದಾರೆ.

**ಜಾತಿಗಣತಿಗೆ ಬದ್ಧ : ರಾಹುಲ್**
ಹೈದರಾಬಾದ್ : ತೆಲಂಗಾಣದಲ್ಲಿ ಜಾತಿಗಣತಿ ನಡೆಸಲು ಬದ್ಧವಾಗಿರುವುದಾಗಿ ಹಾಗೂ ತೆಲಂಗಾಣವನ್ನು ಜಾತಿ ಗಣತಿಯ ಮಾದರಿ ರಾಜ್ಯವಾಗಿ ಮಾಡುವುದಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

**ಚಂಡಮಾರುತದಿಂದ 600 ಕೋಟಿ ರೂ. ಹಾನಿ**
ಭುವನೇಶ್ವರ್ : ಇತ್ತೀಚೆಗೆ ಅಪ್ಪಳಿಸಿದ ದಾನಾ ಚಂಡಮಾರುತದ ಕಾರಣದಿಂದಾಗಿ ರಾಜ್ಯದಲ್ಲಿ 616 ಕೋಟಿ ರೂ. ನಷ್ಟವಾಗಿದೆ ಎಂದು ಒಡಿಶಾದ ಕಂದಾಯ ಮತ್ತು ವಿಕೋಪ ನಿರ್ವಹಣಾ ಸಚಿವ ಸುರೇಶ್ ಪೂಜಾರಿ ತಿಳಿಸಿದ್ದಾರೆ.

**ಸುಪ್ರೀಂ ಕೋರ್ಟ್ ಮಾಜಿ ನ್ಯಾಯಮೂರ್ತಿ ಅಯ್ಯರ್‌ಗೆ ಸಿಜೆಐ ಟೀಕೆ**
ನವದೆಹಲಿ : ಸುಪ್ರೀಂ ಕೋರ್ಟ್ ಮಾಜಿ ನ್ಯಾಯಮೂರ್ತಿ ವಿ.ಆರ್. ಕೃಷ್ಣ ಅಯ್ಯರ್ ಅವರು ಕಠಿಣ ಆರ್ಥಿಕ ಸಿದ್ಧಾಂತದ ನಿಲುವು ಹೊಂದಿದ್ದರು. ಅವರು ಖಾಸಗಿ ಸಂಪನ್ಮೂಲಗಳ ಮೇಲೆ ಸರ್ಕಾರದ ಹೆಚ್ಚಿನ ನಿಯಂತ್ರಣಕ್ಕೆ ಪ್ರಸ್ತಾಪಿಸಿದ್ದರು ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಟೀಕಿಸಿದ್ದಾರೆ. ಎಲ್ಲಾ ಖಾಸಗಿ ಆಸ್ತಿಗಳನ್ನು ಸರ್ಕಾರಗಳು ವಶಪಡಿಸಿಕೊಳ್ಳುವ ಕುರಿತ ಪ್ರಕರಣದ ತೀರ್ಪು ನೀಡುವಾಗ ಚಂದ್ರಚೂಡ್ ಅವರು ಈ ಟಿಪ್ಪಣಿ ಮಾಡಿದ್ದಾರೆ.

# ಮೂಷ್ಟೂರು ಗ್ರಾಮದಲ್ಲಿ ಇಂದಿನಿಂದ ಆಂಜನೇಯ ದೇವರ ಮೂರ್ತಿ ಪ್ರತಿಷ್ಠಾಪನೆ



ರಾಣೇಬೆನ್ನೂರು ತಾಲ್ಲೂಕಿನ ಮುಷ್ಟೂರು ಗ್ರಾಮದಲ್ಲಿ ಇಂದಿನಿಂದ ಇದೇ ದಿನಾಂಕ 9 ರವರೆಗೆ ಶ್ರೀ ಆಂಜನೇಯ ಸ್ವಾಮಿಯ ನೂತನ ದೇವಸ್ಥಾನದ ಉದ್ಘಾಟನೆ ಮತ್ತು ಶ್ರೀ ಆಂಜನೇಯ ಸ್ವಾಮಿ ನೂತನ ಶಿಲಾ ಮೂರ್ತಿ ಪ್ರತಿಷ್ಠಾಪನೆ ಹಾಗೂ ಭರಮ ದೇವರ ಕಳಸಾರೋಹಣ ಕಾರ್ಯಕ್ರಮಗಳು ಜರುಗಲಿವೆ.

ಇಂದು ಮಧ್ಯಾಹ್ನ 2 ಗಂಟೆಗೆ ನಗರದ ಕೆಇಬಿ ಗಣೇಶ ದೇವಸ್ಥಾನದ ಬಳಿಯಿಂದ ಆಂಜನೇಯ ಸ್ವಾಮಿಯ ಶಿಲಾಮೂರ್ತಿಯ ಮೆರವಣಿಗೆಯು ಪ್ರಮುಖ ಬೀದಿಗಳಲ್ಲಿ ಹಾಯ್ದು ಮುಷ್ಟೂರ್ ಗ್ರಾಮವನ್ನು ತಲುಪಲಿದೆ.

ನಾಳೆ ಗುರುವಾರ ಬೆಳಗ್ಗೆ 7 ಗಂಟೆಗೆ ಕರಗಲ್ಲು ಸ್ಥಾಪನೆ, ಸಂಜೆ ಶಿಲಾಮೂರ್ತಿಯ ಧಾನ್ಯದಿವಾಸ ನಡೆಯಲಿದೆ. ನ. 8ರಂದು ಮೂರ್ತಿಗೆ ಮಂಗಳ, ಬೆಳ್ಳಿ, ಬಂಗಾರ, ಹವಳ, ಮುತ್ತು, ರತ್ನಗಳು ಧನದೊಂದಿಗೆ ಗದ್ದುಗೆ ಸ್ಥಾಪನೆ ಮಾಡಲಾಗುವುದು.

ಅಂಗನ್ಯಾಸ ಹವನ್ಯಾಸ, ಮಹಾನ್ಯಾಸ, ತತ್ತ್ವನ್ಯಾಸ, ರುದ್ರಾಭಿಷೇಕ, ಹೋಮ ನಡೆಯಲಿದೆ. ಅನಂತರ ನೂತನ ದೇವಸ್ಥಾನದ ಉದ್ಘಾಟನೆ, ಮೂರ್ತಿಯ ಪ್ರತಿಷ್ಠಾಪನೆ ಜರುಗುವುದು. ಜೊತೆಗೆ ಭರಮದೇವರ ಕಳಸಾರೋಹಣ ನಡೆಯುವುದು.

ಅನಂತರ ಮಧ್ಯಾಹ್ನ 12 ಗಂಟೆಗೆ ರಟ್ಟಿಹಳ್ಳಿಯ ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಮತ್ತು ಲಿಂಗದಹಳ್ಳಿ ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಧರ್ಮಸಭೆ ಹಾಗೂ ಸನ್ಮಾನ ಸಮಾರಂಭವು ಜರುಗಲಿದೆ. ದೇವಸ್ಥಾನ ಸಮಿತಿಯ ಅಧ್ಯಕ್ಷ ಚಂದ್ರಗೌಡ ಸಿ ಪಾಟೀಲ್ ಅಧ್ಯಕ್ಷತೆ ವಹಿಸುವರು.

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕ ಪ್ರಕಾಶ್ ಕೋಳಿವಾಡ, ಮಾಜಿ ಸಚಿವ ಆರ್. ಶಂಕರ್ ಸೇರಿದಂತೆ ಮಂಜುನಾಥ್ ಓಲೇಕಾರ್, ಎಸ್.ಎಸ್. ರಾಮಲಿಂಗಣ್ಣನವರ, ಸಂತೋಷ್ ಕುಮಾರ್ ಪಾಟೀಲ, ಪರಮೇಶಪ್ಪ ಗೂಳಣ್ಣನವರ, ಮಂಜುನಾಥ ಹಲ್ಲದ್ದರ, ರಾಜುಗೌಡ ಪಾಟೀಲ್, ಬಸಮ್ಮ ತಳವಾರ, ಚಂದ್ರವ್ವ ಹಿರೇಮಠದ ಮತ್ತಿತರರು ಆಗಮಿಸುವರು. ಆನಂತರ ಅನ್ನ ಸಂತರ್ಪಣೆ ನಡೆಯುವುದು.

ನಾಲ್ಕು ದಿನಗಳ ಕಾಲ ಪ್ರತಿದಿನ ಸಂಜೆ 7 ಘಂಟೆಯಿಂದ ಪುಟ್ಟರಾಜ ಗವಾಯಿಗಳವರ ಶಿಷ್ಯ ಬಸವ ಶಾಸ್ತ್ರಿ ಇರಕಲ್ ರವರಿಂದ ಕೀರ್ತನ ಕಾರ್ಯಕ್ರಮವು ಜರುಗಲಿದೆ.

# ಸಂಕಷ್ಟದಲ್ಲಿ ವಜ್ರೋದ್ಯಮ, ಕಾರ್ಮಿಕರಿಗೆ ನೆರವಿಗೆ ಆಗ್ರಹ

ನವದೆಹಲಿ, ನ. 5 - ಕಳೆದ 18 ತಿಂಗಳಲ್ಲಿ ಗುಜರಾತ್‌ನ ಸೂರತ್‌ನಲ್ಲಿ ವಜ್ರದ ಕಾರ್ಮಿಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಮಾರುಕಟ್ಟೆಯ ಏರಿಳಿತಗಳಿಂದ ರಕ್ಷಿಸಲು ಕಾರ್ಮಿಕರನ್ನು ನೋಂದಾಯಿಸಿಕೊಳ್ಳಬೇಕು ಹಾಗೂ ಅವರಿಗೆ ಹಣಕಾಸು ನೆರವು ನೀಡಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಉದ್ಯೋಗ ನಷ್ಟ ಹಾಗೂ ಕಾರ್ಖಾನೆಗಳು ಬಂದ್ ಆಗುತ್ತಿರುವ ಕಾರಣದಿಂದಾಗಿ ಸೂರತ್ ವಜ್ರ ವಲಯದ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಳೆದ 18 ತಿಂಗಳಲ್ಲಿ 71 ಕಾರ್ಮಿಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದಾರೆ.

ಸೂರತ್ ವಜ್ರೋದ್ಯಮ ಅತ್ಯಂತ ಸುದೀರ್ಘವಾದ ಇತಿಹಾಸ ಹೊಂದಿದೆ. ಇದು ವಿಶ್ವದ ವಜ್ರ ವ್ಯಾಪಾರಿ ಕೇಂದ್ರಗಳಲ್ಲಿ ಪ್ರಮುಖ ತಾಣವಾಗಿದೆ ಎಂದು ರಮೇಶ್ ತಿಳಿಸಿದ್ದಾರೆ.

ಗುಜರಾತ್ ವಜ್ರೋದ್ಯಮದಲ್ಲಿ ಸುಮಾರು 25 ಲಕ್ಷ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಸೂರತ್ ಒಂದರಲ್ಲೇ ಸುಮಾರು 10 ಲಕ್ಷ ಕಾರ್ಮಿಕರಿದ್ದಾರೆ ಎಂಬ ಅಂದಾಜಿದೆ ಎಂದವರು ತಿಳಿಸಿದ್ದಾರೆ.

ಪ್ರಯೋಗಾಲಯದಲ್ಲಿ ಉತ್ಪಾದಿಸುವ ವಜ್ರಗಳ ಕಾರಣದಿಂದಾಗಿ ವಿಶ್ವದಾದ್ಯಂತ ವಜ್ರೋದ್ಯಮದ ಮೇಲೆ ಪರಿಣಾಮವಾಗಿದೆ. ಈ ಕಾರಣದಿಂದಾಗಿ ಸೂರತ್‌ನಲ್ಲಿ ಕಳೆದ ಫೆಬ್ರವರಿಯಿಂದ ಜೂನ್ ನಡುವೆ 15 ಸಾವಿರ ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ ಎಂದು ರಮೇಶ್ ಹೇಳಿದ್ದಾರೆ. ವಜ್ರ ವಲಯದ ಬಿಕ್ಕಟ್ಟು ಹಣಕಾಸು ಹಾಗೂ ಮಾನಸಿಕ ಒತ್ತಡಕ್ಕೆ ಕಾರಣವಾಗಿದೆ.

ಈ ಕಾರ್ಮಿಕರು ಖಾಯಂ ಉದ್ಯೋಗ ಹೊಂದಿಲ್ಲ. ಹೀಗಾಗಿ ಸರ್ಕಾರದ ಬಳಿ ಇವರ ಬಗ್ಗೆ ಸೂಕ್ತ ದಾಖಲೆಯಾಗಲೀ ಇಲ್ಲವೇ ಇವರಿಗಾಗಿ ಯೋಜನೆಗಳಾಗಲೀ ಇಲ್ಲ. ಈ ವಲಯದ ಕಾರ್ಮಿಕರನ್ನು ಗುರುತಿಸಿ ಅವರಿಗೆ ನೆರವು ನೀಡಬೇಕಿದೆ ಎಂದು ರಮೇಶ್ ಆಗ್ರಹಿಸಿದ್ದಾರೆ.

# ಮನುಷ್ಯನ ಅಭಿವೃದ್ಧಿಗೆ ಶಿಕ್ಷಣ ಪ್ರಮುಖ ಅಸ್ತ್ರ

## ಅರಸಿಕೇರಿಯಲ್ಲಿ ಜರುಗಿದ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಕೋಲಶಾಂತೇಶ್ವರ ಶ್ರೀ



ಹರಪನಹಳ್ಳಿ, ನ. 5- ಮನುಷ್ಯನ ಸರ್ವಾಂಗೀಣ ಅಭಿವೃದ್ಧಿಗೆ ಶಿಕ್ಷಣ ಪ್ರಮುಖ ಅಸ್ತ್ರವಾಗಿದೆ ಎಂದು ಅರಸಿಕೇರಿ ಕೋಲಶಾಂತೇಶ್ವರ ವಿರಕ್ತ ಮಠದ ಶ್ರೀ ಕೋಲಶಾಂತೇಶ್ವರ ದೇಶೀಕೇಂದ್ರ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಅರಸಿಕೇರಿಯಲ್ಲಿ ಹಂಪಿ ಕನ್ನಡ ವಿಶ್ವ ವಿದ್ಯಾಲಯದ ಮಾನವ ಶಾಸ್ತ್ರ ವಿಭಾಗ ಹಾಗೂ ವೈ.ಅಣ್ಣಪ್ಪ ಪದವಿ ಮಹಾವಿದ್ಯಾಲಯ ಅರಸಿಕೇರಿ ಇವರ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ಕಲ್ಯಾಣ ಕರ್ನಾಟಕದ ಹಿಂದುಳಿದ ವರ್ಗಗಳ ಸಮಸ್ಯೆ ಮತ್ತು ಸವಾಲುಗಳು' ಎಂಬ ವಿಷಯ ಕುರಿತ ರಾಷ್ಟ್ರಮಟ್ಟದ ವಿಚಾರ ಸಂಕಿರಣದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಇಂದಿನ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಂಕಲ್ಪ ಅಗತ್ಯ. ಮೌಲ್ಯಯುತ ಉತ್ತಮ ಶಿಕ್ಷಣದೊಂದಿಗೆ ಅಭಿವೃದ್ಧಿಯಲ್ಲಿ ತೊಡಗಿಕೊಳ್ಳಬೇಕು. ಸರ್ಕಾರದ ಸೌಲಭ್ಯಗಳು ಜನಸಾಮಾನ್ಯರಿಗೆ ತಲುಪಬೇಕು. ಆದರೆ ಸರ್ಕಾರದ ಕೆಲ ಯೋಜನೆಗಳಿಂದ ಇಂದು ರೈತರು ಶ್ರಮಿಕರಾಗದೇ ಸೋಮಾರಿಗಳಾಗಿದ್ದಾರೆ ಎಂದರು.

ಹಂಪಿಯ ಕನ್ನಡ ವಿಶ್ವ ವಿಶ್ವವಿದ್ಯಾಲಯದ ಕುಲಪತಿ ಡಾ.ಪರಮಶಿವಮೂರ್ತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಸರ್ಕಾರ ಸಾಕಷ್ಟು ಅನುದಾನ ಒದಗಿಸುತ್ತಿದೆ. ಅಧಿಕಾರಿಗಳು ಅರ್ಹರನ್ನು ಗುರುತಿಸಿ ಯೋಜನೆ ತಲುಪಿಸಬೇಕು. ಜೊತೆಗೆ ಸಾರ್ವಜನಿಕರು ಎಚ್ಚೆತ್ತು ಸದ್ಬಳಕೆ ಮಾಡಿಕೊಳ್ಳಬೇಕು. ಮೈಸೂರು ಭಾಗದ ಅಭಿವೃದ್ಧಿಗೆ ಶೈಕ್ಷಣಿಕ ಪ್ರಗತಿ ಪ್ರಮುಖ ಕಾರಣವಾಗಿದೆ ಎಂದರು.

ಅಕ್ಷರ ಸೀಡ್ಸ್, ಮಾಲೀಕ ಎನ್.ಕೊಟ್ರೇಶ ಮಾತನಾಡಿ, ವಿಚಾರ ಸಂಕಿರಣಗಳು ಅಧಿಕಾರಿಗಳು, ಜನ ಪ್ರತಿನಿಧಿಗಳಿಗೆ ಅಗತ್ಯವಿದೆ. ರಾಷ್ಟ್ರಮಟ್ಟದ ಈ ಕಾರ್ಯಕ್ರಮಕ್ಕೆ ಶಾಸಕರು, ಸಂಸದರು ಭಾಗಿಯಾಗದಿರುವುದು ವಿಪರ್ಯಾಸ. ಕಲ್ಯಾಣ ಕರ್ನಾಟಕದ ಪ್ರದೇಶಗಳಿಗಾಗಿ ಸರ್ಕಾರ ವಿಶೇಷ ಅನುದಾನ ನೀಡಿದರೂ ಕೂಡ ಜನಸಾಮಾನ್ಯರ ಪರಿಸ್ಥಿತಿ ಸುಧಾರಿಸಿಲ್ಲ. ಶಿಕ್ಷಣ ಹುಲಿ ಹಾಲು ಇದ್ದ ಹಾಗೆ ಶಿಕ್ಷಣವನ್ನು ಕಷ್ಟಪಟ್ಟು ಪಡೆದುಕೊಂಡರೆ ಮುಖ್ಯವಾಹಿನಿಗೆ ಬರಲು ಸಾಧ್ಯ ಎಂದರು.

ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ ವಿಜೇತ ಡಾ.ಎಸ್. ಆರ್ ಕೇಶವ ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಕಾರ್ಯಕ್ರಮಗಳು ಜರುಗಬೇಕು. ರಾಮರಾಜ್ಯದ ಕನಸು ಸರ್ಕಾರದ್ದು. ಸರ್ಕಾರ ಸಾಕಷ್ಟು ಅನುದಾನ ಹಂಚಿಕೆ ಮಾಡಿದರೂ ಹಿಂದುಳಿದ ವರ್ಗದ ಜನರ ಅಭಿವೃದ್ಧಿಯಾಗಿಲ್ಲ, ಯಾವುದೇ ಪ್ರದೇಶ ಅಭಿವೃದ್ಧಿಯಾಗಬೇಕಾದರೆ ಪ್ರಮುಖವಾಗಿ ರಸ್ತೆ, ಕುಡಿಯುವ ನೀರು, ಶಿಕ್ಷಣ ಪ್ರಮುಖವಾಗಿದೆ ಎಂದರು.

ಹಂಪಿ ಕನ್ನಡ ವಿಶ್ವ ವಿಶ್ವವಿದ್ಯಾಲಯದ ಮಾನವ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ತಾರಿಹಳ್ಳಿ ಹನುಮಂತಪ್ಪ, ವೈ. ಅಣ್ಣಪ್ಪ ಪದವಿ ಮಹಾ ವಿದ್ಯಾಲಯದ ಪ್ರಾಚಾರ್ಯ ಡಾ.ಎಂ.ಸುರೇಶ, ಪ್ರಾಧ್ಯಾಪಕ ಡಾ.ಹಾದಿಮನಿ ರಮೇಶ, ಡಾ. ಹರಾಳು ಬುಳ್ಳಪ್ಪ, ಡಾ. ಎಂ.ಭೀಮಪ್ಪ, ಶ್ರೀಧರ ಬಾರ್ಕಿ, ಪ್ರಶಾಂತ್ ಪಾಟೀಲ್, ವಿನಾಯಕ ಸೇರಿದಂತೆ ಇತರರು ಇದ್ದರು.

# ನಗರದಲ್ಲಿ ಇಂದು ಶ್ರೀಶೈಲ ಪೀಠದ ಉಭಯ ಜಗದ್ಗುರುಗಳ ಸ್ಮರಣೋತ್ಸವ





ಶ್ರೀಶೈಲ ಪೀಠದ ಹಿರಿಯ ಜಗದ್ಗುರು ಲಿಂ. ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರ 38ನೇ ವರ್ಷದ ಸ್ಮರಣೋತ್ಸವ ಮತ್ತು ಶ್ರೀಶೈಲ ಪೀಠದ ಹಿರಿಯ ಜಗದ್ಗುರು ಲಿಂ. ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರ 13ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮವು ಶ್ರೀ ಡಾ. ಸದ್ಯೋಜಾತ ಸ್ವಾಮೀಜಿ ಹಿರೇಮಠದಲ್ಲಿ ನಡೆಯುತ್ತಿದ್ದು, ಇಂದಿನ ಕಾರ್ಯಕ್ರಮದ ವಿವರ :

ಕಾರ್ಯಕ್ರಮಗಳ ದಿವ್ಯ ಸಾನ್ನಿಧ್ಯವನ್ನು ಉಜ್ಜಿನಿ ಪೀಠದ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶೀಕೇಂದ್ರ ಶಿವಾಚಾರ್ಯ ಭಗವತ್ಪಾದರು ಮತ್ತು ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ವಹಿಸುವರು.

ಇಂದು ಸಂಜೆ 6 ಗಂಟೆಗೆ ನಡೆಯುವ ಧರ್ಮ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಮಹಾಂತ ಶಿವಾಚಾರ್ಯ ಸ್ವಾಮೀಜಿ (ತೊಗರ್ಸಿ) ಮತ್ತು ಶ್ರೀ ಡಾ. ಒಡೆಯರ್ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ (ಬಸವನ ಬಾಗೇವಾಡಿ) ಸಮ್ಮುಖ ವಹಿಸುವರು.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಕಾರ್ಯಕಾರಿ ಮಂಡಳಿ ಅಧ್ಯಕ್ಷ ಎ. ಹೆಚ್. ಕುಬೇರಪ್ಪ, ಉದ್ಯಮಿ ಹನುಮಂತಪ್ಪ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಶ್ರೀ ಪಶುಪತಿ ಶಿವಾನಂದ ಶಿವಾಚಾರ್ಯ ಸ್ವಾಮೀಜಿ (ದಿಂಡದಹಳ್ಳಿ ಮಠ) ನಾಂದಿ ನುಡಿಗಳನ್ನಾಡಲಿದ್ದು, ಬಳ್ಳಾರಿಯ ಚಿಕ್ಕಾಟೆ ಮಠದ ವೀರಭದ್ರಯ್ಯ ಅವರು ಸಮಾಜ ಮತ್ತು ಪಂಚಪೀಠಗಳ ಮಹತ್ವ ಕುರಿತಂತೆ ಉಪನ್ಯಾಸ ನೀಡುವರು.

**ಗುರು ರಕ್ಷೆ** : ಸಕ್ಕರೆ ಕಾಯಿಲೆ ತಜ್ಞ ಡಾ. ವಿನಯ್‌ಕುಮಾರ್ ಸ್ವಾಮಿ, ವರ್ತಕ ಎನ್.ಕೆ. ಚನ್ನವೀರಪ್ಪ, ಶ್ರೀಮತಿ ಸಾವಿತ್ರಮ್ಮ ಮತ್ತು ವಿ. ಹನಿಮಂತ ಶ್ರೇಷ್ಠಿ, ಶ್ರೀಮತಿ ಬಸಮ್ಮ ಕೆ.ಜಿ. ಹಾಲಪ್ಪ (ಧೂಳೆಹೊಳೆ), ಶ್ರೀಮತಿ ಶ್ಯಾಮಲ ಮತ್ತು ಎನ್.ಎಂ. ಹಾಲಸ್ವಾಮಿ, ಶ್ರೀಮತಿ ಶೋಭಾ ಮತ್ತು ಎ.ಎಂ. ಪ್ರಕಾಶ್ (ಬಸವೇಶ್ವರ ಮುದ್ರಣ), ಟಿ.ಎನ್. ನಾಗರಾಜ್ (ದೀಟೂರು).

ಎನ್.ಎಂ. ತಿಪ್ಪೇಸ್ವಾಮಿ, ಎಸ್.ಎಂ. ರುದ್ರಮುನಿ, ಶಿವಾನಂದ ಭಾನುವಳ್ಳಿ (ಹರಿಹರ), ನಿರಂಜನ ದೇವರಮನೆ (ಚಿತ್ರದುರ್ಗ), ಎನ್.ಹೆಚ್. ಪಟೇಲ್ (ಹರಿಹರ), ಪಿ.ಜಿ. ರಾಜಶೇಖರಯ್ಯ ಅವರುಗಳು ಜಗದ್ಗುರುಗಳಿಗೆ ಗೌರವ ಮಾಲಾರ್ಪಣೆ ಮಾಡಲಿದ್ದು, ವಿಧೂಷಿ ಸಂಗೀತ ರಾಘವೇಂದ್ರ ವೆರ್ಣೇಕರ್ ಸಂಗೀತ ಸೇವೆ ಒದಗಿಸುವರು.

ರಜತ ಮೂರ್ತಿಗಳ ಮೆರವಣಿಗೆ : ಇಂದು ಬೆಳಿಗ್ಗೆ 8 ಗಂಟೆಗೆ ಕರ್ತೃ ಗದ್ದುಗೆಗೆ ರುದ್ರಾಭಿಷೇಕ ಪೂಜೆ, ಹೂವಿನ ಅಲಂಕಾರ, ದೀಕ್ಷಾ ಕಾರ್ಯಕ್ರಮ ನಡೆಯಲಿದೆ. ನಂತರ ಲಿಂ. ಉಭಯ ಜಗದ್ಗುರುಗಳ ರಜತ ಮೂರ್ತಿಗಳ ಮೆರವಣಿಗೆಯು ರಾಜಬೀದಿಗಳಲ್ಲಿ ಜರುಗಲಿದೆ.

# ಹುಬ್ಬಳ್ಳಿಯಿಂದ ಸಲ್ಮಾನ್ ಖಾನ್‌ಗೆ ಜೀವ ಬೆದರಿಕೆ

ಮುಂಬೈ, ನ. 5 - ಬಾಲಿವುಡ್ ನಟ ಸಲ್ಮಾನ್ ಖಾನ್ ಅವರಿಗೆ ಮತ್ತೆ ಜೀವ ಬೆದರಿಕೆ ಒಡ್ಡಲಾಗಿದೆ. ಜೈಲಿನಲ್ಲಿರುವ ಭೂಗತ ಲಾರೆನ್ಸ್ ಬಿಷ್ಣೋಯಿ ಸಹೋದರನ ಹೆಸರಿನಲ್ಲಿ ನಟ ಸಲ್ಮಾನ್ ಖಾನ್ ಅವರಿಗೆ ಐದು ಕೋಟಿ ರೂ. ಬೆದರಿಕೆ ಹಾಕಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕದ ಹುಬ್ಬಳ್ಳಿ ಮೂಲದ ವ್ಯಕ್ತಿ ಈ ಬೆದರಿಕೆ ಹಾಕಿದ್ದಾನೆ ಎಂದು ಶಂಕಿಸಲಾಗಿದೆ. ಪೊಲೀಸ್ ತಂಡ ಸ್ಥಳಕ್ಕೆ ತಲುಪಿದೆಯಾದರು ಇನ್ನು ಯಾರನ್ನೂ ಬಂಧಿಸಿಲ್ಲ.

1998ರಲ್ಲಿ ಕೃಷ್ಣಮೃಗ ಬೇಟೆಯಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಲ್ಮಾನ್ ಖಾನ್ ಅವರಿಗೆ ಬೆದರಿಕೆ ಹಾಕುವ ಮೆಸೇಜ್ ಅನ್ನು ಮುಂಬೈ ಸಂಚಾರಿ ಪೊಲೀಸರ ನಿಯಂತ್ರಣ ಕೋಣೆಗೆ ಕಳಿಸಲಾಗಿದೆ.

ಬಿಷ್ಣೋಯಿ ಸಮುದಾಯದ ದೇವಾಲಯಕ್ಕೆ ತೆರಳಿ ಸಲ್ಮಾನ್ ಖಾನ್ ಕ್ಷಮೆ ಯಾಚಿಸಬೇಕು. ಇಲ್ಲವೇ 5 ಕೋಟಿ ರೂ. ನೀಡಬೇಕು. ಇಲ್ಲವಾದಲ್ಲಿ ಹತ್ಯೆ ಮಾಡಲಾಗುವುದು ಎಂದು ಬೆದರಿಕೆಯ ಮೆಸೇಜ್‌ನಲ್ಲಿ ಹೇಳಲಾಗಿತ್ತು. ಈ ಬಗ್ಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸಲ್ಮಾನ್ ಖಾನ್ ಅವರಿಗೆ ಈ ಹಿಂದೆಯೂ ಬೆದರಿಕೆಯ ಮೆಸೇಜ್‌ಗಳು ಬಂದಿದ್ದವು.

# ಕೊಲೆ ನಡೆದ 24 ಗಂಟೆಯೊಳಗೆ ನಾಲ್ವರು ಆರೋಪಿಗಳ ಬಂಧನ



ದಾವಣಗೆರೆ, ನ.5- ಕೊಲೆ ನಡೆದ ಇಪ್ಪತ್ನಾಲ್ಕು ಗಂಟೆಯೊಳಗೆ ಇಲ್ಲಿನ ಅಜಾದ್ ನಗರ ಪೊಲೀಸರು ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

ನಗರದ ಇಮಾಂ ನಗರದ 2ನೇ ಕ್ರಾಸ್ ನಿವಾಸಿ ದುಗ್ಗೇಶಿ (32) ಎಂಬಾತನನ್ನು ಕಳೆದ ನ.4ರಂದು ಯಾರೋ ಕೊಲೆ ಮಾಡಿ ಶವವನ್ನು ಮೃತ ವ್ಯಕ್ತಿಯ ಮನೆಯಲ್ಲಿ ತಂದು ಹಾಕಿ ಹೋಗಿದ್ದಾರೆಂದು ಅಜಾದ್ ನಗರ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಪ್ರಕರಣದ ತನಿಖೆ ನಡೆಸಿದ ಪೊಲೀಸರು, ಬಂಬೂ ಬಜಾರ್ ರಸ್ತೆ, 1ನೇ ಕ್ರಾಸ್ ವಾಸಿ ಗಣೇಶ್ (24) ಹಾಗೂ ಹಳೇ ಚಿಕ್ಕನಹಳ್ಳಿ ಹರಳಯ್ಯ ನಗರ ಅನಿಲ್ (18), ಶಿವಕುಮಾರ್ (25) ಹಾಗೂ ಭಾರತ್ ಕಾಲೋನಿಯ ಮಾರುತಿ (24) ಎಂಬುವವರನ್ನು ಬಂಧಿಸಿದ್ದಾರೆ.

ಮೃತನ ಸಂಬಂಧಿಯಾದ ಆರೋಪಿ ಗಣೇಶನು ಮೃತ ದುಗ್ಗೇಶ್ ಹೆಸರಲ್ಲಿ ದಾವಣಗೆರೆ ಆಕ್ಸಿಸ್ ಬ್ಯಾಂಕ್‌ನಲ್ಲಿ ಇನ್ಸೂರೆನ್ಸ್ ಬಾಂಡ್ ಮಾಡಿಸಿದ್ದು , ಸದರಿ ವ್ಯಕ್ತಿಯನ್ನು ಕೊಲೆ ಮಾಡಿದರೆ ಬಾಂಡ್ ಮೊತ್ತ 40 ಲಕ್ಷ ರೂ ಹಣ ಬರುತ್ತದೆ ಎಂಬ ದುರಾಸೆಯಿಂದ ತನ್ನ ಸ್ನೇಹಿತರ ಜೊತೆ ಸೇರಿ ಉಸಿರುಗಟ್ಟಿಸಿ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ.

ಆಜಾದ್ ನಗರ ಪೊಲೀಸ್ ಠಾಣೆಯ ಪಿಎಸ್‌ಐ ಇಮ್ಮಿಯಾಜ್ ಹಾಗೂ ಸಿಬ್ಬಂದಿಗಳಾದ ನರೇಶ್ ಎ.ಪಿ., ಮಂಜುನಾಥ ನಾಯ್ಕ್, ಕೃಷ್ಣ ನಂದ್ಯಾಲ್, ವೆಂಕಟೇಶ್ ಜಿ ಆರ್ , ಗುಗ್ಗರಿ ಲೋಕೇಶ್, ಖಾಜಾ ಹುಸೇನ್, ಸಲವುದ್ದೀನ್ , ಮಹಾಂತೇಶ್ ಕೆಳಗಿನಮನಿ ಮತ್ತು ಜಿಲ್ಲಾ ಪೊಲೀಸ್ ಕಚೇರಿಯ ಸಿಬ್ಬಂದಿಗಳಾದ ರಾಮಚಂದ್ರ ಜಾಧವ್, ರಾಘವೇಂದ್ರ, ಶಾಂತರಾಜ್ ಇವರುಗಳು ಆರೋಪಿ ಪತ್ತೆ ಕಾರ್ಯದಲ್ಲಿದ್ದರು.

# ವಾರಣಾಸಿ : ಕೊಲೆ ಪ್ರಕರಣದಲ್ಲಿ ಜಾಮೀನು ಪಡೆದು ಪತ್ನಿ, ಮೂವರು ಮಕ್ಕಳ ಹತ್ಯೆ

ವಾರಣಾಸಿ, ನ. 5 - ಕೊಲೆ ಪ್ರಕರಣದಲ್ಲಿ ಜಾಮೀನು ಪಡೆದಿದ್ದ ವ್ಯಕ್ತಿಯೋರ್ವ ತನ್ನ ಪತ್ನಿ ಹಾಗೂ ಮೂವರು ಮಕ್ಕಳನ್ನು ಗುಂಡಿಟ್ಟು ಹತ್ಯೆ ಮಾಡಿದ ಘಟನೆ ಉತ್ತರ ಪ್ರದೇಶದ ವಾರಣಾಸಿಯ ಭೇಲುಪುರ ಪ್ರದೇಶದಲ್ಲಿ ನಡೆದಿದೆ. ನಂತರ ಆರೋಪಿ ರಾಜೇಂದ್ರ ಗುಪ್ತ ಪರಾರಿಯಾಗಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ. ಸೋಮವಾರ ತಡರಾತ್ರಿ ಈ ಘಟನೆ ನಡೆದಿದೆ. ರಾಜೇಂದ್ರ ಅವರ ಪತ್ನಿ ನೀತು ಗುಪ್ತ ಹಾಗೂ ಮಕ್ಕಳಾದ ನವನೇಂದ್ರ, ಸುಬೇಂದ್ರ ಹಾಗೂ ಮಗಳು ಗೌರಂಗಿ ಅವರು ನಿದ್ರೆ ಮಾಡುತ್ತಿರುವಾಗ ಗುಂಡಿಟ್ಟು ಹತ್ಯೆ ಮಾಡಲಾಗಿದೆ. 1997ರಿಂದಲೂ ರಾಜೇಂದ್ರ ವಿರುದ್ಧ ಹತ್ಯೆ ಪ್ರಕರಣ ಬಾಕಿ ಇತ್ತು. ಆತನಿಗೆ ಜಾಮೀನು ನೀಡಲಾಗಿತ್ತು. ನಂತರ ಆತ ತಲೆಮರೆಸಿಕೊಂಡಿದ್ದ ಎಂದು ಪೊಲೀಸರು ಹೇಳಿದ್ದಾರೆ.

# ಭಾರತ್ ಬ್ರಾಂಡ್ ಎರಡನೇ ಹಂತದ ಯೋಜನೆಗೆ ಚಾಲನೆ

ನವದೆಹಲಿ, ನ. 5 - ಕೇಂದ್ರ ಸರ್ಕಾರ ಭಾರತ ಬ್ರಾಂಡ್ ಹೆಸರಿನಲ್ಲಿ ಗೋದಿ ಹಿಟ್ಟು ಹಾಗೂ ಅಕ್ಕಿ ಮಾರುವ ಎರಡನೇ ಹಂತದ ಯೋಜನೆ ಆರಂಭಿಸಿದೆ.

ಈ ಯೋಜನೆಯ ಅನ್ವಯ ಗೋದಿ ಹಿಟ್ಟನ್ನು ಕೆಜಿಗೆ 30 ರೂ. ಹಾಗೂ ಅಕ್ಕಿಯನ್ನು ಕೆಜಿಗೆ 34 ರೂ.ಗಳಂತೆ ಮಾರಾಟ ಮಾಡಲಾಗುವುದು. ಎನ್.ಸಿ.ಸಿ.ಎಫ್., ನಫೆಡ್ ಹಾಗೂ ಕೇಂದ್ರೀಯ ಭಂಡಾರ ಮತ್ತು ಇ-ವಾಣಿಜ್ಯ ತಾಣಗಳ ಮೂಲಕ ಮಾರಾಟ ಮಾಡಲಾಗುವುದು. ಬೆಲೆ ಏರಿಕೆ ತಡೆಗಟ್ಟುವ ಸಲುವಾಗಿ ಈ ತಾತ್ಕಾಲಿಕ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಕೇಂದ್ರ ಆಹಾರ ಸಚಿವ ಪ್ರಹ್ಲಾದ್ ಜೋಶಿ ತಿಳಿಸಿದ್ದಾರೆ. ಎರಡನೇ ಹಂತದ ಯೋಜನೆಗಾಗಿ ಕೇಂದ್ರ ಸರ್ಕಾರ 3.69 ಲಕ್ಷ ಟನ್ ಗೋದಿ ಹಾಗೂ 2.91 ಲಕ್ಷ ಟನ್ ಅಕ್ಕಿಯನ್ನು ಭಾರತೀಯ ಆಹಾರ ನಿಗಮದ ಮೂಲಕ ಬಿಡುಗಡೆ ಮಾಡಿದೆ.


**ಮಹಾನಗರ ಪಾಲಿಕೆ ಕಾರ್ಯಾಲಯ,**
ರೈಲ್ವೇ ನಿಲ್ದಾಣ ಎದುರು, ಪಿ. ಬಿ. ರಸ್ತೆ, ದಾವಣಗೆರೆ – 577002,
PH: 08192-252899, 232008, FAX:08192-252899

ನಂ : ದಾಮಪಾ/ಆಶಾ/GFC/ಸಿಆರ್-01/2024-25 ದಿನಾಂಕ: 05/11/2024

**ಸಾರ್ವಜನಿಕ ಪ್ರಕಟಣೆ**

ದಾವಣಗೆರೆ ಮಹಾನಗರ ಪಾಲಿಕೆಯು ಕೇಂದ್ರ ಸರ್ಕಾರದ ಸ್ವಚ್ಛ ಭಾರತ್ ಮಿಷನ್ ಯೋಜನೆಯ ಪ್ರಮುಖ ಗುರಿಗಳಾದ ಮನೆ-ಮನೆ ತ್ಯಾಜ್ಯ ಸಂಗ್ರಹಣೆ, ವಿಂಗಡಣೆ ಹಾಗೂ ವೈಜ್ಞಾನಿಕ ವಿಲೇವಾರಿಯಲ್ಲಿ ಪ್ರಗತಿ ಸಾಧಿಸಿರುತ್ತದೆ. ಹಾಗೆಯೇ ಸಾರ್ವಜನಿಕ ಸ್ಥಳಗಳ ಸ್ವಚ್ಛತೆ, ಪ್ಲಾಸ್ಟಿಕ್ ನಿಷೇಧ, ನಗರ ಸೌಂದರೀಕರಣ, ಸಾರ್ವಜನಿಕ ದೂರುಗಳ ಸಮರ್ಪಕ ನಿರ್ವಹಣೆಯನ್ನು ಸಾರ್ವಜನಿಕರ ಸಹಕಾರದೊಂದಿಗೆ ನಿಯಮಿತವಾಗಿ ಕೈಗೊಳ್ಳಲಾಗುತ್ತಿದೆ. ಪಾಲಿಕೆಯು ಸ್ವಚ್ಛಭಾರತ್ ಮಿಷನ್ ಯೋಜನೆಯ GFC 3 Star (Garbage free City 3 Star) ಪ್ರಮಾಣೀಕರಣಕ್ಕೆ ಅವಶ್ಯವಿರುವ ಎಲ್ಲಾ ಮಾನದಂಡಗಳನ್ನು ಅನುಸರಿಸಿರುವ ಕಾರಣ ನಗರವನ್ನು GFC 3 Star ಎಂದು ಘೋಷಿಸುವ ಸಲುವಾಗಿ ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳಿಂದ ಸಲಹೆ/ ಆಕ್ಷೇಪಣೆಗಳು ಇದ್ದಲ್ಲಿ ಆರೋಗ್ಯ ಶಾಖೆ, ಮಹಾನಗರ ಪಾಲಿಕೆ ಕಾರ್ಯಾಲಯ, ರೈಲ್ವೆ ನಿಲ್ದಾಣ ಎದುರು, ಪಿ.ಬಿ. ರಸ್ತೆ ದಾವಣಗೆರೆ ಈ ಕಛೇರಿಗೆ ಲಿಖಿತ ರೂಪದಲ್ಲಿ ದಿನಾಂಕ: 15/11/2024 ರೊಳಗಾಗಿ ಸಲ್ಲಿಸಲು ಕೋರಿದೆ.

**ಆಯುಕ್ತರು**
**ಮಹಾನಗರ ಪಾಲಿಕೆ, ದಾವಣಗೆರೆ.**

**ಮಾನ್ಯ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ**

**ಎಫ್.ಡಿ.ಪಿ. ನಂ. 26/2024**

ಅರ್ಜಿದಾರರು : ಶ್ರೀಮತಿ ಪಕ್ಕೀರಮ್ಮ, ಪೌತಿ ವಾರಸುದಾರರು ಷಣ್ಮುಖಪ್ಪ ಮತ್ತು ಇತರರು - ವಿರುದ್ಧ- ಎದುರುದಾರರು : ಕನ್ನವರ ಯಲ್ಲಪ್ಪ, ಪೌತಿ ವಾರಸುದಾರರು ಶ್ರೀಮತಿ ಮಲ್ಲಮ್ಮ ಮತ್ತು ಇತರರು. ಎದುರುದಾರರು/ನೋಟಿಸ್‌ದಾರರು : 3) ಶ್ರೀಮತಿ ಮಂಜುಳಮ್ಮ ಕೋಂ ಲೇಟ್ ಹನುಮಂತಪ್ಪ, ವಯಸ್ಸು 45 ವರ್ಷ, ವಾಸ : ಲಿಂಗದಹಳ್ಳಿ ಗ್ರಾಮ, ರಾಣೇಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ, 6) ಕುಃ ಅಂಬಿಕ ಬಿನ್ ಲೇಟ್ ಹನುಮಂತಪ್ಪ ವಯಸ್ಸು ಸುಮಾರು 39 ವರ್ಷ, ವಾಸ : ಡೋರ್ ನಂ. 3371/1ಎ, 1ನೇ ಮುಖ್ಯ ರಸ್ತೆ, ಶ್ರೀಮತಿ ಗೌರಮ್ಮ ನರಹರಿ ಶೇಟ್ ಸಭಾ ಭವನ ಹಿಂಭಾಗ, ವಿನೋಬನಗರ, ದಾವಣಗೆರೆ. 8) ಶ್ರೀಮತಿ ಸೌಮ್ಯ ಕೋಂ ಲೇಟ್ ಕನ್ನವರ ಪರಸಪ್ಪ, ವಯಸ್ಸು ಸುಮಾರು 40 ವರ್ಷ, 9) ಕುಃ ಸಪ್ನ ಬಿನ್ ಲೇಟ್ ಕನ್ನವರ ಪರಸಪ್ಪ, ವಯಸ್ಸು ಸುಮಾರು 37 ವರ್ಷ. 10) ಕುಃ ಸೌಜನ್ಯ ಬಿನ್ ಲೇಟ್ ಕನ್ನವರ ಪರಸಪ್ಪ, ವಯಸ್ಸು ಸುಮಾರು 40 ವರ್ಷ.12) ಚಿ. ಸಂತೋಷ್ ಬಿನ್ ಲೇಟ್ ಕನ್ನವರ ಪರಸಪ್ಪ, ವಯಸ್ಸು ಸುಮಾರು 31 ವರ್ಷ, ಎದುರುದಾರರು ನಂ. 8 ರಿಂದ 10 ರವರ ವಾಸ : ಪ್ರಗತಿ ಗ್ರಾಮೀಣ ಬ್ಯಾಂಕ್ (ಆರ್.ಓ) ಶಂಕರ ಲೀಲಾ ಗ್ಯಾಸ್ ಎದುರು, ಎಂಸಿಸಿ 'ಬಿ' ಬ್ಲಾಕ್, ದಾವಣಗೆರೆ

**ಸಿಪಿಸಿ ಆದೇಶ 5 ನಿಯಮ 20 ರ ಅಡಿಯಲ್ಲಿ ಎದುರುದಾರ ನಂ. 3, 6, 8, 9, 10, 12 ರವರ ವಿರುದ್ಧ ನೀಡಲಾದ ಪ್ರಕಟಣಾ ನೋಟಿಸ್**

ಮೇಲ್ಕಂಡ ಪ್ರಕರಣವನ್ನು ಅರ್ಜಿದಾರರು ಎದುರುದಾರರ ವಿರುದ್ಧ ದಾವಣಗೆರೆಯ ಮಾನ್ಯ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯವು ಅಸಲು ದಾವಾ ನಂ. 94/2023 ರಲ್ಲಿ ದಿನಾಂಕ : 22.04.2019 ರಂದು ಮಾಡಿರುವ ಜಡ್ಜ್ ಮೆಂಟ್ ಮತ್ತು ಡಿಕ್ರಿಯ ಪ್ರಕಾರ ಅಂತಿಮ ಆದೇಶಕ್ಕೆ ಮಾನ್ಯ ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ನೀವು ಎದುರುದಾರ ನಂ. 3, 6, 8, 9, 10, 12 ರವರಾಗಿದ್ದು, ನ್ಯಾಯಾಲಯವು ನಿಮ್ಮ ವಿರುದ್ಧ ನ್ಯಾಯಾಲಯದಿಂದ ಸಮನ್ಸ್ ಅನ್ನು ನೋಂದಾಯಿತ ಅಂಚೆಯ ಮೂಲಕ ಕಳಿಸಿದ್ದರೂ ಸಹಾ ಅವು ನಿಮಗೆ ಜಾರಿಯಾಗಿರುವುದಿಲ್ಲ. ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ : 6.12.2024 ರಂದು ಬೆಳಿಗ್ಗೆ 11 ಗಂಟೆಗೆ ಮುದ್ದತ್ತು ನಿಗದಿಯಾಗಿದ್ದು, ಆ ದಿನ ನೀವು ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ. ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ, ದಿನಾಂಕ : 5.11.2024 ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು
**(ಕೆ.ಹೆಚ್. ಧನಂಜಯ)**
ದಾವಣಗೆರೆ , ದಿನಾಂಕ : 28.10.2024
**ಮೊ : 99804 37238**

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು , ಮಾನ್ಯ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

**ಎನ್.ಪರಶುರಾಮಪ್ಪ,**
ಬಿ.ಎಲ್.ಎಲ್.ಬಿ ವಕೀಲರು
**ಡೋರ್ ನಂ..682/24, 6ನೇ ಮೇನ್, 6ನೇ ಕ್ರಾಸ್. ನಿಟುವಳ್ಳಿ ಹೊಸ ಬಡಾವಣೆ, ದಾವಣಗೆರೆ ಮೊ:9740267222**

**ಸಾರ್ವಜನಿಕ ಪ್ರಕಟಣೆ** ದಿನಾಂಕ : 05.11.2024

ನನ್ನ ಕಕ್ಷಿದಾರರಾದ ಎಂ.ಎನ್.ನಾಗರಾಜ್ ಬಿನ್ ಎಂ.ಆರ್.ನಾರಾಯಣಪ್ಪ ಹಾಗೂ ಶ್ರೀಮತಿ ಎಲ್.ಎ.ಜಯಶ್ರೀ ಕೋಂ ಎಂ.ಎನ್.ನಾಗರಾಜ್, ಈರ್ವರ ವಾಸ : ಇ–93, 7ನೇ ಎ–ಕ್ರಾಸ್, ಮಾನ್ಯತಾ ರೆಸಿಡೆನ್ಸಿ, ಮಾನ್ಯತಾ ಟೆಕ್ ಪಾರ್ಕ್, ರಾಚೇನಹಳ್ಳಿ, ತಣಿಸಂದ್ರ, ಅರೇಬಿಕ್ ಕಾಲೇಜ್ ಹತ್ತಿರ, ಬೆಂಗಳೂರು ಇವರು ನೀಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ :– ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ದಾವಣಗೆರೆ ಸಿಟಿ, ಶ್ರೀ ಎಸ್.ನಿಜಲಿಂಗಪ್ಪ ಬಡಾವಣೆ, 3ನೇ ಮೇನ್, 3ನೇ ಕ್ರಾಸ್, ಮನೆ ನಂಬರ್ 250 ಸುವರ್ಣ ನಿಲಯದಲ್ಲಿ ವಾಸವಾಗಿರುವ ಶ್ರೀ ಟಿ.ಎಸ್.ಕುಮಾರ ಸ್ವಾಮಿಬಿನ್ ಹೆಚ್.ವಿ.ಸುಬ್ಬಣ್ಣ ಶೆಟ್ಟಿ ಇವರು ಈ ಹಿಂದೆ ದಿನಾಂಕ: 28.11.2014 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಕ್ರಯಕ್ಕೆ ಪಡೆದಿದ್ದು, ಸದರಿ ಸ್ವತ್ತು ಹಾಲಿ ಸದರಿಯವರ ಹೆಸರಿಗೆ ಖಾತೆ ಇದ್ದು, ಅವರ ಸಂಪೂರ್ಣ ಹಕ್ಕುದಾರಿ ಸ್ವಾಧೀನಾನುಭವದಲ್ಲಿರುತ್ತದೆ. ಸದರಿಯವರಿಂದ ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ನಮ್ಮ ಕಕ್ಷಿದಾರರು ಜಂಟಿಯಾಗಿ ಖರೀದಿಸಲು ಇಚ್ಛಿಸಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಸದರಿಯವರ ವಾರಸುದಾರರದಾಗಲೀ ಅಥವಾ ಇನ್ನಾರದ್ದೇ ಆಗಲೀ ತಂಟೆ ತಕರಾರು, ವಗ್ಯೆರೆಗಳು ಇದ್ದಲ್ಲಿ ಈ ಸಾರ್ವಜನಿಕ ನೋಟೀಸ್ ಪ್ರಕಟಣೆಯಾದ ಐದು ದಿವಸದ ಒಳಗಾಗಿ ನಮ್ಮ ಕಕ್ಷಿದಾರರಿಗಾಗಲೀ ಅಥವಾ ಮೇಲ್ಕಂಡ ನಮ್ಮ ಕಛೇರಿಗಾಗಲೀ ಬಂದು ಸಂಪರ್ಕಿಸತಕ್ಕದ್ದು. ಇಲ್ಲವಾದಲ್ಲಿ ನಮ್ಮ ಕಕ್ಷಿದಾರರು ಸದರಿ ಸ್ವತ್ತನ್ನು ಖರೀದಿಸಿ ತಮ್ಮ ಹೆಸರಿಗೆ ನೋಂದಣಿ ಮಾಡಿಸಿ ಕೊಳ್ಳುವವರಿರುತ್ತಾರೆ. ಮುಂದೆ ಬರಬಹುದಾದ ಯಾವುದೇ ತಂಟೆ ತಕರಾರು, ತೊಂದರೆಗಳಿಗೆ ನಮ್ಮ ಕಕ್ಷಿದಾರರು ಜವಾಬ್ದಾರರಾಗಿರುವುದಿಲ್ಲವೆಂದು ಈ ಸಾರ್ವಜನಿಕ ಪ್ರಕಟಣೆ ನೀಡಿರುತ್ತದೆ.

**– ಷೆಡ್ಯೂಲ್ –**

ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ವರ ಕಛೇರಿಯ ವ್ಯಾಪ್ತಿಗೆ ಒಳಪಟ್ಟ, ದಾವಣಗೆರೆ ಸಿಟಿ, 4ನೇ ವಾರ್ಡು, 6ನೇ ಡಿವಿಜನ್, ಬಂಬೂ ಬಜಾರ್ ಹಿಂಭಾಗದ ರಸ್ತೆ (ಆರ್.ಎಂ.ಸಿ. ಲಿಂಕ್ ರಸ್ತೆ ಯಿಂದ ಮಾರ್ಕೆಟ್‌ಗೆ ಹೋಗುವ ರಸ್ತೆಯಲ್ಲಿ ಬರತಕ್ಕ) ಮುನ್ಸಿಪಲ್ ಹಳೇ ಡೋರ್ ನಂ.96/1ಎ, 96/1ಬಿ, 96/2 ಮತ್ತು 97, ಅಳತೆ : $\frac{324+321}{2} \times \frac{108+109}{2}$ ಅಡಿ ಉಳ್ಳ ಪೂರಾ ನಿವೇಶನದ ಪೈಕಿ ಪಶ್ಚಿಮ ಭಾಗದ ದಕ್ಷಿಣ ದಿಕ್ಕಿನ ಕಡೆಗೆ ಬರತಕ್ಕ ಸ್ವತ್ತಿನ ಹಳೇ ಡೋರ್ ನಂ.97, ಮಹಾನಗರ ಪಾಲಿಕೆಯ ಚಾಲ್ತಿ ಡೋರ್ ನಂ.97/ಎ. ಇದರ ಅಳತೆಃ ಪೂರ್ವ– ಪಶ್ಚಿಮ : 137 ಅಡಿ, ಉತ್ತರ– ದಕ್ಷಿಣ : 54 1/2 ಅಡಿ ಉಳ್ಳ ಪೂರಾ ನಿವೇಶನದ ಪೈಕಿ ಉತ್ತರ ಭಾಗದ ಕಡೆಗೆ ಬರುವ ಸೈಟಿನ ಅಳತೆ : ಪೂರ್ವ– ಪಶ್ಚಿಮ : 137 ಅಡಿ, ಉತ್ತರ– ದಕ್ಷಿಣ : 27 1/4 ಅಡಿ ಉಳ್ಳದ್ದರಲ್ಲಿ ಕಟ್ಟಿರುವ ಆರ್.ಸಿ.ಸಿ ಬಿಲ್ಡಿಂಗ್, ಇದಕ್ಕೆ ಚಕ್ಕುಬಂದಿ – ಪೂರ್ವಕ್ಕೆ : ವಿ.ಆರ್.ಎಲ್. ಅಂಡ್ ಕಂಪನಿ ಇವರ ಸ್ವತ್ತು, ಪಶ್ಚಿಮಕ್ಕೆ: 30 ಅಡಿ ಅಗಲದ ಖಾಸಗಿ ರಸ್ತೆ, ಉತ್ತರಕ್ಕೆ ಎಸ್.ಜಿ.ಶ್ರೀಧರ್ ಬಿನ್ ಜಗನ್ನಾಥರಾವ್ ಇವರ ಬಾಬು ಸ್ವತ್ತು, ದಕ್ಷಿಣಕ್ಕೆ : ಇದೇ ಡೋರ್ ನಂಬರ್ ಪೈಕಿ ಟಿ.ಎಸ್. ಚಂದ್ರಮೋಹನ ಶೆಟ್ಟಿ ಬಿನ್ ಹೆಚ್.ವಿ.ಸುಬ್ಬಣ್ಣ ಶೆಟ್ಟಿ ಇವರ ಅರ್ಧ ಭಾಗದ ನಿವೇಶನ, ಈ ಮಧ್ಯದ ಸ್ವತ್ತು ಒಂದು. ಸದರಿ ಸ್ವತ್ತು ದಾವಣಗೆರೆ ನಗರ ಭೂ ಮಾಪನ ಕಛೇರಿಯ ವಿಭಾಗ ಸಂಖ್ಯೆ: 2. ಸಿಟಿ ಸರ್ವೆ ನಂ.2655/3 ರಲ್ಲಿ ಬರತಕ್ಕ ಸ್ವತ್ತಾಗಿರುತ್ತದೆ.

**ಕಕ್ಷಿದಾರರ ಪರ ವಕೀಲರು** **ಮೊ:9448233296,8971820636**

**ಎನ್.ಪರಶುರಾಮಪ್ಪ,**
ಬಿ.ಎಲ್.ಎಲ್.ಬಿ ವಕೀಲರು
**ಡೋರ್ ನಂ..682/24, 6ನೇ ಮೇನ್, 6ನೇ ಕ್ರಾಸ್. ನಿಟುವಳ್ಳಿ ಹೊಸ ಬಡಾವಣೆ, ದಾವಣಗೆರೆ ಮೊ:9740267222**

**ಸಾರ್ವಜನಿಕ ಪ್ರಕಟಣೆ** ದಿನಾಂಕ : 05.11.2024

ನನ್ನ ಕಕ್ಷಿದಾರರಾದ ಎಂ.ಎನ್.ನಾಗರಾಜ್ ಬಿನ್ ಎಂ.ಆರ್.ನಾರಾಯಣಪ್ಪ ಹಾಗೂ ಶ್ರೀಮತಿ ಎಲ್.ಎ.ಜಯಶ್ರೀ ಕೋಂ ಎಂ.ಎನ್.ನಾಗರಾಜ್, ಈರ್ವರ ವಾಸ : ಇ–93, 7ನೇ ಎ–ಕ್ರಾಸ್, ಮಾನ್ಯತಾ ರೆಸಿಡೆನ್ಸಿ, ಮಾನ್ಯತಾ ಟೆಕ್ ಪಾರ್ಕ್, ರಾಚೇನಹಳ್ಳಿ, ತಣಿಸಂದ್ರ, ಅರೇಬಿಕ್ ಕಾಲೇಜ್ ಹತ್ತಿರ, ಬೆಂಗಳೂರು ಇವರು ನೀಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ :– ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ದಾವಣಗೆರೆ ಸಿಟಿ, ಚೌಕಿಪೇಟೆ, 1ನೇ ಕ್ರಾಸ್, ಮನೆ ನಂ.5/304–2 ರಲ್ಲಿ ವಾಸವಾಗಿರುವ ಶ್ರೀ ಟಿ.ಎಸ್. ಚಂದ್ರಮೋಹನ ಶೆಟ್ಟಿ ಬಿನ್ ಹೆಚ್.ವಿ.ಸುಬ್ಬಣ್ಣ ಶೆಟ್ಟಿ ಇವರು ಈ ಹಿಂದೆ ದಿನಾಂಕಃ 28.11.2014 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಕ್ರಯಕ್ಕೆ ಪಡೆದಿದ್ದು, ಸದರಿ ಸ್ವತ್ತು ಹಾಲಿ ಸದರಿಯವರ ಹೆಸರಿಗೆ ಖಾತೆ ಇದ್ದು, ಅವರ ಸಂಪೂರ್ಣ ಹಕ್ಕುದಾರಿ ಸ್ವಾಧೀನಾನುಭವದಲ್ಲಿರುತ್ತದೆ. ಸದರಿಯವರಿಂದ ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ನಮ್ಮ ಕಕ್ಷಿದಾರರು ಜಂಟಿಯಾಗಿ ಖರೀದಿಸಲು ಇಚ್ಛಿಸಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಸದರಿಯವರ ವಾರಸುದಾರರದಾಗಲೀ ಅಥವಾ ಇನ್ನಾರದ್ದೇ ಆಗಲೀ ತಂಟೆ ತಕರಾರು, ವಗ್ಯೆರೆಗಳು ಇದ್ದಲ್ಲಿ ಈ ಸಾರ್ವಜನಿಕ ನೋಟೀಸ್ ಪ್ರಕಟಣೆಯಾದ ಐದು ದಿವಸದ ಒಳಗಾಗಿ ನಮ್ಮ ಕಕ್ಷಿದಾರರಿಗಾಗಲೀ ಅಥವಾ ಮೇಲ್ಕಂಡ ನಮ್ಮ ಕಛೇರಿಗಾಗಲೀ ಬಂದು ಸಂಪರ್ಕಿಸತಕ್ಕದ್ದು. ಇಲ್ಲವಾದಲ್ಲಿ ನಮ್ಮ ಕಕ್ಷಿದಾರರು ಸದರಿ ಸ್ವತ್ತನ್ನು ಖರೀದಿಸಿ ತಮ್ಮ ಹೆಸರಿಗೆ ನೋಂದಣಿ ಮಾಡಿಸಿ ಕೊಳ್ಳುವವರಿರುತ್ತಾರೆ. ಮುಂದೆ ಬರಬಹುದಾದ ಯಾವುದೇ ತಂಟೆ ತಕರಾರು, ತೊಂದರೆಗಳಿಗೆ ನಮ್ಮ ಕಕ್ಷಿದಾರರು ಜವಾಬ್ದಾರರಾಗಿರುವುದಿಲ್ಲವೆಂದು ಈ ಸಾರ್ವಜನಿಕ ಪ್ರಕಟಣೆ ನೀಡಿರುತ್ತದೆ.

**–: ಷೆಡ್ಯೂಲ್:–**

ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್ ರವರ ಕಛೇರಿಯ ವ್ಯಾಪ್ತಿಗೆ ಒಳಪಟ್ಟ, ದಾವಣಗೆರೆ ಸಿಟಿ, 4ನೇ ವಾರ್ಡು, 6ನೇ ಡಿವಿಜನ್, ಬಂಬೂ ಬಜಾರ್ ಹಿಂಭಾಗದ ರಸ್ತೆ (ಆರ್.ಎಂ.ಸಿ. ಲಿಂಕ್ ರಸ್ತೆ ಯಿಂದ ಮಾರ್ಕೆಟ್‌ಗೆ ಹೋಗುವ ರಸ್ತೆಯಲ್ಲಿ ಬರತಕ್ಕ) ಮುನ್ಸಿಪಲ್ ಹಳೇ ಡೋರ್ ನಂ.96/1ಎ, 96/1ಬಿ, 96/2 ಮತ್ತು 97, ಅಳತೆ : $\frac{324+321}{2} \times \frac{108+109}{2}$ ಅಡಿ ಉಳ್ಳ ಪೂರಾ ನಿವೇಶನದ ಪೈಕಿ ಪಶ್ಚಿಮ ಭಾಗದ ದಕ್ಷಿಣ ದಿಕ್ಕಿನ ಕಡೆಗೆ ಬರತಕ್ಕ ಸ್ವತ್ತಿನ ಹಳೇ ಡೋರ್ ನಂ.97, ಮಹಾನಗರ ಪಾಲಿಕೆಯ ಚಾಲ್ತಿ ಡೋರ್ ನಂ.97/ಎ, ಇದರ ಅಳತೆಃ ಪೂರ್ವ– ಪಶ್ಚಿಮ :: : 137 ಅಡಿ, ಉತ್ತರ– ದಕ್ಷಿಣ : 54 1/4 ಅಡಿ ಉಳ್ಳ ಪೂರಾ ನಿವೇಶನದ ಪೈಕಿ ದಕ್ಷಿಣ ಭಾಗದ ಕಡೆಗೆ ಬರುವ ಸೈಟಿನ ಅಳತೆ : ಪೂರ್ವ– ಪಶ್ಚಿಮ : 137 ಅಡಿ, ಉತ್ತರ– ದಕ್ಷಿಣ : 27 1/4 ಅಡಿ ಉಳ್ಳದ್ದರಲ್ಲಿ ಕಟ್ಟಿರುವ ಆರ್.ಸಿ.ಸಿ ಬಿಲ್ಡಿಂಗ್, ಇದಕ್ಕೆ ಚಕ್ಕುಬಂದಿ – ಪೂರ್ವಕ್ಕೆ : ವಿ.ಆರ್.ಎಲ್. ಅಂಡ್ ಕಂಪನಿ ಇವರ ಸ್ವತ್ತು, ಪಶ್ಚಿಮಕ್ಕೆ: 30 ಅಡಿ ಅಗಲದ ಖಾಸಗಿ ರಸ್ತೆ, ಉತ್ತರಕ್ಕೆ : ಇದೇ ಡೋರ್ ನಂಬರ್ ಪೈಕಿ ಶ್ರೀ ಟಿ.ಎಸ್.ಕುಮಾರ ಸ್ವಾಮಿಬಿನ್ ಹೆಚ್.ವಿ.ಸುಬ್ಬಣ್ಣ ಶೆಟ್ಟಿ ಇವರ ಆಅರ್ಧ ಭಾಗದ ನಿವೇಶನ, ದಕ್ಷಿಣಕ್ಕೆ : ಶ್ರೀ ಬಸವೇಶ್ವರಿ ಜಿನ್ನಿಂಗ್ ಫ್ಯಾಕ್ಟರಿ ಇವರು ವಿಂಗಡಿಸಿರುವ ನಿವೇಶನಗಳು, ಈ ಮಧ್ಯದ ಸ್ವತ್ತು ಒಂದು. ಸದರಿ ಸ್ವತ್ತು ದಾವಣಗೆರೆ ನಗರ ಭೂ ಮಾಪನ ಕಛೇರಿಯ ವಿಭಾಗ ಸಂಖ್ಯೆ: 2, ಸಿಟಿ ಸರ್ವೆ ನಂ.2655/3 ರಲ್ಲಿ ಬರತಕ್ಕ ಸ್ವತ್ತಾಗಿರುತ್ತದೆ.

**ಕಕ್ಷಿದಾರರ ಪರ ವಕೀಲರು** **ಮೊ:9448233296,8971820636**

# ನಾವು ನವೆಂಬರ್ ಕನ್ನಡಿಗರಾಗದೆ ನಂಬರ್ ಒನ್ ಕನ್ನಡಿಗರಾಗೋಣ

ಇಂದು ನಾವೆಲ್ಲರೂ ಸೇರಿ ಸಡಗರ ಸಂಭ್ರಮದಿಂದ ಕರ್ನಾಟಕ ರಾಜ್ಯೋತ್ಸವ ಆಚರಿಸುತ್ತಿದ್ದೇವೆ, ಸ್ನೇಹಿತರೇ ಇಂದಿನ ಜಾಗತೀಕರಣ, ಆಧುನೀಕರಣ, ಖಾಸಗೀಕರಣ, ಉದಾರೀಕರಣಗಳ ಕಪಿ ಮುಷ್ಠಿಯಿಂದ ನಮ್ಮ ನಾಡು ನಲುಗುತ್ತಿದೆ, ಜಾಗತೀಕರಣದ ಈಗಿನ ಜಾಗರಣೆಯಲ್ಲಿ ಎಲ್ಲವೂ ಸರಕಾಗುತ್ತಿರುವ ಈ ಹೊತ್ತಿನಲ್ಲಿ ವೆಬ್, ಇಂಟರ್ನೆಟ್, ಫೇಸ್ಬುಕ್, ಟ್ವಿಟರ್, ಎಸ್‌ಎಂಎಸ್, ವಾಟ್ಸಾಪ್, ಈ-ಲರ್ನಿಂಗ್, ಇ-ರೀಡಿಂಗ್, ಇ,-ರೈಟಿಂಗ್ಗಳೇ ಮುಂಚೂಣಿಯಲ್ಲಿರುವ ಈ ಸಂದರ್ಭದಲ್ಲೂ ಕನ್ನಡ ಸಾಹಿತ್ಯ-ಸಂಸ್ಕೃತಿಯನ್ನು ಉಳಿಸಿ-ಬೆಳೆಸಲು ನಾವೆಲ್ಲರೂ ಒಂದಾಗಿ ಸೇರಿ ಈ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸುತ್ತಿರುವುದು ತುಂಬಾ ಸಂತೋಷದ ವಿಷಯ.

**ಕರ್ನಾಟಕ ಏಕೀಕರಣ :** 22 ವಿವಿಧ ಆಳ್ವಿಕೆಯಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡದ ಪ್ರದೇಶಗಳು 1956 ನವೆಂಬರ್ ಒಂದರಂದು ಒಗ್ಗೂಡಿ ವಿಶಾಲ ಕರ್ನಾಟಕ ಉದಯವಾಯಿತು, ಮದ್ರಾಸ್ ಕರ್ನಾಟಕ, ಮುಂಬೈ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಕೊಡಗು ಕನ್ನಡ, ಮೈಸೂರು ಕನ್ನಡ, ಪ್ರಭೇದಗಳನ್ನು ಒಂದಾಗಿಸುವ ಸಲುವಾಗಿ ಕನ್ನಡ ಕುಲ ಪುರೋಹಿತ ಆಲೂರು ವೆಂಕಟರಾಯರು 1905ರಲ್ಲಿ ಕರ್ನಾಟಕ ಏಕೀಕರಣ ಚಳುವಳಿಯನ್ನು ಆರಂಭಿಸಿದರು, ನಂತರ ಧಾರವಾಡದ ವಿದ್ಯಾವರ್ಧಕ ಸಂಘ, ಸಿದ್ದಪ್ಪ ಕಂಬಳಿ ಹಾಗೂ ಎಸ್.ಆರ್. ದೇಶಪಾಂಡೆಯವರ ಮುಖಂಡತ್ವದಲ್ಲಿ ಕರ್ನಾಟಕ ಏಕೀಕರಣ ಚಳುವಳಿ ತುಂಬಾ ಮಹತ್ವ ಪಡೆದು ನಾಡಿನಾದ್ಯಂತ ಆರಂಭವಾಯಿತು, ಆಲೂರು ವೆಂಕಟರಾಯರು ಧೀರೋದಾತ್ತ ಲೇಖನಗಳನ್ನು 'ವಾಗ್ಭೂಷಣ'ಪತ್ರಿಕೆಯ ಮೂಲಕ ಜನ ಜಾಗೃತಿ ಗೊಳಿಸಿದರು, ಕನ್ನಡ ನಾಡಿನ ಕವಿಗಳು, ಲೇಖಕರು, ವಿದ್ವಾಂಸರು, ಸಮಾಜ ಸುಧಾರಕರು ನಡೆಸಿದ ಹೋರಾಟದ ಫಲವಾಗಿ 1956 ನವೆಂಬರ್ ಒಂದರಂದು 'ಮೈಸೂರ್ ರಾಜ್ಯ' ಎಂಬ ನಾಮಕರಣದೊಂದಿಗೆ ಕರ್ನಾಟಕ ಉದಯವಾಯಿತು.

ಯಾವುದೇ ಭಾಷೆಗೆ ಆಡಳಿತ, ವಿದ್ಯಾಭ್ಯಾಸ, ಧಾರ್ಮಿಕ ಆಚರಣೆ ಮುಂತಾದ ಸ್ಥಾನವಿಲ್ಲದಿದ್ದರೆ, ಅಂತಹ ಭಾಷೆ ಬಹುಮುಖವಾಗಿ ಬೆಳೆಯಲು ಸಾಧ್ಯವಾಗುವುದಿಲ್ಲ, ಸ್ವಾತಂತ್ರ್ಯ ಪೂರ್ವದಲ್ಲಿ ಕನ್ನಡವು ಮದರಾಸು, ಮುಂಬೈ, ಹೈದರಾಬಾದ್ ಹಾಗೂ ಇತರೆ ಕೆಲವು ಪ್ರಾಂತ್ಯಗಳಲ್ಲಿ ಅಲ್ಪಸಂಖ್ಯಾತ ಭಾಷೆಯಾಗಿತ್ತು, ಅಂತಹ ಪರಿಸ್ಥಿತಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಪತ್ರಿಕೆಗಳು, ಕನ್ನಡ ಚಳವಳಿ ಮುಂದುವರೆಸಿ ಸ್ವಾತಂತ್ರ್ಯ ಹೋರಾಟದ ಜೊತೆಯಲ್ಲಿ ಏಕೀಕರಣಕ್ಕೆ ಹೆಚ್ಚಿನ ಒಲವು ಪಡೆಯಿತು.

ಕನ್ನಡ ನಾಡಿನ ಕೀರ್ತಿಯನ್ನು ಹೊಗಳುವ ನಾಡಗೀತೆ ಗಳನ್ನು ಕವಿಗಳು ರಚಿಸಿ ಹಾಡಿದರು,"ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು"ಎಂದು ಹುಯಿಲಗೋಳು ನಾರಾಯಣರಾಯರ, ಕವಿತೆ ಕನ್ನಡಿಗರೆಲ್ಲರ ಬಾಯಲ್ಲೂ ಮೊಳಗಿತು, ಬಿ ಎಂ ಶ್ರೀ, ಪಂಜೆ ಮಂಗೇಶರಾಯರು, ಗೋವಿಂದ ಪೈ, ಆನಂದ ಕಂದ, ಶ್ರೀನಿವಾಸ, ದ,ರಾ ಬೇಂದ್ರೆ, ಕುವೆಂಪು, ಪುತಿನ, ಜಿ, ಪಿ ರಾಜರತ್ನಂ ಮುಂತಾದ ಕವಿಗಳು ಕನ್ನಡ ನಾಡಿನ ಕೀರ್ತಿಯನ್ನು ಹೊಗಳುವ ಅನೇಕ ಕವನಗಳನ್ನು ರಚಿಸಿದರು, ಗೋಕಾಕ್ ಚಳುವಳಿ ಮೂಲಕ ಪಾಟೀಲ್ ಪುಟ್ಟಪ್ಪ, ರಾಜಕುಮಾರ್ ಬೀದಿಗಿಳಿದು ಹೋರಾಟ ನಡೆಸುವ ಮೂಲಕ ಜಾಗ್ರತರಾದ ಕನ್ನಡಿಗರ ಹೋರಾಟದ ಫಲವಾಗಿ 1973 ನವೆಂಬರ್ ಒಂದರಂದು "ಕರ್ನಾಟಕ"ಎಂಬ ಹೆಸರು ನಮ್ಮ ನಾಡಿಗೆ ಬಂತು. ಈ ಎಲ್ಲಾ ಉದ್ದೇಶಗಳಿಂದ ನಾವಿಂದು ನಮ್ಮ ಹಬ್ಬವನ್ನು ಸಂಭ್ರಮ ಸಡಗರದಿಂದ ಆಚರಿಸುತಿದ್ದೇವೆ, ನವೆಂಬರ್ 1 ಹಾಗೂ ಈ ತಿಂಗಳು ಪೂರ್ತಿ ಸರ್ಕಾರದ ಕಚೇರಿಗಳಲ್ಲಿ, ಸಂಘ- ಸಂಸ್ಥೆಗಳಲ್ಲಿ, ಕಂಪನಿಗಳಲ್ಲಿ ಹಾಗೂ ದೇಶ-ವಿದೇಶಗಳಲ್ಲಿ ಕನ್ನಡಿಗರು ಒಗ್ಗೂಡಿ ಒಗ್ಗಟ್ಟಿನಿಂದ ಕರ್ನಾಟಕ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸುತ್ತಿದ್ದೇವೆ, ಈ ನಮ್ಮ ಕನ್ನಡ ಹಬ್ಬ ನವೆಂಬರ್ ಒಂದಕ್ಕೆ, ತಿಂಗಳಿಗೆ ಮಾತ್ರ ಸೀಮಿತವಾಗದೆ, ಪ್ರತಿದಿನವೂ, ಪ್ರತಿ ತಿಂಗಳು ಆಚರಿಸುವ ನಿತ್ಯೋತ್ಸವ ಆಗಬೇಕು, ನಾವು ನವೆಂಬರ್ ಕನ್ನಡಿಗರಾಗದೆ, ನಂಬರ್ ಒನ್ ಕನ್ನಡಿಗರಾಗಬೇಕು.

**ಕನ್ನಡ ಸಾಹಿತ್ಯ :** ಕನ್ನಡ ಸಾಹಿತ್ಯಕ್ಕೆ 2000 ವರ್ಷಗಳ ಸುದೀರ್ಘ ಇತಿಹಾಸವಿದೆ, ಪಂಪನಿಂದ-ಕುವೆಂಪುವರೆಗೆ ಅದು ವಿಸ್ತಾರವಾಗಿ, ಶ್ರೀಮಂತವಾಗಿ ಚಾಚಿಕೊಂಡಿದೆ, ವ್ಯಾಸ-ವಾಲ್ಮೀಕಿಯರ ಮಹಾಭಾರತ, ರಾಮಾಯಣವನ್ನು ಕನ್ನಡ ನಾಡಿನ ಪರಿಸರಕ್ಕೆ ಒಗ್ಗಿಸಿ ಮರುಸೃಷ್ಟಿ ಮಾಡಿದ್ದಾರೆ, ಕಠಿಣವಾದ ಕನ್ನಡದಿಂದ ಸರಳವಾದ ಕನ್ನಡದವರೆಗೆ ಅದರ ಭಾಷಾ ಬಳಕೆ ಇದೆ, ಚಂಪೂ ಶೈಲಿಯಂತ ಕಸುವಿನ ಕನ್ನಡದ ಜೊತೆಗೆ ಷಟ್ಪದಿ, ತ್ರಿಪದಿ, ರಗಳೆ, ಸಾಂಗತ್ಯದಂತಹ ಹಾಡು ಗಬ್ಬಗಳಿವೆ, ಅರಮನೆಗಳಲ್ಲಿ ಮಾತ್ರ ವಾಸ ಮಾಡುತ್ತಿದ್ದ ಸರಸ್ವತಿಯನ್ನು ಜನರ ಮನೆಗೆ ತಂದ ಮಹಾನ್ ಕವಿಗಳಿದ್ದಾರೆ.

ಒಂಬತ್ತನೇ ಶತಮಾನದ ಕನ್ನಡದ ಕೃತಿ'ಕವಿರಾಜಮಾರ್ಗ'ದಲ್ಲಿ ಶ್ರೀವಿಜಯನು ಕನ್ನಡಿಗರನ್ನು ಕುರಿತು

**ಸುಭಟರ್ಕಳ್ ಕವಿಗಳ್**  
**ಸುಪ್ರಭುಗಳ್ ಚೆಲ್ವರ್ಕಳ್ ಅಭಿಜನರ್ಕಳ್ ಗುಣಿಗಳ್**  
**ಅಭಿಮಾನಿಗಳ್ ಅತ್ಯುಗ್ರರ್**  
**ಗಂಭೀರ ಚಿತ್ತರ್ ವಿವೇಕಿಗಳ್ ನಿಡವರ್ಗಳ್"**

ನಾಡವರು ಒಳ್ಳೆಯ ಭಟರು, ಕವಿಗಳು, ಪ್ರಭುಗಳು, ಚೆಲುವರು, ಸಜ್ಜನರು, ಗುಣಿಗಳು, ಅಭಿಮಾನಿಗಳು, ಅತ್ಯುಗ್ರರು, ಗಂಭೀರ ಚಿತ್ತರು, ಜಾಣರು ಎಂದು ತಿಳಿಸಿದ್ದಾನೆ,

ಕರ್ನಾಟಕ ರಾಜಕೀಯ ಮತ್ತು ಧಾರ್ಮಿಕ ಪರಂಪರೆ ಯನ್ನು ನೋಡುವುದಾದರೆ ಕರ್ನಾಟಕಕ್ಕೆ ಅಶೋಕನ ಕಾಲದಿಂ ದಲೂ ಐತಿಹಾಸಿಕ ದಾಖಲೆಗಳು ದೊರೆಯುತ್ತವೆ, ಬನ ವಾಸಿಯ ಕದಂಬರು, ತಲಕಾಡಿನ ಗಂಗರು, ರಾಷ್ಟ್ರಕೂಟರು, ಬಾದಾಮಿ ಚಾಲುಕ್ಯರು, ಹೊಯ್ಸಳರು. ಬಾದಾಮಿ ಚಾಲುಕ್ಯರು ಕರ್ನಾಟಕದ ಎಲ್ಲೆಯನ್ನು ದಕ್ಷಿಣ ಭಾರತ ಮೂಲೆ ಮೂಲೆಗೂ ವಿಸ್ತರಿಸಿದರು, ಆರನೇ ಶತಮಾನದಿಂದ 12ನೇ ಶತಮಾನದವರೆಗೆ ಕರ್ನಾಟಕ ರಾಜರ ದಿಗ್ವಿಜಯ ಕಾಣುತ್ತೇವೆ, ವಿಜಯನಗರ ಅರಸ, ಶ್ರೀ ಕೃಷ್ಣದೇವರಾಯನ ಕೀರ್ತಿ ವಿಶ್ವದೆಲ್ಲೆಡೆ ಪ್ರಸಿದ್ಧಿಯಾಗಿದೆ, ಕೆಳದಿ ಅರಸರು ಮೈಸೂರು ಒಡೆಯರು ನಮ್ಮ ನಾಡನ್ನು ಆಳಿದ ಮರೆಯಲಾರದ ಮಹಾನ್ ಅರಸರಾಗಿದ್ದಾರೆ, ಶಾಸನ ಸಂಪತ್ತು, ವೀರಗಲ್ಲುಗಳು, ದಾನ ಶಾಸನಗಳು, ಧರ್ಮ ಸಮನ್ವಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರದಲ್ಲಿ, ಸಾಹಿತ್ಯ ಸೌಂದರ್ಯದಲ್ಲಿ ನಮ್ಮ ಜೀವನ ಅನಾವರಣಗೊಂಡಿದೆ

**ಜನಪದ ಸಾಹಿತ್ಯ :** ಶಿಷ್ಟ ಸಾಹಿತ್ಯದ ಜೊತೆಗೆ ಜನಪದರ ಬದುಕಿನೊಂದಿಗೆ ಸಾಹಿತ್ಯ ಬೆರೆತ ರೀತಿಯೇ ವಿಶಿಷ್ಟವಾದುದಾಗಿತ್ತು, ಜನಪದರೆಂದರೆ ರೈತರೇ ಎಂದರ್ಥ, ದಿನ ಬೆಳಗಾದರೆ ಅವರು ಒಡನಾಡುವ ವಸ್ತುಗಳೊಂದಿಗೆ, ಆಚರಣೆಗಳೊಂದಿಗೆ, ವ್ಯವಹಾರಗಳೊಂದಿಗೆ ಸಾಹಿತ್ಯದ ಒಡನಾಟ ವಿರುತ್ತಿತ್ತು.

**ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ**  
**ಎಳ್ಳು ಜೀರಿಗಿ ಬೆಳೆವಂತ ಭೂಮಿ ತಾಯಿನ**  
**ಎದ್ದೊಂದು ಘಳಿಗೆ ನೆನೆದೇನ !**

**ಶರಣೆಂಬೆ ಶಿವನಿಗೆ ಶರಣೆಂಬೆ ಗುರುವಿಗೆ**  
**ಶರಣೆಂಬೆ ಶಿವನ ಮಡದಿ ಗೌರಮ್ಮಗೆ**  
**ಶರಣೆಂದು ಕಲ್ಲ ಹಿಡಿದೇನ !**

**ವಚನ ಸಾಹಿತ್ಯ :** 12ನೇ ಶತಮಾನದ ಶರಣರ ವಚನಗಳು ಕನ್ನಡ ಸಾಹಿತ್ಯದಲ್ಲಿ ಮನೆ-ಮಾತಾಯಿತು, ಬಸವಣ್ಣನವರ ಒಂದು ವಚನ,

**ಕಳಬೇಡ ಕೊಲಬೇಡ; ಹುಸಿಯ ನುಡಿಯಲು ಬೇಡ;**  
**ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ;**  
**ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ;**  
**ಇದೇ ಅಂತರಂಗ ಶುದ್ಧಿ; ಇದೇ ಬಹಿರಂಗ ಶುದ್ಧಿ**  
**ಇದೇ ನಮ್ಮ ಕೂಡಲ ಸಂಗಮ ದೇವನೊಲಿಸುವ ಪರಿ**

ವಚನ ಸಾಹಿತ್ಯ ವಿಶ್ವ ಸಾಹಿತ್ಯಕ್ಕೆ ಕೊಡುಗೆ ನೀಡಿದೆ, ಜಗತ್ತಿನ ಹಲವಾರು ಭಾಷೆಗಳಲ್ಲಿ ವಚನಗಳು ಅನುವಾದ ಗೊಂಡಿವೆ,

**ದಾಸ ಸಾಹಿತ್ಯ :** (ಭಕ್ತಿ ಸಾಹಿತ್ಯ) ಪುರಂದರದಾಸರು ಮಾನವ ಜನ್ಮದೊಡ್ಡದು ಇದ ಹಾನಿ ಮಾಡಲು ಬೇಡ ಹುಚ್ಚಪ್ಪ ಗಳಿರಾ !

ಈಸಬೇಕು ಇದ್ದು ಜಯಿಸಬೇಕು

ಕನ್ನಡ ಸಾಹಿತ್ಯ ಲೋಕಕ್ಕೆ ಹರಿದಾಸರ ಸಾಹಿತ್ಯ ಸೇವೆ ಅನುಪಮವಾದದ್ದು,

**ತತ್ವ ಸಾಹಿತ್ಯ:** ನಿಜಗುಣ ಶಿವಯೋಗಿಗಳು, ಸಂತ ಶಿಶುನಾಳ ಶರೀಫರು, ಸರ್ವಜ್ಞ ಕವಿಗಳು ಹಾಗೂ ಇತ್ಯಾದಿ ಮಹಾನ್ ಕವಿಗಳು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ ಹಾಗೂ ಅನನ್ಯವಾದದು,

ಕನ್ನಡ ತಾಯಿ ಭುವನೇಶ್ವರಿಯ ಒಡಲು ಸಂತಸ-ಸಂಭ್ರಮದಲ್ಲಿ ಮುಳುಗಿ ತೇಲಾಡುತ್ತಿದೆ, ಕನ್ನಡ ಸಾಹಿತ್ಯಕ್ಕೆ 8 ಜ್ಞಾನಪೀಠ ಪ್ರಶಸ್ತಿಗಳು ಬಂದಿರುತ್ತವೆ, ಶಾಸ್ತ್ರೀಯ ಸ್ಥಾನಮಾನವೂ ಲಭಿಸಿರುತ್ತದೆ,

ಸ್ನೇಹಿತರೇ "**ಇವನಾರವ ಇವನಾರವ ಇವನಾರವ ಎನ್ನದೇ ಇವ ನಮ್ಮವ, ಇವ ನಮ್ಮವ, ನಮ್ಮ ಮನೆಯ ಮಗನಮ್ಮ**"ಎನ್ನುವ ಸಂಸ್ಕೃತಿ ನಮ್ಮದು, ಬಾಂಧವರೇ, ಒಂದು ಭಾಷೆಯ ಸಾಹಿತ್ಯ ದೊಡ್ಡದಾಗಬೇಕಾದರೆ, ನಾಡು ದೊಡ್ಡದಾಗ ಬೇಕು, ಜನರೂ ದೊಡ್ಡವರಾಗಬೇಕು, ಯಾವುದೇ ಭಾಷೆ ಮತ್ತು ಸಾಹಿತ್ಯವು ನಾಡನ್ನು ಬಿಟ್ಟು, ಜನರನ್ನು ಬಿಟ್ಟು ಇಲ್ಲ, ಇರಲು ಸಾಧ್ಯವೂ ಇಲ್ಲ. ನಾಡು ಆಧುನಿಕವಾಗುತ್ತಿರುವ ಸಂದರ್ಭದಲ್ಲಿ ಕರ್ನಾಟಕ ಖ್ಯಾತಿ ಪಡೆಯುತ್ತಿದೆ, ಕನ್ನಡಿಗರು ದೊಡ್ಡವರಾಗುತ್ತಿದ್ದಾರೆ, ಆದರೆ ಕನ್ನಡ ಸೊರಗುತ್ತಿದೆ, ಕನ್ನಡಿಗರ ಮಧ್ಯೆ ಉಳ್ಳವರ-ಇಲ್ಲದವರ ಅಂತರ ಹೆಚ್ಚಾಗುತ್ತಿದೆ, ನಗರದವರು-ಹಳ್ಳಿಯವರು ಎಂಬ ಭೇದಭಾವ ಬೆಳೆಯುತ್ತಿದೆ. ಕುವೆಂಪು ಅವರು ಕಂಡ ಕನಸು

"ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು, ಸರ್ವೋದಯವಾಗಲಿ ಸರ್ವರಲಿ" ಎಂಬುದು ಹುಸಿಯಾಗುತ್ತಿದೆ, ಎಲ್ಲರೂ ಇಂಗ್ಲಿಷಿನ ಬೆನ್ನು ಹತ್ತಿದ್ದೇವೆ, ನಗರದವರು ಮತ್ತು ಉಳ್ಳವರು ಅತಿ ಶ್ರೇಷ್ಠ ದರ್ಜೆಯ, ಅತ್ಯುನ್ನತ ಶುಲ್ಕದ ಇಂಗ್ಲಿಷ್ ಶಾಲೆಗಳಿಗೆ ಪ್ರವೇಶ ಪಡೆದರೆ, ಹಳ್ಳಿಯವರು ತಮ್ಮ ಸಮೀಪದ ಇಂಗ್ಲಿಷ್ ಶಾಲೆಗಳಿಗೆ ಸೇರುತ್ತಿದ್ದಾರೆ, ಹಳ್ಳಿಗಳಲ್ಲಿ ಕಾನ್ವೆಂಟ್ ಶಾಲೆಗಳು ನಡೆಯುತ್ತಿವೆ, ಹಳ್ಳಿಗಳಲ್ಲಿರುವ ಸರ್ಕಾರಿ ಶಾಲೆಗಳು ಸೊರಗುತ್ತಿವೆ, ಅದರ ಪಕ್ಕದಲ್ಲಿಯೇ ಇಂಗ್ಲಿಷ್ ಶಾಲೆಗಳು ನಳನಳಿಸುತ್ತಿವೆ, ಬಡವರು ಸರ್ಕಾರಿ ಶಾಲೆಗಳಿಗೆ ಹೋದರೆ, ಸ್ಥಿತಿವಂತರು ಖಾಸಗಿ ಇಂಗ್ಲಿಷ್ ಶಾಲೆಗಳತ್ತ ದಾಪುಗಾಲಿಡುತ್ತಿದ್ದಾರೆ, ಇಂಗ್ಲಿಷ್ ಪ್ರಪಂಚದಾದ್ಯಂತ ಅನ್ನ ನೀಡುತ್ತಿದೆ, ಕನ್ನಡ ಕನ್ನಡದ ನೆಲದಲ್ಲಿಯೇ ಅನ್ನ ನೀಡುತ್ತಿಲ್ಲ, ಎಲ್ಲಿಯವರೆಗೆ ಕನ್ನಡಕ್ಕೆ ಅನ್ನ ದೊರಕಿಸುವ ಶಕ್ತಿ ಬರುವುದಿಲ್ಲವೋ ಅಲ್ಲಿಯವರೆಗೆ ಕನ್ನಡಕ್ಕೆ ಮಹತ್ವ ಬರುವುದು ಕಷ್ಟಕರ.

ಸ್ನೇಹಿತರೇ, ಇದುವರೆಗೂ ನಡೆದ ಸಾಹಿತ್ಯ ಸಮ್ಮೇಳನಗಳು, ಸಾವಿರಾರು ನಿರ್ಣಯಗಳು ಅಂಗೀಕೃತವಾಗಿವೆ, ಆದರೆ ಅನುಷ್ಠಾನ ಆಗದಿರುವುದರಿಂದ ಕೋಟ್ಯಾಂತರ ಕನ್ನಡಿಗರ ಬಯಕೆಗಳಿಗೆ ಬೆಲೆ ಇಲ್ಲದಂತಾಗಿದೆ, ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಇರುವ ಬದ್ಧತೆ ಅನುಷ್ಠಾನದಲ್ಲಿ ಬರಬೇಕು, ಕನ್ನಡ ಉಳಿಸಿ ಬೆಳೆಸುವ ಪ್ರೀತಿಯ ಕಾರ್ಯವನ್ನು ಕೈಗೊಳ್ಳಬೇಕು, ನಾಡು-ನುಡಿ ಸಂಸ್ಕೃತಿಯನ್ನು ಮುಂದಿನ ಜನಾಂಗಕ್ಕೆ ಪರಿಚಯಿಸುವ ಹುಮ್ಮಸ್ಸು ಕಡಿಮೆಯಾಗಬಾರದು,

ಜಾತಿ, ಹಣ, ಪ್ರಾದೇಶಿಕತೆ, ಭ್ರಮೆ, ಆಮಿಷ, ಸುಳ್ಳು ವದಂತಿಗಳನ್ನು ಮೆಟ್ಟಿ ವಿರೋಧಿಗಳಿಗೆ ತಕ್ಕ ಉತ್ತರ ಕೊಡಬೇಕು. ನಾವೆಲ್ಲರೂ ಈ ವಿಷಯದಲ್ಲಿ ಜಾಗೃತರಾಗೋಣ, ಕನ್ನಡ ಸಾಗರ, ವಿಶ್ವವ್ಯಾಪಿ, ವಿಶ್ವರೂಪಿ ಇಂತಹ ಮೌಲ್ಯಯುತ ಸಾಹಿತ್ಯ ಭಾಷೆಯ ವಾರಸುದಾರರು ನಾವು !

ಇಂದು ಅಗತ್ಯವಾಗಿರುವುದು ಒಗ್ಗಟ್ಟು, ಜಾತಿ, ಧರ್ಮ, ಮೇಲು-ಕೀಳು, ಭೇದವಿಲ್ಲದೆ, ಪಕ್ಷಾತೀತವಾಗಿ ಕನ್ನಡದ ಉಳಿವು ಬೆಳವಣಿಗೆಗಾಗಿ ನಾವೆಲ್ಲರೂ ಒಂದಾಗುವುದು ತೀರ ಅಗತ್ಯ.

**- ಜೆಂಬಿಗಿ ಮೃತ್ಯುಂಜಯ,**  
ಕನ್ನಡ ಉಪನ್ಯಾಸಕರು, ದಾವಣಗೆರೆ

## ಕಿರುಕುಳ : ಕ್ಲರ್ಕ್ ರುದ್ರಣ್ಣ ಆತ್ಮಹತ್ಯೆ

**(1ನೇ ಪುಟದಿಂದ)** ತಿಳಿಸಿವೆ.

ನನ್ನ ಸಾವಿಗೆ ತಹಶೀಲ್ದಾರ್ ಬಸವರಾಜ ನಾಗರಾಳ ಹಾಗೂ ಸೋಮು, ಅಶೋಕ ಕಬ್ಬಲಿಗೇರ ಅವರೇ ನೇರ ಕಾರಣ.

ನಮ್ಮ ಕಚೇರಿಯಲ್ಲಿ ತುಂಬ ಅನ್ಯಾಯ ನಡೆಯುತ್ತಿದೆ. ದಯವಿಟ್ಟು ಎಲ್ಲರೂ ಒಟ್ಟಾಗಿ ಹೋರಾಡಿ ಎಂದು ರುದ್ರಣ್ಣ ಯಡವಣ್ಣವರ ಅವರು ತಹಶೀಲ್ದಾರ ಕಚೇರಿಯ ಸಿಬ್ಬಂದಿಗಳ ವಾಟ್ಸ್‌ಆಪ್ ಗ್ರೂಪಿನಲ್ಲಿ ಮೆಸೇಜ್ ಹಾಕಿದ್ದಾರೆ.

ತಮ್ಮನ್ನು ವರ್ಗಾಯಿಸಬಾರದು ಎಂದು ರುದ್ರಣ್ಣ ಅವರು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರ ಆಪ್ತ ಸಹಾಯಕ ಸೋಮು ಅವರಲ್ಲಿ ರುದ್ರಣ್ಣ ಮನವಿ ಮಾಡಿಕೊಂಡಿದ್ದರು ಎನ್ನಲಾಗಿದೆ.

## ಜಿಎಸ್‌ಟಿ ವಂಚನೆ ಪತ್ತೆ

**(1ನೇ ಪುಟದಿಂದ)** ಇವುಗಳಲ್ಲಿ 18 ಸಾವಿರ ಕಂಪನಿಗಳು ಅಸ್ತಿತ್ವದಲ್ಲೇ ಇಲ್ಲ ಎಂಬುದು ಕಂಡು ಬಂದಿದೆ.

ಈ ನಕಲಿ ಕಂಪನಿಗಳ ಮೂಲಕ 24,550 ಕೋಟಿ ರೂ.ಗಳ ವಂಚನೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಹೆಚ್.ಎಸ್.ಶಿವಶಂಕರ್ ಗುಂಪಿಗೆ ಭರ್ಜರಿ ಜಯ

**(1ನೇ ಪುಟದಿಂದ)** ಮಲೇಬೆನ್ನೂರಿನ ಬಿ. ಚಿದಾನಂದಪ್ಪ (1627), ಹುಲಿಕಟ್ಟೆಯ ಎ.ಆರ್. ಆನಂದ ಪಾಟೀಲ್ (1625), ಸಿರಿಗೆರೆ (ಹರಿಹರ)ಯ ಎಂ.ಜಿ. ಪರಮೇಶ್ವರಗೌಡ (1625), ಯಲವಟ್ಟಿಯ ದೊಡ್ಡಗೌಡ್ರು ಮುರುಗೆಪ್ಪ (1620), ಸಿರಿಗೆರೆ (ಹರಿಹರ)ಯ ಎನ್.ಜಿ. ರಾಮನಗೌಡ (1617), ನಂದಿತಾವರೆಯ ಎಂ. ಚಂದ್ರಶೇಖರಯ್ಯ (1617), ಬಿಳಸನೂರಿನ ಬಿ.ಆರ್. ರುದ್ರೇಶ್ (1610), ದೊಡ್ಡಬಾತಿಯ ಬಿ.ಜಿ. ವಿಶ್ವಾಂಬರ (1608), ವಾಸನದ ಜಿ. ಬಸವರಾಜಪ್ಪ (1604) ಅವರುಗಳು ಚುನಾಯಿತರಾಗಿದ್ದಾರೆ.

ಕೆ.ಜಿ. ಬಸವರಾಜಪ್ಪ (37), ಡಿ. ಕುಮಾರ್ (35), ಜಿ.ಬಿ. ಹಾಲಸ್ವಾಮಿ (31), ಆರ್.ಜಿ. ಪ್ರಭಾಕರ್ (26), ಬಿ.ರಮಾನಂದಪ್ಪ (24), ಜೆ. ನಾರಪ್ಪ (24) , ಕೆ.ಎಂ.ಲಿಂಗರಾಜ್ (21), ಡಿ. ಪ್ರಕಾಶ್ (17), ಕೆ.ಬಿ. ಬಸವಲಿಂಗಪ್ಪ (14), ಸಿ. ಶೇಖಪ್ಪ (13) ಅವರುಗಳು ಪರಾಭವಗೊಂಡಿದ್ದಾರೆ.

ಮಹಿಳಾ ಮೀಸಲು 2 ಸ್ಥಾನಗಳಿಗೆ ಮೂವರು ಸ್ಪರ್ಧೆ ಮಾಡಿದ್ದರು. ಶಿವಶಂಕರ್ ಗುಂಪಿನಿಂದ ರಾಣೇಬೆನ್ನೂರಿನ ಶ್ರೀಮತಿ ರಾಜೇಶ್ವರಿ ಪಾಟೀಲ್ (1653), ದಾವಣಗೆರೆಯ ಶ್ರೀಮತಿ ಕೆ.ಸಿ. ಮಮತ (1637) ಜಯ ಗಳಿಸಿದ್ದು, ಕೆ.ಜಿ. ಗಿರಿಜಮ್ಮ (27) ಪರಾಭವಗೊಂಡಿದ್ದಾರೆ. ಪರಿಶಿಷ್ಟ ಪಂಗಡ ಮೀಸಲು ಒಂದು ಸ್ಥಾನಕ್ಕೆ ಇಬ್ಬರು ಸ್ಪರ್ಧಿಸಿದ್ದರು. ಶಿವಶಂಕರ್ ಗುಂಪಿನ ಬನ್ನಿಕೋಡು ಗ್ರಾಮದ ಟಿ. ಹಾಲಪ್ಪ ಕೋಸಿ (1648) ಜಯ ಗಳಿಸಿದ್ದರೆ, ಊರಮುಂಡ್ಲ ಬಸಪ್ಪ (12) ಪರಾಭವಗೊಂಡಿದ್ದಾರೆ.

ಮಲೇಬೆನ್ನೂರಿನ ಬಸಪ್ಪ ಪೂಜಾರ್ (ಹಿಂದುಳಿದ ವರ್ಗ 'ಎ' ಮೀಸಲು), ಧೂಳೆಹೊಳೆಯ ಕೆ.ಜಿ. ರಾಮನಗೌಡ (ಹಿಂದುಳಿದ ವರ್ಗ 'ಬ' ಮೀಸಲು) ಮತ್ತು ಬನ್ನಿಕೋಡು ಗ್ರಾಮದ ಜೆ.ಕೆ. ರಾಮಚಂದ್ರಪ್ಪ (ಪರಿಶಿಷ್ಟ ಜಾತಿ ಮೀಸಲು) ಅವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

**'ಸಿ' ವರ್ಗ**

ಬೆಳೆಗಾರರಲ್ಲದ ಸದಸ್ಯರನ್ನು 'ಸಿ' ವರ್ಗವನ್ನಾಗಿಸಿದ್ದು, 'ಸಿ' ವರ್ಗದಿಂದ ಕೊಟ್ಟೂರೇಶ್ವರ ಜಿನ್ನಿಂಗ್ ಫ್ಯಾಕ್ಟರಿಯ ಕೆ.ಆರ್. ಪ್ರಕಾಶ್ ಮಾತ್ರ ಸ್ಪರ್ಧೆ ಮಾಡಿದ್ದರು. ಈ ಕಾರಣದಿಂದ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

**'ಡಿ' ವರ್ಗ**

ಸಹಕಾರ ಸಂಘಗಳ ಸದಸ್ಯರನ್ನು 'ಡಿ' ವರ್ಗಕ್ಕೆ ಮೀಸಲಿರಿಸಲಾಗಿತ್ತು. 'ಡಿ' ವರ್ಗದಿಂದ ಹೊಳೆಸಿರಿಗೆರೆಯ ಈಶ್ವರಪ್ಪ ಮಾತ್ರ ಸ್ಪರ್ಧಿಸಿದ್ದರು. ಅವರೂ ಸಹ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೋರ್ಟ್ ಮೊರೆ ಹೋಗಿದ್ದ ಶಿವಶಂಕರ್ : ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಗೆ 2024, ಜುಲೈ 4 ರಂದು ಚುನಾವಣೆ ನಿಗದಿಯಾಗಿತ್ತು. ಈ ಪ್ರಕಾರ ಚುನಾವಣಾ ಪ್ರಕ್ರಿಯೆ ಕೂಡಾ ಆರಂಭಿಸಲಾಗಿತ್ತು.

ಸಲ್ಲಿಸಲ್ಪಟ್ಟ ನಾಮಪತ್ರಗಳ ಪರಿಶೀಲನೆ ಸಂದರ್ಭದಲ್ಲಿ, ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿರುವುದಿಲ್ಲ ಎಂದು ಕಾರಣ ಕೊಟ್ಟು, ನಾಮಪತ್ರ ಸಲ್ಲಿಸಿದ್ದ ಎಲ್ಲಾ 45 ಜನರ ಉಮೇದುವಾರಿಕೆ ಅರ್ಜಿಗಳನ್ನು ಚುನಾವಣಾಧಿಕಾರಿಗಳು ತಿರಸ್ಕರಿಸಿದ್ದರು.

ಚುನಾವಣಾಧಿಕಾರಿಗಳ ಈ ಕ್ರಮವನ್ನು ಹೆಚ್. ಎಸ್. ಶಿವಶಂಕರ್ ಅವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು. ವಾದ - ವಿವಾದವನ್ನು ಆಲಿಸಿದ ಹೈಕೋರ್ಟ್, ವಜಾ ಮಾಡಿದ್ದ ಎಲ್ಲಾ ನಾಮಪತ್ರಗಳನ್ನು ಅರ್ಹ ಎಂದು ಪರಿಗಣಿಸಿ ಚುನಾವಣೆಯನ್ನು ಸ್ಥಗಿತಗೊಂಡ ಪ್ರಕ್ರಿಯೆಯಿಂದ ಮುಂದುವರೆಸಿ ನ. 4 ರಂದು ಚುನಾವಣೆ ನಡೆಸುವಂತೆ ಆದೇಶಿಸಿತ್ತು.

ಈ ಹಿನ್ನೆಲೆಯಲ್ಲಿ ದಾವಣಗೆರೆ ಉಪ ವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರೂ ಆಗಿರುವ ಶ್ರೀಮತಿ ಎಸ್. ಮಂಜುಳಾ ಅವರು ಚುನಾವಣೆ ನಡೆಸಿದರು.

ಏತನ್ಮಧ್ಯೆ, ಚುನಾವಣೆ ಪ್ರಕ್ರಿಯೆ ಸ್ಥಗಿತಗೊಂಡ ದಿನದಿಂದ ಅಪರ ಜಿಲ್ಲಾಧಿಕಾರಿ ಲೋಕೇಶ್ ಅವರು ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಚುನಾವಣಾ ಫಲಿತಾಂಶ ಈಗಾಗಲೇ ಪ್ರಕಟವಾಗಿದ್ದು, ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ನಿಗದಿಯಾಗಬೇಕಿದ್ದು, ನಂತರ ಆಡಳಿತಾಧಿಕಾರಿಗಳು ನೂತನ ಅಧ್ಯಕ್ಷರಿಗೆ ಅಧಿಕಾರ ಹಸ್ತಾಂತರಿಸಲಿದ್ದಾರೆ.

## ಜಿಲ್ಲಾ ನ್ಯಾಯಾಂಗ ಇಲಾಖಾ ನೌಕರರ ಸಂಘದ ವಾರ್ಷಿಕ ಮಹಾಸಭೆ



ದಾವಣಗೆರೆ, ನ. 5 - ಜಿಲ್ಲಾ ನ್ಯಾಯಾಂಗ ಇಲಾಖಾ ನೌಕರರ ವಿವಿಧೋದ್ದೇಶ ಸಹಕಾರ ಸಂಘದ 14ನೇ ವಾರ್ಷಿಕ ಮಹಾ ಸಭೆಯು ಸಂಘದ ಅಧ್ಯಕ್ಷ ಎನ್.ಜಿ. ಶಂಕರ ಮೂರ್ತಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ ಕಾರ್ಯಕ್ರಮವನ್ನು ಏರ್ಪಡಿಸಲಾ ಗಿತ್ತು. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್, ನ್ಯಾಯಾಂಗ ಇಲಾ ಖೆಯ ನಿವೃತ್ತರಾದ ಗೋವಿಂದಪ್ಪ, ಓಂಕಾರಪ್ಪ, ರಹಮತ್‌ವುಲ್ಲಾ, ದಾಸಪ್ಪ ಅವರನ್ನು ಸನ್ಮಾನಿಸ ಲಾಯಿತು. ಉಪಾಧ್ಯಕ್ಷ ಜಿ.ಆರ್. ಶೇಖರಪ್ಪ, ಗೌರವ ಕಾರ್ಯದರ್ಶಿ ಎನ್.ಟಿ. ಕರಿಸಿದ್ದಪ್ಪ, ನಿರ್ದೇಶಕ ವೈ. ಹನುಮಂತಪ್ಪ, ಪಿ.ಹೆಚ್. ಮಂಜುನಾಥ್, ಎನ್. ಮಾರುತಿ, ಎ.ಪಿ. ಜಗನ್ನಾಥ್, ಜಿ.ಎಸ್. ಪವಿತ್ರ, ಕೆ. ಕೊಟ್ರೇಶ್, ಎ.ಆರ್. ಕೃಷ್ಣಮೂರ್ತಿ, ಎಂ.ಆರ್. ಶ್ರೀಧರ ನಾಯಕ, ಶಿವಬಸು ಆರ್. ಬಾಗೇವಾಡಿ, ಆರ್. ಹರೀಶ್, ಶಶಿಧರ ಎಂ. ಶಾಂತಗಿರಿ, ಎಂ.ಹೆಚ್. ಸುಭಾನ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಖಾಸಗಿ ಆಸ್ತಿಗಳ ಸಂಪೂರ್ಣ ವಶಕ್ಕೆ ಅಧಿಕಾರವಿಲ್ಲ

**(1ನೇ ಪುಟದಿಂದ)** ನ್ಯಾಯಮೂರ್ತಿಗಳ ಪರವಾಗಿ ತೀರ್ಪು ಬರೆದಿರುವ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್, ರಾಜ್ಯಗಳು ಈ ರೀತಿ ಖಾಸಗಿಯ ಎಲ್ಲಾ ಆಸ್ತಿಗಳನ್ನು ವಶಪಡಿಸಿಕೊಳ್ಳುವಂತಿಲ್ಲ ಎಂದು ತಿಳಿಸಿದ್ದಾರೆ.

ರಾಜ್ಯಗಳು ಖಾಸಗಿ ಆಸ್ತಿಗಳನ್ನು ಪಡೆದು ಹಂಚಬಹುದು ಎಂದು ಸಮಾಜವಾದಿ ಸಿದ್ಧಾಂತದ ಹಿನ್ನೆಲೆಯಲ್ಲಿ ಈ ಹಿಂದೆ ನ್ಯಾಯಾಲಯಗಳು ನೀಡಿದ್ದ ಅನೇಕ ತೀರ್ಪುಗಳನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು ಬಹುಮತದ ತೀರ್ಪಿಗೆ ತುಸು ಭಿನ್ನವಾದ ತೀರ್ಪು ನೀಡಿದ್ದಾರೆ. ನ್ಯಾಯಮೂರ್ತಿ ಸುಧಾಂಶು ಧುಲಿಯ ಅವರು ಎಲ್ಲ ಅಂಶಗಳಲ್ಲಿ ಪ್ರತ್ಯೇಕವಾದ ತೀರ್ಪು ನೀಡಿದ್ದಾರೆ.

## ಸಿಬಿಐಗೆ ವಹಿಸಲು ಹೈಕೋರ್ಟ್ ನೋಟಿಸ್

**(1ನೇ ಪುಟದಿಂದ)** ಹಾಜರಿದ್ದ ಹಿರಿಯ ವಕೀಲ ಪಿ.ಪ್ರಸನ್ನಕುಮಾರ್, ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಭಿಯೋಜಕ ಬಿ.ಎನ್.ಜಗದೀಶ್ ನೋಟಿಸ್ ಪಡೆದುಕೊಂಡರು. ಮುಡಾ ಬಿಡಿ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಪೀಠವೇ ಈ ಹಿಂದೆ ರಾಜ್ಯಪಾಲರ ಪ್ರಾಸಿಕ್ಯೂಷನ್ ನಿರ್ಧಾರವನ್ನು ಎತ್ತಿಹಿಡಿದು ತನಿಖೆಗೆ ಆದೇಶಿಸಿತ್ತು. ತನಿಖೆಯನ್ನು ಮೂರು ತಿಂಗಳೊಳಗೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕೆಂದು ತನಿಖಾ ಸಂಸ್ಥೆಗೆ ಆದೇಶ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನ ಹಿಂಭಾಗ ವಿಸನ್ ಇಂಟರ್ ನ್ಯಾಷನಲ್ ಸ್ಕೂಲ್ ಹಿಂಭಾಗ 30x40 , 30x40 East ಅಕ್ಕ-ಪಕ್ಕ, 60x40 East, Rate - 2600/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬಾಡಿಗೆಗೆ / ಲೀಸ್‌ಗೆ ಮನೆಗಳು ದೊರೆಯುತ್ತವೆ ವಿಚಾರಿಸಿ**
ಮಹಾಲಕ್ಷ್ಮಿ ಲೇಔಟ್‌ನಲ್ಲಿ, ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ, ಆಂಜನೇಯ ಬಡಾವಣೆಯಲ್ಲಿ
ದಕ್ಷಿತ್ ಐನಳ್ಳಿ ಏಜೆಂಟ್
96061 26471

**GODOWN FOR RENT**
1000 Sq. Feet (1000) Power Available. Karur Industrial Area, Near DC Office.
Ph No.: 90351 08160

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ 40x60, 40x60 North ಅಕ್ಕ-ಪಕ್ಕ, 40 ಅಡಿ ರೋಡಿಗಿದೆ. ಎದುರುಗಡೆ ಪಾರ್ಕ್ ಇದೆ, 30x40 North, 30x40 South
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**CARS FOR SALE**
Vitara Brezza ZDI + ALTO K10 Vxi Innova Crysta [Z] Hyundai I20 Petrol
Contact : Daivik Iynahalli
99456 43223

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB NEET / IIT - JEE / KCET / CLAT - Printed Notes + Study Materials
97398 65711, 94822 44114

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ (Nurse) ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98450 35710, 77607 39990

**ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ & ಮಗು ನೋಡಿಕೊಳ್ಳಲು ಬೆಳಿಗ್ಗೆ 7 ರಿಂದ ಸಂಜೆ 6 ಗಂಟೆಯವರೆಗೆ ಬೇಕಾಗಿದ್ದಾರೆ. ತರಳಬಾಳು ಬಡಾವಣೆ, ದಾವಣಗೆರೆ.
62811 87911

**ಮಳಿಗೆ ಬಾಡಿಗೆಗಿದೆ Shop For Rent**
ಬೆಳ್ಳುಳ್ಳಿ ಬಿಲ್ಡಿಂಗ್, ಪಿ.ಬಿ. ರೋಡ್, ಶ್ರೀ ಲಾಡ್ಜ್ ಎದುರು, ಗ್ರೌಂಡ್ ಫ್ಲೋರ್, 1400 ಚ.ಅ., 1ನೇ ಮಹಡಿ - 1400 ಚ.ಅ., 2ನೇ ಮಹಡಿ, 1400 ಚ.ಅ.
99022 79003

**REQUIRED**
Office assistant and telecaller (female candidate) Marketting executive - finance / insurance and property sales (male candidate-fresher) Any graduate. Contact Bhuvi.com
91489 09259

**ಬೇಕಾಗಿದ್ದಾರೆ**
ವೈನ್ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಶಾಮನೂರು ರೋಡ್, ದಾವಣಗೆರೆ.
98861 66432

**ಬೆಂಗಳೂರಿನಲ್ಲಿ ಬೇಕಾಗಿದ್ದಾರೆ**
ಮನೆ ಕೆಲಸದ ಮಹಿಳೆ ಬೇಕಾಗಿದ್ದಾರೆ. ಸಂಬಳ 15000 ವಸತಿ ಉಚಿತ. ಸಂಪರ್ಕಿಸಿ :
97400 98047

**ಶ್ರೀ ಸಾಯಿ ಫೈನಾನ್ಸ್ (ರಿ)**
ನಮ್ಮಲ್ಲಿ ವ್ಯಾಪಾರಿಗಳಿಗೆ ಫೈನಾನ್ಸ್ ನೀಡಲಾಗುವುದು (ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್, ಎಗ್‌ರೈಸ್ ಸೆಂಟರ್ ಇತ್ಯಾದಿಗಳಿಗೆ ಫೈನಾನ್ಸ್ ನೀಡಲಾಗುವುದು ಶಿವಪ್ಪಯ್ಯ ಸರ್ಕಲ್, ದಾವಣಗೆರೆ..
96860 22969

**ಬೇಕಾಗಿದ್ದಾರೆ**
1) ಸೇಲ್ಸ್ ಮನ್ 2) ಟ್ಯಾಲಿ ಆಪರೇಟರ್ ಅನುಭವವುಳ್ಳವರು ಮಾತ್ರ ಸಂಪರ್ಕಿಸಿ.
ಪ್ರಕಾಶ್ ಕಾಫಿ ವರ್ಕ್ಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
9900438052, 9740153513

**ಮನೆಗಳು ಲೀಸ್‌ಗಿವೆ**
2BHK ಆರ್ ಸಿ ಸಿ 2ನೇ ಮಹಡಿ ಮನೆ, ಪೂರ್ವ ಬಾಗಿಲು, ದೇವರಾಜ ಅರಸ್ ಬಡಾವಣೆ, ದಾವಣಗೆರೆ ಲೀಸ್ ಮೊತ್ತ 5 ಲಕ್ಷ, 1BHK ಆರ್ ಸಿ ಸಿ, 1ನೇ ಮಹಡಿ, ಉತ್ತರ ಬಾಗಿಲು, ನಿಟುವಳ್ಳಿ, ಲೆನಿನ್ ನಗರ, ಲೀಸ್ ಮೊತ್ತ 2 ಲಕ್ಷ ಬೋರ್‌ವೆಲ್ / ಕಾರ್ಪೊರೇಷನ್ ನೀರು, ಕಾರ್ ಪಾರ್ಕಿಂಗ್ ಸೌಲಭ್ಯ.
7349397287, 7022643885

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಪಿಯುಸಿ ಅಥವಾ ಡಿಗ್ರಿ ಮುಗಿಸಿರುವ ಹುಡುಗರು ಬೇಕಾಗಿದ್ದಾರೆ
ಮೆ. ಬಸವಶ್ರೀ ಸೋಲಾರ್ ಟೆಕ್ನಾಲಜೀಸ್
ನಂ. 43H, ಎಸ್‌ಜೆಜೆಎಂ ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ.
99001 42052

**ಬೇಕಾಗಿದ್ದಾರೆ**
ವಿ. ಟ್ರಾನ್ಸ್‌ಪೋರ್ಟ್
ಎಪಿಎಂಸಿ ಮಾರ್ಕೆಟ್, ದಾವಣಗೆರೆ. ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ.
84948 07489
78991 94298

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ, ಫೈನಾನ್ಸ್,**
GST & Income Tax
ನೋಂದಣಿ ನವೀಕರಣ ಮಾಡಿಕೊಡುತ್ತೇವೆ.
Mob: 94838 62779

**ಖಾಲಿ ಜಾಗ ಬಾಡಿಗೆಗೆ**
ಪಾಲಿ ಕ್ಲಿನಿಕ್ ಜೊತೆಗೆ ಮೆಡಿಕಲ್ ಸ್ಟೋರ್/ಆಪ್ಟಿಕಲ್ಸ್, ಫಾರ್ಮಾ, ಕಾರ್ ಸೇಲ್/ಸರ್ವೀಸ್, ಕೆಫೆ/ಫಾಸ್ಟ್ ಫುಡ್/ ಗಾರ್ಡನ್ ರೆಸ್ಟೋರೆಂಟ್, ಗ್ರಾನೈಟ್, ಗೋಡೌನ್, ಹಾರ್ಡ್ವೇರ್, ಶೋರೂಮ್, ಇತರ ಉಪಯೋಗಕ್ಕೆ ಪಿ.ಜೆ. ಬಡಾವಣೆ, ಎವಿಕೆ/ಸ್ಟೇಡಿಯಂ ರಸ್ತೆಯಲ್ಲಿ ಪೂರ್ವ ಮುಖ 3500 ಅಡಿ ಖಾಲಿ ಜಾಗ ಬಾಡಿಗೆಗೆ ಇದೆ.
95136 99252

**ಕೆಲಸಕ್ಕೆ ಬೇಕಾಗಿದ್ದಾರೆ**
ಸಮ್ಯಕ್ ಸೆರಾಮಿಕ್ಸ್ & ಗ್ರಾನೈಟ್ಸ್ ನಗರದ ಪ್ರತಿಷ್ಠಿತ ಟೈಲ್ಸ್ ಶೋರೂಮ್‌ನಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿರುತ್ತಾರೆ. ಜಾಬ್ ವಿವರ : ಸೇಲ್ಸ್ (Sales) ರಿಸೆಪ್ಷನಿಸ್ಟ್ (Receptionist) ಮಾರ್ಕೆಟಿಂಗ್ (Marketing) ಸಂಪರ್ಕಿಸುವ ಮೊ.ನಂ.
80501 80487

**ಕಳೆದಿದೆ**
ಶಿರಗಾನಹಳ್ಳಿ ವಾಸಿ ಸಂಜೀವ ರೆಡ್ಡಿ ಎಸ್.ಆರ್. ಆದ ನಾನು, ನನಗೆ ಸಂಬಂಧಿಸಿದ ನೋಂದಣಿ ಸಂಖ್ಯೆ R709034 ರ ಡಿ. ಫಾರ್ಮಸಿ ವ್ಯಾಸಂಗ ಪ್ರಮಾಣ ಪತ್ರವು ಹದಡಿ ಗ್ರಾಮದ ಬಸ್ ನಿಲ್ದಾಣದಲ್ಲಿ ಕಳೆದುಕೊಂಡಿದ್ದು, ಸಿಕ್ಕವರು ಈ ಕೆಳಗಿನ ಸಂಖ್ಯೆಗೆ ಸಂಪರ್ಕಿಸಿ ಅಥವಾ ಹತ್ತಿರದ ಪೊಲೀಸ್ ಠಾಣೆಗೆ ತಲುಪಿಸಬೇಕಾಗಿ ವಿನಂತಿಸಲಾಗಿದೆ.
98449 29196

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10 CBSE / ICSE Boards, NEET / IIT - JEE / Olympiads Memory Techniques + Hand Writing
97398 65711, 94822 44114

**WANTED**
Boys & Girls required for billing work at Food Mart Supermarket.
Quli : Any Degree
98864 63531

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಸೈಟುಗಳು ಮಾರಾಟಕ್ಕಿವೆ**
ಪಂಚಾಯಿತಿ ಡೋರ್ ನಂಬರ್ ಸೈಟುಗಳು ಫೈನಲ್ ಅಪ್ರೂವಲ್ ಸೈಟ್, ಕಡಿಮೆ ದರದಲ್ಲಿ ಸಿಗುತ್ತವೆ. 1 ಅಡಿಗೆ 980 ರೂಪಾಯಿಗೆ ಸಿಗಲಿವೆ.
86183 43463
86187 28546

**HOUSE FOR RENT**
# 5628/D-23, "Shivaratna", 2 BHK, ground floor, 4th main, 6th cross (left) East facing, Near, Indoor Neharu Stadium, SS Badavane, 'B' blcok,
94489 29509

**ಮನೆ ಬಾಡಿಗೆಗೆ**
2BHK ಮನೆ, ತರಳಬಾಳು ಬಡಾವಣೆ 14ನೇ ಕ್ರಾಸ್, ಡೋ.ನಂ. 1998/28, ಮೊದಲನೇ ಮಹಡಿ ಬಾಡಿಗೆಗೆ.
81232 13888, 97392 63781

**ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ವಾಟರ್ ಟ್ಯಾಂಕ್ & ಸಂಪ್ ಕ್ಲೀನಿಂಗ್**
ಸೋಲಾರ್ ಸೇಲ್ಸ್ ಮತ್ತು ಸರ್ವೀಸ್ ಮನೆ & ಅಪಾರ್ಟ್‌ಮೆಂಟ್‌ಗಳ ತೊಟ್ಟಿಗಳನ್ನು ಯಂತ್ರಗಳ ಮೂಲಕ ಕ್ಲೀನ್ ಮಾಡುತ್ತೇವೆ.
9740007212, 8861961622

**WANTED**
* Milling and Turning Operator
* Wire EDM Operator
BRANCS INDIA TOOLS PVT LTD., Karur Industri Davangere.
99026 97197
97395 65940

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥ್‌ರೈಟಿಸ್) ಬೆಂಗಳೂರು ಇವರು ಇಂದು ದಿ.6.11.2024ರ ಬುಧವಾರ ನಾಳೆ ದಿ. 7.11.2024ರ ಗುರುವಾರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಸಿಸಿ ಟಿವಿ ಕ್ಯಾಮೆರಾ ಮತ್ತು ಕಂಪ್ಯೂಟರ್ ಸೇಲ್ಸ್ & ಸರ್ವೀಸ್ ಶೋ ರೂಂಗೆ ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ. ಸಂಪರ್ಕಿಸಿ :
ಕ್ಯಾಮ್ ಕೇರ್
PJ ಬಡಾವಣೆ 5ನೇ ಮೇನ್, ದಾವಣಗೆರೆ.
99161 11194

**ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಸೇಲ್ಸ್ ವಿಭಾಗದಲ್ಲಿ ಕೆಲಸ ಮಾಡಲು PUC, B.Com ಆದಂತಹ ಯುವತಿಯರು ಬೇಕಾಗಿದ್ದಾರೆ. ವಯೋಮಿತಿ:20 ರಿಂದ 25 (ಅವಿವಾಹಿತರು), ದಾವಣಗೆರೆ ನಗರದಲ್ಲಿ ವಾಸಿಸು ವವರು ಮಾತ್ರ. Resum & ಆಧಾರ ಕಾರ್ಡ್ ಜೆರಾಕ್ಸ್ ನೊಂದಿಗೆ ಬೆಳಿಗ್ಗೆ 10 ರಿಂದ ರಾತ್ರಿ 8ರವರೆಗೆ ಸಂಪರ್ಕಿಸಿರಿ:
ಗುಪ್ತ ಗೋಲ್ಡ್ ಪ್ಯಾಲೇಸ್, ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
80957 43423

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಕೆಲಸಕ್ಕೆ ಬೇಕಾಗಿದ್ದಾರೆ**
ಶಿವಸಂಗಮ ಚಿಟ್ಸ್ ಪ್ರೈ.ಲಿ. ಶಿವಸಂಗಮ ಫೈನಾನ್ಸ್ (ರಿ) ದಾವಣಗೆರೆ ಶಾಖೆಯಲ್ಲಿ ಮಾರ್ಕೆಟಿಂಗ್ & ರಿಕವರಿ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಸ್ಥಳ : ಡಾ. ಬಿ.ಆರ್. ಶಿವಶಂಕರ ನಾಗರತ್ನಮ್ಮ ಸಂಕೀರ್ಣ, ಪಿ.ಜೆ. ಬಡಾವಣೆ, 4ನೇ ಮೇನ್, ರಾಮ್ ಅಂಡ್ ಕೋ ಹತ್ತಿರ, ದಾವಣಗೆರೆ.
73533 29440, 81972 20933

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯಿತಿಯಲ್ಲಿ ಮಾರಾಟಕ್ಕಿವೆ.
30x40, 30x50, 40x60
93431 10009
98458 61220

**SPOKEN ENGLISH BASIC, PHOTOSHOP**
ಮನೆಗೆ ಬಂದೂ ಸಹ ಕಲಿಸಲಾಗುವುದು.
97426 10385
74062 78270

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ) ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಬೇಕಾಗಿದ್ದಾರೆ**
ಲಾಡ್ಜ್ ನಲ್ಲಿ ಹಗಲು ಪಾಳೆಯದಲ್ಲಿ ಕೆಲಸ ಮಾಡಲು ರಿಸೆಪ್ಷನಿಸ್ಟ್ / Tally ಆಪರೇಟರ್ ಬೇಕಾಗಿದ್ದಾರೆ ಹಾಗೂ ರೂಂ ಬಾಯ್ಸ್ ಬೇಕಾಗಿದ್ದಾರೆ. 40 ವರ್ಷ ಮೇಲ್ಪಟ್ಟ ಪುರುಷರು. ಸಂಪರ್ಕಿಸಿ:
98451 51589

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡಲು ಚುರುಕಾದ ಹುಡುಗರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ, ಅನುಭವ ಇಲ್ಲದವರು ಸಂಪರ್ಕಿಸಬಹುದು.
80733 01110

**ವಾಣಿಜ್ಯೋಪಯೋಗಿ ಮಳಿಗೆಗಳು ಬಾಡಿಗೆಗಿವೆ**
ದಾವಣಗೆರೆಯ ಬಿಲಾಲ್ ಕಾಂಪೌಂಡ್ ಹತ್ತಿರ 90x20 ಅಡಿ ಅಳತೆಯ ನೆಲಮಹಡಿ ಹಾಗೂ 1 ನೇ ಮಹಡಿಯ ಸುಸಜ್ಜಿತ ವಾಣಿಜ್ಯೋಪಯೋಗಿ ಮಳಿಗೆಗಳು ಸಂಘ-ಸಂಸ್ಥೆ, ಹಣಕಾಸು ಸಂಸ್ಥೆ, ಗೋಡೌನ್‌ಗಳಿಗೆ ಯೋಗ್ಯವಿದ್ದು, ಬಾಡಿಗೆಗಿವೆ. ಸಂಪರ್ಕಿಸಿ. :
99800 40778

# ಸಿರಿಗೆರೆ ಬೃಹನ್ಮಠದಲ್ಲಿ ನಾಡಿದ್ದು 'ತರಳಬಾಳು ನುಡಿ ಹಬ್ಬ'

ದಾವಣಗೆರೆ, ನ.5- ಸಿರಿಗೆರೆಯ ತರಳಬಾಳು ಜಗದ್ಗುರು ಬೃಹನ್ಮಠದ ಗುರು ಶಾಂತೇಶ್ವರ ದಾಸೋಹ ಮಂಟಪದಲ್ಲಿ ಕನ್ನಡ ರಾಜ್ಯೋತ್ಸವದ ನಿಮಿತ್ತ ಇದೇ ದಿನಾಂಕ 8ರಿಂದ 10ರ ವರೆಗೆ 'ತರಳಬಾಳು ನುಡಿ ಹಬ್ಬ-2024' ಕಾರ್ಯಕ್ರಮ ನಡೆಯಲಿದೆ ಎಂದು ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತರಳಬಾಳು ಜಗದ್ಗುರು ಬೃಹನ್ಮಠ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಜರುಗಲಿದೆ ಎಂದು ಹೇಳಿದರು.

**ನವೆಂಬರ್-8 :** ಅಂದು ಬೆಳಗ್ಗೆ 9ಕ್ಕೆ ಕನ್ನಡ ಧ್ವಜಾರೋಹಣ ನೆರವೇರಲಿದ್ದು, ಡಾ. ಶಿವಮೂರ್ತಿ ಶಿವಾಚಾರ್ಯ ಶ್ರೀಗಳು ಸಾನ್ನಿಧ್ಯ ವಹಿಸಲಿದ್ದು, ಡಾ. ಪ್ರದೀಪ್ ಕುಮಾರ್ ಹೆಬ್ರಿ ಉದ್ಘಾಟಿಸಲಿದ್ದಾರೆ.

ಇದಕ್ಕೂ ಮುನ್ನ 8 ಗಂಟೆಗೆ ಭುವನೇಶ್ವರಿ ದೇವಿಯ ಮೆರವಣಿಗೆ ಮತ್ತು ಸಿರಿಗೆರೆ ಶಾಲೆಯ 4 ಸಾವಿರ ಮಕ್ಕಳು ಸಹಸ್ರ ಕಂಠ ಕನ್ನಡ ಗೀತ ಗಾಯನ ಮಾಡಲಿದ್ದಾರೆ.

ಬೆಳಗ್ಗೆ 10ಕ್ಕೆ ಕನ್ನಡ ಸಾಹಿತ್ಯ ಮತ್ತು ಪರಂಪರೆ ವಿಷಯ ಕುರಿತು ಗೋಷ್ಠಿ ನಡೆಯಲಿದ್ದು, ಡಾ. ಕುಮಾರಚಲ್ಯ, ನೀಲಾವರ ಸುರೇಂದ್ರ ಅಡಿಗರು, ಡಾ. ಭೀಮಾಶಂಕರ ಜೋಷಿ ಅವರು ವಿಷಯ ಮಂಡಿಸುವರು.

ಇದೇ ವೇಳೆ ಸರ್ವಜ್ಞನ ವಚನಗಳು, ಡಿವಿಜಿಯವರ ಮಂಕುತಿಮ್ಮನ ಕಗ್ಗದ ತಂತ್ರಾಂಶ ಬಿಡುಗಡೆ ಮಾಡಲಾಗುವುದು. ಕಸಾಪ ಗೌರವ ಕಾರ್ಯದರ್ಶಿಗಳಾದ ರಾಮಲಿಂಗ ಶೆಟ್ಟಿ ಮತ್ತು ಡಾ. ಪದ್ಮಿನಿ ನಾಗರಾಜು ಪಾಲ್ಗೊಳ್ಳಲಿದ್ದಾರೆ.

ಮಧ್ಯಾಹ್ನ 2.30ಕ್ಕೆ ವಿಶ್ರಾಂತ ಪ್ರಾಚಾರ್ಯ ಎಂ.ಜಿ. ರಂಗಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಚರ್ಚಾ ಗೋಷ್ಠಿ ನಡೆಯಲಿದ್ದು, ಡಾ.ವಿ. ಜಯರಾಮಯ್ಯ, ಬೆಂಗಳೂರಿನ ಕಸಾಪ ಅಧ್ಯಕ್ಷ ಎಂ. ಪ್ರಕಾಶ ಮೂರ್ತಿ ಭಾಗವಹಿಸುವರು.

ಸಂಜೆ 6.30ಕ್ಕೆ ರೈತರ ಧ್ವನಿ, ಬೆಟ್ಟದ ಮೇಲೊಂದು ಮನೆಯ ಮಾಡಿ ಹಾಗೂ ಟ್ಯಾಬ್ಲೆಟ್ ಎಂಬ ನಾಟಕ ಪ್ರದರ್ಶನ ನಡೆಯಲಿದೆ.

**ನವೆಂಬರ್-9 :** ಬೆಳಗ್ಗೆ 10ಕ್ಕೆ ತುಮಕೂರು ಹಿರೇಮಠದ ಡಾ. ಶಿವಾನಂದ ಶಿವಾಚಾರ್ಯ ಶ್ರೀಗಳ ಸಮ್ಮುಖದಲ್ಲಿ ಕವಿಗೋಷ್ಠಿ ನಡೆಯಲಿದ್ದು, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಅಧ್ಯಕ್ಷತೆ ವಹಿಸುವರು. ಆರಿಫ್‌ರಜಾ, ಲಿಂಗಯ್ಯ ಬಿ. ಹಿರೇಮಠ ಮತ್ತು ಕೆ.ಎಂ ಶಿವಸ್ವಾಮಿ ಸೇರಿದಂತೆ ಅನೇಕ ಕವಿಗಳು ಭಾಗವಹಿಸುವರು.

ಮಧ್ಯಾಹ್ನ 2.30ಕ್ಕೆ ಜಾನಪದ ಸಂಸ್ಕೃತಿಯ ತಾಯಿಬೇರು ಕಾರ್ಯಕ್ರಮ ನಡೆಯಲಿದ್ದು, ಡಾ. ಚಿಕ್ಕಣ್ಣ ಎಣ್ಣೆಕಟ್ಟೆ, ಡಾ. ಕುರುವ ಬಸವರಾಜ್ ಹಾಗೂ ಡಾ. ನಾಗಪುಷ್ಪಲತಾ ವಿವಿಧ ವಿಷಯಗಳನ್ನು ಮಂಡಿಸಲಿದ್ದಾರೆ. ಎಂ. ಶೈಲಕುಮಾರ್, ಬಿ.ಟಿ. ನಾಗೇಶ್ ಉಪಸ್ಥಿತರಿರುವರು. ಸಂಜೆ 6.30ಕ್ಕೆ ಸುಗಮ ಸಂಗೀತ ಮತ್ತು ಕವಿ ನಮನ ಕಾರ್ಯಕ್ರಮ ನಡೆಯಲಿದೆ.

**ನವೆಂಬರ್-10 :** ಅಂದು ಬೆಳಗ್ಗೆ 10ಕ್ಕೆ ಹೊಸನಗರದ ಅಭಿನವ ಚನ್ನಬಸವ ಶ್ರೀಗಳ ಸಮ್ಮುಖದಲ್ಲಿ 'ಮಹಿಳೆ ಮತ್ತು ಯುವ ಜನತೆ' ವಿಷಯ ಕುರಿತು ಗೋಷ್ಠಿ ನಡೆಯಲಿದೆ. ಡಾ. ಗೀತಾ ಬಸವರಾಜ್, ಸಂಧ್ಯಾ ಶೆಣೈ ಹಾಗೂ ಅಶೋಕ್ ಎಸ್. ಹಂಚಲಿ ವಿಷಯ ಮಂಡಿಸುವರು. ಡಾ.ಹೆಚ್.ಎಲ್. ಮಲ್ಲೇಶಗೌಡ ಹಾಗೂ ನಿಷ್ಠಿ ರುದ್ರಪ್ಪ ಭಾಗವಹಿಸುವರು.

ಮಧ್ಯಾಹ್ನ 2.30ಕ್ಕೆ ಮರೆಯಲಾಗದ ಮಹನೀಯರು ವಿಷಯ ಕುರಿತು ಗೋಷ್ಠಿ ಜರುಗಲಿದ್ದು, ಮೂಲೆಗದ್ದೆ ಅಭಿನವ ಚನ್ನಬಸವ ಶ್ರೀಗಳು, ಡಾ. ಮಹಾಂತೇಶ್ ಬಿರಾದಾರ, ಅನಂತ ದೇಶಪಾಂಡೆ ಹಾಗೂ ಡಾ.ಹೆಚ್.ಟಿ. ಶೈಲಜಾ ವಿಷಯ ಮಂಡಿಸುವರು.

ಸಂಜೆ 6.30ಕ್ಕೆ ಸಮಾರೋಪ ನಡೆಯಲಿದ್ದು, ವಿಶ್ರಾಂತ ಪ್ರಾಧ್ಯಾಪಕ ಡಾ. ಹೆಚ್.ಎಸ್. ಹರಿಶಂಕರ್ ಸಮಾರೋಪ ನುಡಿಗಳನ್ನಾಡುವರು. ಡಾ.ಬಿ.ಎಂ. ಪಟೇಲ ಪಾಂಡು, ಬಿ. ವಾಮದೇವಪ್ಪ, ಕೆ.ಎಸ್. ಸಿದ್ದಲಿಂಗಪ್ಪ ಭಾಗವಹಿಸುವರು.

> **ದಾವಣಗೆರೆ ಜಿಲ್ಲಾ ತರಳಬಾಳು ಜಗದ್ಗುರು ಬೃಹನ್ಮಠ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ**
> **- ಬಿ. ವಾಮದೇವಪ್ಪ, ಜಿಲ್ಲಾಧ್ಯಕ್ಷರು, ಕಸಾಪ**

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಸಾಹಿತಿಗಳ ಹಾಗೂ ವಚನ ಸಾಹಿತ್ಯ, ದಾಸ ಸಾಹಿತ್ಯದ ಪುಸ್ತಕಗಳ ಪ್ರದರ್ಶನ ಏರ್ಪಡಿಸಲಾಗಿದೆ.

ನುಡಿಹಬ್ಬದಲ್ಲಿ ಭಾಗವಹಿಸುವ ಶಿಕ್ಷಕರು ಮತ್ತು ಸಾರ್ವಜನಿಕರಿಗೆ ನಗರದ ಕನ್ನಡ ಭವನದಿಂದ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದೆ. ಭಾಗವಹಿಸುವವರು ನಾಡಿದ್ದು ದಿನಾಂಕ 7ರೊಳಗೆ ಹೆಸರು ನೋಂದಾಯಿಸಬಹುದು. ವಿವರಕ್ಕೆ ಸಂಪರ್ಕಿಸಿ : 9449246195, 9449320703.

ಸುದ್ದಿಗೋಷ್ಠಿಯಲ್ಲಿ ಬಿ. ದಿಳ್ಳಪ್ಪ, ಎನ್. ಎಸ್. ರಾಜು, ಮಲ್ಲಮ್ಮನಾಗರಾಜ್, ನಾಗರಾಜ ಸಿರಿಗೆರೆ ಹಾಗೂ ಜಿಗಳಿ ಪ್ರಕಾಶ್ ಇದ್ದರು.



# ಕನ್ನಡ ನಾಡು ಸಾಹಿತ್ಯ, ಸಂಸ್ಕೃತಿಯಲ್ಲಿ ಅಗ್ರಸ್ಥಾನದಲ್ಲಿದೆ

## ಕೆ.ಎನ್.ಹಳ್ಳಿಯಲ್ಲಿ ಶಾಸಕ ಹರೀಶ್

ಮಲೇಬೆನ್ನೂರು, ನ.5- ಕನ್ನಡ ನಾಡು ಸಾಹಿತ್ಯ, ಸಂಸ್ಕೃತಿಯಲ್ಲಿ ಅಗ್ರಸ್ಥಾನದಲ್ಲಿದ್ದು, 8 ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತರು ನಮ್ಮ ಕನ್ನಡ ನಾಡಿನ ಹಿರಿಮೆಯನ್ನು ಹೆಚ್ಚಿಸಿದ್ದಾರೆಂದು ಶಾಸಕ ಬಿ.ಪಿ.ಹರೀಶ್ ಹೇಳಿದರು.

ಕಡರನಾಯಕನಹಳ್ಳಿ ಗ್ರಾಮದಲ್ಲಿ ಗಜ ಸರ್ಕಲ್ ಬಾಯ್ಸ್ ನಿನ್ನೆ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗ್ರಾಮೀಣ ಪ್ರತಿಭೆಗಳನ್ನು ಗುರುತಿಸುವ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸಂತೋಷಕರ. ಗ್ರಾಮೀಣ ಪ್ರದೇಶದ ಕುರಿಗಾಹಿ ಹನುಮಂತ ನಾಡಿನಲ್ಲೇ ಹೆಸರು ಮಾಡಿರುವುದು ಇಂತಹ ವೇದಿಕೆಗಳ ಸಹಕಾರದಿಂದ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿ, ಗ್ರಾಮೀಣ ಪ್ರದೇಶದ ಗಗನ, ಗಿಲ್ಲಿ ಅವರು ಜಿ ಕನ್ನಡದಲ್ಲಿ ಮಿಂಚುತ್ತಿದ್ದಾರೆ. ಕನ್ನಡ ಭಾಷೆ ಸಾಂಸ್ಕೃತಿಕವಾಗಿ ಮೇರು ಪಂಕ್ತಿಯಲ್ಲಿದೆ ಎಂದರು.

ಗ್ರಾ.ಪಂ.ಮಾಜಿ ಅಧ್ಯಕ್ಷ ಜಿ.ಮಂಜುನಾಥ್, ಮಾಜಿ ಸೈನಿಕ ಗೋಪಾಲ ಶೆಟ್ಟಿ ಮಾತನಾಡಿದರು. ಚಿಗುರು ಕಾನ್ವೆಂಟ್ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಹರಿಹರ ತಾ. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕಸ್ತೂರಮ್ಮ ನಾಗೇಂದ್ರಪ್ಪ ಮತ್ತು ಸೈನಿಕರಾದ ಶಾಂತಕುಮಾರ್, ಹೆಚ್.ಆರ್.ಈಶ್ವರ್, ಕಿರಣ್ ಕುಮಾರ್, ಸುನೀಲ್ ಕುಮಾರ್, ಮಧು ಇವರನ್ನು ಈ ವೇಳೆ ಸನ್ಮಾನಿಸಲಾಯಿತು.

ಗ್ರಾ.ಪಂ ಸದಸ್ಯ ಜಿ.ಲೋಕೇಶ್, ಮಾಜಿ ಸದಸ್ಯ ಟಿ.ಅಶೋಕ್, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಸ್.ಅನಂತರಾವ್, ಮಾಜಿ ಅಧ್ಯಕ್ಷ ಚಕ್ಕಡಿ ಚಂದ್ರಪ್ಪ, ಪೋಸ್ಟ್ ವಸಂತಪ್ಪ ಮತ್ತು ಗಜ ಸರ್ಕಲ್ ವ್ಯಾಪ್ತಿಯ ಎಲ್ಲಾ ಮುಖಂಡರು, ಯುವಕರು ಭಾಗವಹಿಸಿದ್ದರು.

# ಯಜ್ಞ, ದಾನ, ತಪ ಕರ್ಮಗಳು ಮನು ಕುಲದ ರಕ್ಷಕರು

## ಯಲವಟ್ಟಿ ಗುರುಸಿದ್ಧಾಶ್ರಮದ ಶ್ರೀ ಯೋಗಾನಂದ ಸ್ವಾಮೀಜಿ



ಮಲೇಬೆನ್ನೂರು, ನ.5- ಯಜ್ಞ, ದಾನ, ತಪ ಕರ್ಮಗಳು ಮನುಕುಲವನ್ನು ರಕ್ಷಿಸುತ್ತವೆ. ಸತತ ಪ್ರಯತ್ನವೇ ಯಜ್ಞ, ಹಣದ ದಾನವೇ ಆಗಬೇಕೆಂದಿಲ್ಲ ಸಮಾಧಾನವು ದಾನವೇ. ಪ್ರಾಮಾಣಿಕವಾಗಿ ಮಾಡುವ ದಾನವೇ ತಪಕರ್ಮ ಎಂದು ಯಲವಟ್ಟಿ ಗುರುಸಿದ್ಧಾಶ್ರಮದ ಶ್ರೀ ಯೋಗಾನಂದ ಸ್ವಾಮೀಜಿ ಹೇಳಿದರು.

ಯಲವಟ್ಟಿ ಗ್ರಾಮದ ಶ್ರೀ ಗುರು ಸಿದ್ಧಾಶ್ರಮದಲ್ಲಿ ದೀಪಾವಳಿ ಅಮಾವಾಸ್ಯೆ ಪ್ರಯುಕ್ತ ಹಮ್ಮಿಕೊಂಡಿದ್ದ ಸತ್ಸಂಗ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಸತ್ಸಂಗ ದಂತಹ ಕಾರ್ಯಕ್ರಮದಲ್ಲಿ ಬದುಕಿನ ಅರಿವು ಮತ್ತು ಭ್ರಾತೃತ್ವದ, ಮಾತೃತ್ವದ, ಸಾಮರಸ್ಯದ ಅರಿವನ್ನು ಅರಿಯಲು ಸಾಧ್ಯ ಎಂದರು.

ಪ್ರವಚನಕಾರ ಹೊಳೆಸಿರಿಗೆರೆಯ ಸಿದ್ದೇಶ್ ಮಾತನಾಡಿ, ಲೋಕದೊಳಗೆ ಎಲ್ಲರೂ ಸುಖವನ್ನೇ ಬಯಸುತ್ತೇವೆ. ಅದರೊಳಗೆ ದುಃಖವೂ ಇರುತ್ತದೆ. ಅದನ್ನೂ ಸ್ವೀಕರಿಸುವ ಗುಣವಿರಬೇಕು. ಸುಖ ಅಂತರಂಗದ ಕ್ರಿಯೆಯಾಗಿದೆ. ಮನ ಶುದ್ಧತೆಗೆ ಸತ್ಸಂಗವೇ ಪ್ರಧಾನ. ನಿಮ್ಮೊಳಗೆ ಭಗವಂತನಿದ್ದಾನೆ ಮನ ಶುದ್ಧವಾದಲ್ಲಿ ಅರಿವಿನ ಜ್ಯೋತಿ ಬೆಳಗುತ್ತದೆ ಎಂದು ತಿಳಿಸಿದರು.

ವೈದ್ಯ ಜಿಗಳಿಯ ಡಾ. ಎನ್.ಆರ್.ದಿನೇಶ್ ಕುಮಾರ್ ಮತ್ತು ಕುಂದೂರು ಮಂಜಪ್ಪ ಮಾತನಾಡಿದರು. ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ತಾ. ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಕುಂಬಳೂರು ವಾಸು, ಎಂ. ಈಶ್ವರಪ್ಪ, ಹೊಸಮನಿ ಮಲ್ಲಪ್ಪ, ಡಿ.ಜಿ.ನಾಗರಾಜಪ್ಪ, ನಿವೃತ್ತ ಶಿಕ್ಷಕ ಹೆಚ್. ಎನ್.ತಿಪ್ಪೇಶ್, ಮಾಗೋಡು ಸಿದ್ದಪ್ಪ, ವೈ.ಜಿ. ನಾಗರಾಜ್, ನಿವೃತ್ತ ಯೋಧ ಶಿವಕುಮಾರ್, ಬಾವಿಕಟ್ಟಿ ಮಲ್ಲೇಶಪ್ಪ ಮತ್ತು ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಪಾಲ್ಗೊಂಡಿದ್ದರು. ಕುಂಬಳೂರು ಕುಬೇರಪ್ಪ ಭಕ್ತಿಗೀತೆಗಳನ್ನು ಹಾಡಿದರು.

ಕಾರ್ಯಕ್ರಮದ ನಂತರ ಶ್ರೀಗಳ ಕಿರೀಟ ಧಾರಣೆ ಪೂಜೆ ನಡೆಯಿತು. ಯಲವಟ್ಟಿಯ ಪಾರ್ವತಮ್ಮ ಕೋಂ ದಿ. ಮಹೇಶ್ವರಯ್ಯ ಮತ್ತು ಮಕ್ಕಳು ಈ ದಿನದ ದಾಸೋಹಿಗಳಾಗಿದ್ದರು. ಪಿಎಸಿಎಸ್ ಸಿಇಓ ಶೇಖರಪ್ಪ ಸ್ವಾಗತಿಸಿದರು.

# ಪಾಕಿಸ್ತಾನವನ್ನು ಮಣಿಸಿದ ದಿಟ್ಟ ಮಹಿಳೆ ಇಂದಿರಾ ಗಾಂಧಿ

## ಜಿಲ್ಲಾ ಕಾಂಗ್ರೆಸ್‌ನಿಂದ ಇಂದಿರಾ ಗಾಂಧಿ 40ನೇ ವರ್ಷದ ಪುಣ್ಯಸ್ಮರಣೆಯಲ್ಲಿ ಗಣ್ಯರ ಶ್ಲಾಘನೆ



ದಾವಣಗೆರೆ, ನ. 5- ಜಿಲ್ಲಾ ಕಾಂಗ್ರೆಸ್ ವತಿಯಿಂದ ಜಿಲ್ಲಾ ಕಾಂಗ್ರೆಸ್ ಕಛೇರಿಯ ಶಾಮನೂರು ಶಿವಶಂಕರಪ್ಪ ಭವನದಲ್ಲಿ ಮಾಜಿ ಪ್ರಧಾನಿ ಇಂದಿರಾಗಾಂಧಿಯವರ 40ನೇ ಪುಣ್ಯ ಸ್ಮರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮಹಾನಗರ ಪಾಲಿಕೆ ಮಹಾಪೌರ ಕೆ. ಚಮನ್‌ಸಾಬ್ ಅವರು ಮಾತನಾಡಿ, ಪಾಕಿಸ್ತಾನದ ಅಟ್ಟಹಾಸವನ್ನು ಸಮರ್ಥವಾಗಿ ಎದುರಿಸಿದ ದಿಟ್ಟ ಮಹಿಳೆ ಆಗಿದ್ದ ಇಂದಿರಾಗಾಂಧಿ ಅವರು, ಪೂರ್ವ ಪಾಕಿಸ್ತಾನದ ನಾಗರಿಕರ ವಿರುದ್ಧ ಪಾಕಿಸ್ತಾನ ಸೇನಾ ಪಡೆ ವ್ಯಾಪಕ ದೌರ್ಜನ್ಯ ನಡೆಸಿತು. ಸುಮಾರು 10 ದಶಲಕ್ಷ ನಿರಾಶ್ರಿತರು ಭಾರತಕ್ಕೆ ವಲಸೆ ಬಂದು ದೇಶದಲ್ಲಿ ಅಭದ್ರತೆ ಸೃಷ್ಟಿಸಿ ಆರ್ಥಿಕ ಮುಗ್ಗಟ್ಟು ಎದುರಾದ ಹಿನ್ನೆಲೆಯಲ್ಲಿ ಆಗ 1971ರ ಯುದ್ಧದಲ್ಲಿ ಭಾರತ ಪಾಕಿಸ್ತಾನವನ್ನು ಬಗ್ಗು ಬಡಿದು ಬಾಂಗ್ಲಾ ದೇಶ ಹುಟ್ಟಿಹಾಕಿದರು ಎಂದರು.

ಇಂದಿರಾಗಾಂಧಿ ಅವರು ಪಾಕಿಸ್ತಾನದ ಮೇಲೆ ಯುದ್ಧ ಮಾಡಿ 70 ಸಾವಿರ ಸೈನಿಕರನ್ನು ಬಂಧಿಸಿದ್ದರು. ಆದರೆ ಈಗಿನ ಪ್ರಧಾನಿ ಮೋದಿ ಅವರು ಕಳೆದ 5 ವರ್ಷಗಳ ಹಿಂದೆ ಪುಲ್ವಾಮದಲ್ಲಿ ದೇಶದ ಸೈನಿಕರನ್ನು ಬಲಿ ತೆಗೆದುಕೊಂಡು ಪಾಕಿಸ್ತಾನದ ಖಾಲಿ ಜಾಗದಲ್ಲಿ ಬಾಂಬ್ ಹಾಕಿಸಿದರೆ ವಿನಃ ಪಾಕಿಸ್ತಾನದ ಮೇಲೆ ಯುದ್ಧ ಸಾರಲಿಲ್ಲ. ಕೇವಲ ರಾಜಕೀಯ ಕಾರಣಕ್ಕೆ ಪಾಕಿಸ್ತಾನವನ್ನು ದ್ವೇಷಿಸುತ್ತಿದ್ದಾರೆ ಎಂದು ದೂರಿದರು.

ಇಂದಿರಾಗಾಂಧಿ ಅವರ ದಿಟ್ಟತನ ನೋಡಿದ ಅಂದಿನ ವಿರೋಧ ಪಕ್ಷದ ನಾಯಕ ವಾಜಪೇಯಿ ಅವರೇ ಇಂದಿರಾಗಾಂಧಿ ಅವರನ್ನು ಹಾಡಿ ಹೊಗಳಿದರು. ಅವರ ನಿಧನದಿಂದ ದೇಶದಲ್ಲಿ ಅಲ್ಲೋಲ ಕಲ್ಲೋಲ ಆಗಿ ಕೋಟ್ಯಾಂತರ ಬಡವರು ಕಣ್ಣೀರು ಹಾಕಿದರು ಎಂದರು.

ಜಿಲ್ಲಾ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ ಮಾತನಾಡಿ, ಶೋಷಿತರು, ಬಡವರ ಬಗ್ಗೆ ಕಾಳಜಿ ಹೊಂದಿದ್ದ ಇಂದಿರಾಗಾಂಧಿ ಅವರು ಬ್ಯಾಂಕ್ ಗಳ ರಾಷ್ಟ್ರೀಕರಣ ಮಾಡಿದ್ದಲ್ಲದೇ ರಾಜಧನವನ್ನು ರದ್ದುಪಡಿಸಿದರು. ಅವರ ಆಡಳಿತ ಸುವರ್ಣ ಆಡಳಿತ ಕಾಲ ಎಂದು ನೆನಪಿಸಿಕೊಂಡರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಮಾತನಾಡಿ, ಇಂದಿರಾಗಾಂಧಿ ಅವರು ರೂಪಿಸಿದ ಎಲ್ಲಾ ಯೋಜನೆಗಳು ಬಡವರ ಪರವಾಗಿದ್ದವು. ಇಂದಿರಾಗಾಂಧಿ ಅವರು ಭಾರತ ದೇಶದ ಸ್ತ್ರೀ ಸಂಕೇತವಾಗಿದ್ದಾರೆ ಎಂದರು.

ಸತ್ಯಾಗ್ರಹಗಳಿಂದ ಮಹಾನಾಯಕ ಎಂದು ಗುಜರಾತಿನಲ್ಲಿ ಜನಮನ್ನಣೆ ಪಡೆದು, ಭಾರತದಾದ್ಯಂತ ರಾಜಕೀಯ ಧುರೀಣರ ಮೆಚ್ಚುಗೆಯನ್ನು ಗಳಿಸಿದ ಪಟೇಲರು, ಅಸ್ಪೃಶ್ಯತೆ, ಮದ್ಯಪಾನ, ಬಡತನ ಹಾಗೂ ಅಜ್ಞಾನದ ವಿರುದ್ಧ ವ್ಯಾಪಕ ಚಳುವಳಿ ನಡೆಸಿದರು ಎಂದರು.

ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್ ಮಾತನಾಡಿ, ಪಾಕಿಸ್ತಾನ ಮತ್ತು ಚೀನಾದ ವಿರುದ್ಧದ ಯುದ್ಧ ನಡೆಸಿ ಯಶಸ್ವಿಯಾದ ಇಂದಿರಾಗಾಂಧಿ ಅವರು, ಬಡವರ ಪರ ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದರು ಎಂದು ಹೇಳಿದರು.

ಮಹಾನಗರ ಪಾಲಿಕೆ ಉಪ ಮಹಾಪೌರರಾದ ಸೋಗಿ ಶಾಂತಕುಮಾರ್ ಮಾತನಾಡಿ, ಭಾರತ ದೇಶ ಕಟ್ಟಲು ಜವಾಹರ್ ಲಾಲ್ ನೆಹರು ಮತ್ತು ಇಂದಿರಾಗಾಂಧಿ ಅವರ ಕೊಡುಗೆ ಮಹತ್ವಾದಾಗಿದೆ ಎಂದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯ ಶ್ರೀಮತಿ ಸುಧಾ ಇಟ್ಟಿಗುಡಿ ಮಂಜುನಾಥ್, ಎ. ನಾಗರಾಜ್, ಹನುಮಂತರಾಜ್, ಮಹಿಳಾ ಕಾಂಗ್ರೆಸ್‌ನ ರಾಜೇಶ್ವರಿ, ಮಂಗಳಮ್ಮ, ಜವಾಹರ್ ಲಾಲ್ ಮಂಚ್‌ನ ರಾಜ್ಯಾಧ್ಯಕ್ಷ ಮೈನುದ್ದೀನ್, ದೇವರಹಟ್ಟಿ ಸಮೀವುಲ್ಲಾ, ವಕೀಲರಾದ ಪರಮೇಶ್, ರಾಕೇಶ್, ಇಟ್ಟಿಗುಡಿ ಮಂಜುನಾಥ್, ಕೊಡಪಾನ ದಾದಾಪೀರ್, ಮೊಟ್ಟೆ ದಾದಾಪೀರ್, ಬಾತಿ ಶಿವಕುಮಾರ್, ಮಾರುತಿ, ಬಡೇಸಾಬ್, ಯುವರಾಜ್ ಮತ್ತಿತರರಿದ್ದರು.

# ಉತ್ತರ ಪ್ರದೇಶದ ಮದರಸಾ ಕಾಯ್ದೆ ಸಿಂಧು ಎಂದ ಸುಪ್ರೀಂ ಕೋರ್ಟ್

ನವದೆಹಲಿ, ನ. 5 - ಉತ್ತರ ಪ್ರದೇಶದ ಮದರಸಾಗಳಿಗೆ ಸಂಬಂಧಿಸಿದಂತೆ 2004ರಲ್ಲಿ ರೂಪಿಸಲಾಗಿದ್ದ ಮದರಸ ಕಾಯ್ದೆಯ ಸಿಂಧುತ್ವ ವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ.

ಸೆಕ್ಯುಲರಿಸಂ ಆಧಾರದ ಮೇಲೆ ಈ ಕಾಯ್ದೆಯನ್ನು ರದ್ದುಗೊಳಿಸಲಾಗದು ಎಂದು ನ್ಯಾಯಾಲಯ ಹೇಳಿದೆ.

ಕಾಯ್ದೆಯನ್ನು ರದ್ದುಗೊಳಿಸಿದ್ದ ಅಲಹಾ ಬಾದ್ ಹೈಕೋರ್ಟ್, ಉತ್ತರಪ್ರದೇಶದ 16 ಸಾವಿರಕ್ಕೂ ಹೆಚ್ಚು ಮದರಸಗಳಲ್ಲಿರುವ ವಿದ್ಯಾರ್ಥಿಗಳನ್ನು ಔಪಚಾರಿಕ ಶಾಲೆಗಳಿಗೆ ವರ್ಗಾಯಿಸಬೇಕು ಎಂದು ತಿಳಿಸಿತ್ತು.

ಈ ಬಗ್ಗೆ ವಿಚಾರಣೆ ನಡೆಸಿರುವ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ, ಮದರಸಾ ಕಾಯ್ದೆಯು ಶಾಸಕಾಂಗದ ವ್ಯಾಪ್ತಿಗೆ ಬರುತ್ತದೆ. ಈ ಬಗ್ಗೆ ಹೈಕೋರ್ಟ್ ನಿರ್ಧರಿಸಲಾಗದು ಎಂದು ತಿಳಿಸಿದೆ.

# ವಕ್ಫ್ ಸಮಿತಿ ಅಧ್ಯಕ್ಷ ಪಾಲ್ ರಾಜ್ಯಕ್ಕೆ ಭೇಟಿ

ಬೆಂಗಳೂರು, ನ. 5 - ವಕ್ಫ್ ತಿದ್ದುಪಡಿ ಕಾಯ್ದೆ ಕುರಿತ ಸಂಸತ್ತಿನ ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಜಗದಂಬಿಕ ಪಾಲ್ ಅವರು ನವಂಬರ್ 7ರಂದು ಹುಬ್ಬಳ್ಳಿ ಹಾಗೂ ವಿಜಯಪುರಕ್ಕೆ ಭೇಟಿ ನೀಡಲಿದ್ದಾರೆ.

ವಕ್ಫ್ ಮಂಡಳಿ ಕ್ರಮಗಳ ಕಾರಣದಿಂದಾಗಿ ಸಂಕಷ್ಟ ಎದುರಿಸುತ್ತಿರುವ ಹುಬ್ಬಳ್ಳಿ ಹಾಗೂ ವಿಜಯಪುರ ರೈತರನ್ನು ಅವರು ಭೇಟಿ ಮಾಡಲಿದ್ದಾರೆ.

ಜಗದಂಬಿಕ ಪಾಲ್ ಅವರು ರಾಜ್ಯಕ್ಕೆ ಭೇಟಿ ನೀಡಿ ರೈತರ ಜೊತೆ ಚರ್ಚಿಸಬೇಕು ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರು ಮನವಿ ಮಾಡಿಕೊಂಡಿ ದ್ದರು. ಅದರಂತೆ ಪಾಲ್ ರಾಜ್ಯಕ್ಕೆ ಭೇಟಿ ನೀಡುತ್ತಿದ್ದಾರೆ.

# ಶಿಗ್ಗಾಂವಿ ಚುನಾವಣೆಯಲ್ಲಿ ಪ್ರಚಾರ



ದಾವಣಗೆರೆ, ನ.5- ಶಿಗ್ಗಾಂವಿ ವಿಧಾನ ಉಪಚುನಾವಣೆಯ ಹಿರೇಬೆಂಡಿಗೆರೆ ಗ್ರಾಮದಲ್ಲಿ ನಡೆದ ಪ್ರಚಾರ ಕಾರ್ಯಕ್ರಮದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಬಿ. ಎಚ್. ವೀರಭದ್ರಪ್ಪ, ಉಪ ಮಹಾಪೌರ ಸೋಗಿ ಶಾಂತಕುಮಾರ್, ಹರಿಹರದ ನಂದಿಗಾವಿ ಶ್ರೀನಿವಾಸ್, ಎಸ್.ಸಿ. ಕಾಂಗ್ರೆಸ್ ಜಿಲ್ಲಾ ಕಾರ್ಯದರ್ಶಿ ಜಿ. ರಾಕೇಶ್, ಸಂಘಟನಾ ಕಾರ್ಯದರ್ಶಿ ಬಿ. ಆರ್. ಶಿವಮೂರ್ತಿ ಭಾಗವಹಿಸಿದ್ದರು.

# 'ಗ್ಯಾರಂಟಿ'ಯಿಂದ ರಾಜ್ಯ ದಿವಾಳಿ



**ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಕೆ.ಎಸ್. ಸಿದ್ದಬಸಪ್ಪ**

ರಾಣೇಬೆನ್ನೂರು, ನ.5- ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದಾಗಿ ರಾಜ್ಯವು ಆರ್ಥಿಕ ದಿವಾಳಿಯತ್ತ ಸಾಗುವಂತಾಗಿದೆ. ಇದನ್ನರಿತ ಮತದಾರರು ಮೂರು ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸುತ್ತಾರೆ ಎಂದು ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಕೆ.ಎಸ್. ಸಿದ್ದಬಸಪ್ಪ ಯಾದವ್ ಹೇಳಿದರು. ಮಂಗಳವಾರ ನಗರದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಮೂರು ಕ್ಷೇತ್ರಗಳ ಪೈಕಿ ರಾಜ್ಯದ ಗಮನ ಸೆಳೆದಿರುವ ಚನ್ನಪಟ್ಟಣದಲ್ಲಿ ನಿಖಿಲ್ ಕುಮಾರಸ್ವಾಮಿಯವರು ನಿರೀಕ್ಷೆಗೂ ಮೀರಿ ದಾಖಲೆ ಪ್ರಮಾಣದಲ್ಲಿ ಗೆಲುವು ಸಾಧಿಸಲಿದ್ದಾರೆ ಎಂದರು. ಶಿಗ್ಗಾಂವಿ, ಸಂಡೂರು ಹಾಗೂ ಚನ್ನಪಟ್ಟದಲ್ಲಿ ಬಿಜೆಪಿ ಅಭ್ಯರ್ಥಿಗಳು ಅಭೂತಪೂರ್ವ ಜಯವನ್ನು ಸಾಧಿಸಲಿದ್ದಾರೆ. ಸಿದ್ದರಾಮಯ್ಯ ನವರು ಅಧಿಕಾರದ ದುರಾಸೆಯಿಂದ ಗ್ಯಾರಂಟಿ ಯೋಜನೆಗಳ ಆಮಿಷದ ಮೂಲಕ ರಾಜ್ಯದಲ್ಲಿ ಅಧಿಕಾರದ ಚುಕ್ಕಾಣೆ ಹಿಡಿದು ರಾಜ್ಯವನ್ನು ಆರ್ಥಿಕವಾಗಿ ದಿವಾಳಿಯತ್ತ ಕೊಂಡೊಯ್ಯುತ್ತಿದ್ದಾರೆ ಎಂದು ಯಾದವ್ ಕಿಡಿಕಾರಿದರು.

# ನಾಡಿದ್ದು ಪಾಲಿಕೆ ಸ್ಥಾಯಿ ಸಮಿತಿಗೆ ಚುನಾವಣೆ


ದಾವಣಗೆರೆ, ನ.5- ಇಲ್ಲಿನ ಮಹಾನಗರ ಪಾಲಿಕೆಯ ನಾಲ್ಕು ಸ್ಥಾಯಿ ಸಮಿತಿಗಳ ಸದಸ್ಯರ ಸ್ಥಾನಗಳಿಗೆ ಇದೇ ದಿನಾಂಕ 8 ರಂದು ಮಧ್ಯಾಹ್ನ 3 ಗಂಟೆಗೆ ಚುನಾವಣಾ ಸಭೆಯನ್ನು ಆಯೋಜಿಸಲಾಗಿದೆ. ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ಅಮ್ಲಾನ್ ಆದಿತ್ಯ ಬಿಸ್ವಾಸ್ ಅಧ್ಯಕ್ಷತೆ ವಹಿಸುವರು.

**ಚುನಾವಣಾ ವೇಳಾಪಟ್ಟಿ:** ದಿನಾಂಕ 8 ರಂದು ಮಧ್ಯಾಹ್ನ 12 ರಿಂದ 1 ಗಂಟೆಯವರೆಗೆ ನಾಮಪತ್ರ ಸ್ವೀಕರಿಸುವುದು. ಮಧ್ಯಾಹ್ನ 3 ಗಂಟೆಗೆ ಸಭೆ ಪ್ರಾರಂಭಿಸಿ ಹಾಜರಾತಿ ಪಡೆಯುವುದು. ನಂತರ ನಾಮಪತ್ರಗಳ ಪರಿಶೀಲನೆ, ಕ್ರಮಬದ್ದ ನಾಮಪತ್ರಗಳ ಘೋಷಣೆ, ಉಮೇದುವಾರಿಕೆಯನ್ನು ಹಿಂತೆಗೆದು ಕೊಳ್ಳುವುದು, ಚುನಾವಣೆ ಅಗತ್ಯವಿದ್ದಲ್ಲಿ ಮತದಾನ ಪ್ರಕ್ರಿಯೆ ನಡೆಸುವುದು, ಮತಗಳ ಎಣಿಕೆ ಹಾಗೂ ಫಲಿತಾಂಶ ಘೋಷಣೆ ಮಾಡಲಾಗುವುದೆಂದು ಅವರು ತಿಳಿಸಿದ್ದಾರೆ.

# ರಾಣೇಬೆನ್ನೂರಿನಲ್ಲಿ ಇಂದು - ನಾಳೆ ನೀರು ಪೂರೈಕೆಯಲ್ಲಿ ವ್ಯತ್ಯಯ

ನೀರು ಸರಬರಾಜು ಮುಖ್ಯ ಕೊಳವೆ ಮಾರ್ಗದ ದುರಸ್ತಿ ಕಾಮಗಾರಿ ಪ್ರಯುಕ್ತ ಇಂದು ಮತ್ತು ನಾಳೆ ನಗರಕ್ಕೆ 24/7 ನಿರಂತರ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

**RAJASTHAN TOUR**
Dep: 29th Nov, 10 Days
Premium Group Tour
Rs, 59,600 pp Includes:
Flight Ticket 3 Star Hotels
South Indian meals Volvo
bus transfer Local Tour
Manager Please Contact :
**DVG WORLD TOURS**
P.J. Exten, Davangere
**99006 66122**
**99862 30333**




**ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ**
ರೈಲ್ವೇ ನಿಲ್ದಾಣದ ಎದುರು, ಪಿ.ಬಿ ರಸ್ತೆ, ದಾವಣಗೆರೆ.
PH: 08192-252899/232008, FAX: 08192-252899

ಸಂಖ್ಯೆ: ದಾಮಪಾ/ಆಶಾ/Water + /ಸಿಆರ್-02/2024-25 ದಿನಾಂಕ: 05/11/2024

**ಸಾರ್ವಜನಿಕ ಪ್ರಕಟಣೆ**

ದಾವಣಗೆರೆ ಮಹಾನಗರ ಪಾಲಿಕೆಯು ಕೇಂದ್ರ ಸರ್ಕಾರದ ಸ್ವಚ್ಛ ಭಾರತ್ ಮಿಷನ್ ಯೋಜನೆ ಅಡಿಯಲ್ಲಿ ಈಗಾಗಲೇ ವಾಣಿಜ್ಯ/ಮಾರುಕಟ್ಟೆ ಮತ್ತು ಸಾರ್ವಜನಿಕ ಪ್ರದೇಶಗಳಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ಹಾಗೂ ಕೊಳಗೇರಿ ಪ್ರದೇಶಗಳಲ್ಲಿ ಸಾರ್ವಜನಿಕರು ಬಯಲಿನಲ್ಲಿ ಶೌಚಕ್ಕೆ ತೆರಳದಂತೆ ಸಮುದಾಯ ಶೌಚಾಲಯಗಳನ್ನು ಎಲ್ಲಾ ಸೌಲಭ್ಯಗಳೊಂದಿಗೆ ಅಂದರೆ ನೀರಿನ ವ್ಯವಸ್ಥೆ, ಒಳ ಚರಂಡಿ ಸಂಪರ್ಕ, ವಿದ್ಯುತ್ ಸಂಪರ್ಕ ಇತ್ಯಾದಿ ವ್ಯವಸ್ಥೆಯೊಂದಿಗೆ ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸಲಾಗಿದ್ದು ಹಾಗೂ ವೈಯಕ್ತಿಕವಾಗಿ ಸಾರ್ವಜನಿಕರು ತಮ್ಮ ಮನೆಗಳಲ್ಲಿ ವೈಯಕ್ತಿಕ ಶೌಚಾಲಯಗಳನ್ನು ಕಟ್ಟಿಸಿಕೊಳ್ಳಲು ಸದರಿ ಯೋಜನೆ ಮೂಲಕ ಫಲಾನುಭವಿಗಳಿಗೆ ಸಹಾಯಧನವನ್ನು ನೀಡಿ ಪ್ರೋತ್ಸಾಹಿಸಲಾಗಿದ್ದು ಅರ್ಹ ಫಲಾನುಭವಿಗಳು ವೈಯಕ್ತಿಕ ಶೌಚಾಲಯಗಳನ್ನು ಸಂಪೂರ್ಣವಾಗಿ ನಿರ್ಮಿಸಿಕೊಂಡಿರುತ್ತಾರೆ. ಹಾಗೆಯೇ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ಕೊಳಚೆ ನೀರನ್ನು ಚರಂಡಿ, ಕೆರೆ ಅಥವಾ ತೆರದೆ ಪ್ರದೇಶಗಳಿಗೆ ಬಿಡದೇ ಪಾಲಿಕೆ ಒಳಚರಂಡಿ ಸಂಸ್ಕರಣಾ ಘಟಕಗಳಲ್ಲಿ ವೈಜ್ಞಾನಿಕವಾಗಿ ಸಂಸ್ಕರಿಸಲಾಗುತ್ತಿದ್ದು, ಸದರಿ ಸಂಸ್ಕರಿಸಿದ ನೀರನ್ನು ಮರುಬಳಕೆ ಮಾಡಲಾಗುತ್ತಿದೆ. ಹಾಗೆಯೇ ಒಳಚರಂಡಿ ನಿರ್ವಹಣೆಯನ್ನು ಸಂಪೂರ್ಣವಾಗಿ ಯಾಂತ್ರೀಕೃತಗೊಳಿಸಿದ್ದು, ಒಳಚರಂಡಿ ನಿರ್ವಹಣೆ ವೆಚ್ಚವನ್ನು ಪಾಲಿಕೆಯ ಕಂದಾಯದ ಮೂಲಕ ವಸೂಲಿ ಮಾಡಲಾಗುತ್ತಿದ್ದು, ಹಾಗು ಜಿಲ್ಲಾ ಮಟ್ಟದಲ್ಲಿ RSA (Responsible Sanitation Authority) ಹಾಗು ಪಾಲಿಕೆ ವತಿಯಿಂದ SRU (Sanitation Response Unit) ಸ್ಥಾಪಿಸಲಾಗಿದೆ.

ಆದ ಕಾರಣ ಪಾಲಿಕೆಯು ಸ್ವಚ್ಛ ಭಾರತ್ ಮಿಷನ್ ಯೋಜನೆಯ Water + (Water Plus) ಪ್ರಮಾಣೀಕರಣಕ್ಕೆ ಅವಶ್ಯವಿರುವ ಎಲ್ಲಾ ಮಾನದಂಡಗಳನ್ನು ಅನುಸರಿಸಿರುವ ಕಾರಣ ನಗರವನ್ನು Water Plus ಎಂದು ಘೋಷಿಸಲು ಸಾರ್ವಜನಿಕ ಪ್ರಕಟಣೆ ಹೊರಡಿಸುವ ನಿಟ್ಟಿನಲ್ಲಿ, ಸಾರ್ವಜನಿಕರಿಂದ ಸಂಘ-ಸಂಸ್ಥೆಗಳಿಂದ ಸಲಹೆ, ಸೂಚನೆಗಳು, ಆಕ್ಷೇಪಣೆಗಳು ಇದ್ದಲ್ಲಿ ಆರೋಗ್ಯ ಶಾಖೆ, ಮಹಾನಗರ ಪಾಲಿಕೆ ಕಾರ್ಯಾಲಯ, ರೈಲ್ವೇ ನಿಲ್ದಾಣ ಎದುರು, ಪಿ. ಬಿ. ರಸ್ತೆ, ದಾವಣಗೆರೆ ಈ ಕಛೇರಿಗೆ ಲಿಖಿತ ರೂಪದಲ್ಲಿ ದಿನಾಂಕ: 15/11/2024 ರೊಳಗಾಗಿ ಸಲ್ಲಿಸಲು ಕೋರಿದೆ.

**ಆಯುಕ್ತರು,**
**ಮಹಾನಗರ ಪಾಲಿಕೆ, ದಾವಣಗೆರೆ**

# ಬೇಕು ಎಂಬುದು ನೋವುಂಟು ಮಾಡಿದರೆ, ಸಾಕು ಎಂಬುದು ನಲಿವುಂಟು ಮಾಡುತ್ತದೆ



**ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿ ಅಭಿಮತ**

ದಾವಣಗೆರೆ, ನ. 5- ಲಿಂ. ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಭವರೋಗ ವೈದ್ಯರಾಗಿ ಸಮಾಜಕ್ಕೆ ನೀಡಿದ ಕೊಡುಗೆ ಅನನ್ಯ. ಅವರೊಬ್ಬ ಸಮನ್ವಯ ಮೂರ್ತಿಗಳಾಗಿದ್ದರು. ಅಧ್ಯಾತ್ಮ, ಶಿಕ್ಷಣ ಕ್ಷೇತ್ರದಲ್ಲಿ ಅದ್ಭುತ ಕ್ರಾಂತಿ ಮಾಡಿದವರಾಗಿದ್ದಾರೆ ಎಂದು ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ವಾಗೀಶ ಶ್ರೀಗಳ ಸೇವೆಯನ್ನು ಸ್ಮರಿಸಿದರು.

ನಗರದ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿಯವರ ಹಿರೇಮಠದ ಆವರಣದಲ್ಲಿ ಹಮ್ಮಿಕೊಂಡಿದ್ದ ಲಿಂ. ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರ 38 ನೇ ವಾರ್ಷಿಕ ಪುಣ್ಯಸ್ಮರಣೆ ಹಾಗೂ ಲಿಂ. ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರ 13 ನೇ ಪುಣ್ಯಾರಾಧನೆ, ಜನಜಾಗೃತಿ ಧರ್ಮ ಸಮ್ಮೇಳನದ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡಿದರು.

ಶ್ರೀಶೈಲ ಕ್ಷೇತ್ರವನ್ನು ಜಗತ್ ಪ್ರಸಿದ್ಧಿ ಮಾಡಿದ ಕೀರ್ತಿ ವಾಗೀಶ ಶ್ರೀಗಳಿಗೆ ಸಲ್ಲುತ್ತದೆ. ಏಳು ಭಾಷೆಗಳನ್ನು ನಿರರ್ಗಳವಾಗಿ ಮಾತನಾಡಬಲ್ಲ ಶಕ್ತಿ ಅವರಲ್ಲಿತ್ತು. ವೀರಶೈವ ಪರಂಪರೆ ಕುರಿತು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಆದರೆ ಪಟ್ಟಭದ್ರ ಹಿತಾಸಕ್ತಿಗಳ ಕುಯುಕ್ತಿಯಿಂದಾಗಿ ಕೆಲವು ಪುಟಗಳು ಮಾಯವಾಗಿದ್ದು, ಇತಿಹಾಸ ಮರೆಯಾದ ಸತ್ಯ ಎಂದು ವಿಷಾದಿಸಿದರು.

ಆರು ಆಯುರ್ವೇದ ಗ್ರಂಥಗಳನ್ನು ಬರೆದಿದ್ದು, ಅದರಲ್ಲಿ ಈಗಾಗಲೇ ಎರಡು ಗ್ರಂಥಗಳು ಬಿಡುಗಡೆಯಾಗಿದ್ದು, ಉಳಿದ ನಾಲ್ಕು ಗ್ರಂಥಗಳನ್ನು ಪರಿಷ್ಕರಣೆ ಮಾಡಿ ಪ್ರಕಟ ಮಾಡುವಂತೆ ಪ್ರಸ್ತುತು ಜಗದ್ಗುರುಗಳಲ್ಲಿ ಭಿನ್ನವಿಸಿಕೊಂಡರು.

ಅಥಣಿಯ ಮುರುಗೇಂದ್ರ ಶಿವಯೋಗಿಗಳ ಬಗ್ಗೆ ಸುಪ್ರಭಾತ ಬರೆಯುವ ಮೂಲಕ ಗುರು-ವಿರಕ್ತ ಪರಂಪರೆ ಎಷ್ಟು ಗಟ್ಟಿಯಾಗಿತ್ತೆಂದು ತೋರಿಸಿಕೊಟ್ಟವರು. ಸ್ವಸ್ಥ ಸಮಾಜ ನಿರ್ಮಾಣ ಮಾಡುವಲ್ಲಿ ಮಹತ್ತರ ಪಾತ್ರ ವಹಿಸಿದ್ದರು ಎಂದು ಶ್ರೀಗಳ ಸೇವಾ ಕಾರ್ಯಗಳನ್ನು ಕೊಂಡಾಡಿದರು.

ಉಮಾಪತಿ ಪಂಡಿತಾರಾಧ್ಯ ಶ್ರೀಗಳು ಶ್ರೀಶೈಲ ಪೀಠಕ್ಕೆ ನೇರವಾಗಿ ಜಗದ್ಗುರುಗಳಾದವರು. ನೇರ ನುಡಿಯ, ವಿಶೇಷ ವ್ಯಕ್ತಿತ್ವವುಳ್ಳವರಾಗಿದ್ದರು. ಸಮಾಜಕ್ಕೆ ಬಹಳ ದೊಡ್ಡ ಕೊಡುಗೆ ನೀಡಿದ್ದರು ಎಂದು ಹೇಳಿದರು.

ಪ್ರಸ್ತುತ ಡಾ. ಚನ್ನಸಿದ್ಧರಾಮ ಶ್ರೀಗಳು ಸಹ ಶ್ರೀಶೈಲ ಪೀಠವನ್ನು ಅತ್ಯಂತ ಎತ್ತರಕ್ಕೆ ಕೊಂಡೊಯ್ಯುವ ಕೆಲಸ ಮಾಡುತ್ತಾ ಬಂದಿದ್ದಾರೆ. ಶಿರಾಳಕೊಪ್ಪ ಮತ್ತು ಸಿರಗುಪ್ಪ ಪಟ್ಟಣಗಳಲ್ಲಿನ ನಿರುಪಯುಕ್ತ ಜಾಗದಲ್ಲಿ ಸುಸಜ್ಜಿತ ಕಲ್ಯಾಣ ಮಂಟಪ ನಿರ್ಮಾಣ ಮಾಡುವ ಮೂಲಕ ಉತ್ತಮ ಸೇವಾ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ. ಅವರು 'ಅಭಿನವ ಪಂಡಿತಾರಾಧ್ಯರು' ಎಂದು ಬಣ್ಣಿಸಿದರು.

ಯಾವುದೇ ಬಿಟ್ಟಿ ಭಾಗ್ಯಗಳಿಗೆ ಮನಸೋಲದೇ, ಸತ್ಯ ಶುದ್ಧ ಕಾಯಕ ಮಾಡಿ ದುಡಿಮೆಯ ಹಣದಿಂದ ಬದುಕು ಸಾಗಿಸುವವರೇ ನಿಜವಾದ ಶಕ್ತಿ ಸ್ವರೂಪಿಣಿಯರು. ಬೇಕು ಎಂಬುದು ನೋವುಂಟು ಮಾಡಿದರೆ, ಸಾಕು ಎಂಬುದು ನಲಿವುಂಟು ಮಾಡುತ್ತದೆ ಎಂದು ಮಾರ್ಮಿಕವಾಗಿ ನುಡಿದರು.

'ಆರೋಗ್ಯ ಮತ್ತು ಅಧ್ಯಾತ್ಮ' ವಿಷಯ ಕುರಿತು ಉಪನ್ಯಾಸ ನೀಡಿದ ಸಾಹಿತಿ ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ ಅವರು, ಶರೀರದ ಆರೋಗ್ಯ ಉತ್ತಮವಾಗಿರಬೇಕಾದರೆ ಅಧ್ಯಾತ್ಮ ಅತಿ ಮುಖ್ಯ. ಅಧ್ಯಾತ್ಮ ಮತ್ತು ಆರೋಗ್ಯ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದರು.

ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿಯೇ ಆಧ್ಯಾತ್ಮದ ದೀಕ್ಷೆ ನೀಡಬೇಕು. ಪಂಚೇಂದ್ರಿಯಗಳನ್ನು ನಿಯಂತ್ರಣದಲ್ಲಿಟ್ಟು ಕೊಳ್ಳಲು ಮತ್ತು ಸದಾ ಸುಖಿ, ಸದಾ ಹಸನ್ಮುಖಿಯಾಗಿರಲು ಅಧ್ಯಾತ್ಮ ತೀರಾ ಅವಶ್ಯ ಎಂದು ಒತ್ತಿ ಹೇಳಿದರು.

ಕ್ರೋಧ ಹೆಚ್ಚಾದವರಿಗೆ ಹೃದಯಾಘಾತ ಉಂಟಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ತಂಬಾಕು, ಆಲ್ಕೋಹಾಲ್, ಡ್ರಗ್ಸ್ ಮೋಹದಿಂದ ಬದುಕು ನರಕ ಸದೃಶ್ಯವಾಗುತ್ತಿದೆ. ಗುಟಕಾ ಯುವ ಸಮೂಹವನ್ನೇ ನಾಶ ಮಾಡುತ್ತಿದೆ. ಆಧ್ಯಾತ್ಮದ ಒಲವು ಇಲ್ಲದವರು ವ್ಯಸನಿಗಳಾಗುತ್ತಿದ್ದಾರೆಂದು ಹಿತ ನುಡಿದರು.

ಲೋಭದ ಅತಿರೇಕ ಕಡಿಮೆ ಮಾಡಲು ಅಧ್ಯಾತ್ಮ ಅಗತ್ಯ. ಕೋವಿಡ್ ನಂತರ ಶೇ. 30 ರಷ್ಟು ಜನರಿಗೆ ಬೊಜ್ಜು ಹೆಚ್ಚಾಗಿದೆ. ಸಾಂಕ್ರಾಮಿಕಕ್ಕಿಂತ ಅಸಾಂಕ್ರಾಮಿಕ ರೋಗ ಹೆಚ್ಚಾಗಿವೆ. ಪ್ರತಿಯೊಬ್ಬರೂ ಆರೋಗ್ಯವಂತರಾಗುವ ಮೂಲಕ ಸತ್ಯ ಶುದ್ಧ ಕಾಯಕದಲ್ಲಿ ತೊಡಗುವಂತೆ ಕರೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಮಕ್ಕಳ ಮೇಲೂ ಒತ್ತಡ ಹೆಚ್ಚಾಗಿದೆ. ಮೂರರಿಂದ ಆರು ಗಂಟೆ ಒಂದೇ ಕಡೆ ಕುಳಿತರೆ ಹೃದಯಾಘಾತ ಸಾಧ್ಯತೆ ಹೆಚ್ಚು. ನಿದ್ದೆ ಕಡಿಮೆಯಾಗುವುದು ಸಹ ಹೃದಯ ಸ್ತಂಭನಕ್ಕೆ ಕಾರಣ. ಕಡಿಮೆ ತಿನ್ನಬೇಕು, ಹೆಚ್ಚು ಚಟುವಟಿಕೆಯಿಂದ ಇದ್ದರೆ ಜೀವನ ಸುಖಮಯವಾಗಿರುತ್ತದೆ ಎಂದರು.

ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಹೊನ್ನಾಳಿ ಹಿರೇಕಲ್ಮಠದ ಡಾ.ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಅಧ್ಯಕ್ಷತೆ ವಹಿಸಿ ಲಿಂಗೈಕ್ಯ ಉಭಯ ಜಗದ್ಗುರುಗಳ ಸೇವೆಯನ್ನು ಸ್ಮರಿಸಿದರು.

ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ತೊಗರ್ಸಿ ಮಳೆಮಠದ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮೀಜಿ, ಅಂಬಿಕಾನಗರದ ಶ್ರೀ ಈಶ್ವರ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಮಣಕೂರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಕೋಣಂದೂರು ಶ್ರೀಪತಿ ಪಂಡಿತಾರಾಧ್ಯ ಸ್ವಾಮೀಜಿ, ತಾವರಕೆರೆ ಶಿಲಾಮಠದ ಶ್ರೀ ಅಭಿನವ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಕೋಡಿಯಾಲ ಹೊಸಪೇಟೆ ಪುಣ್ಯಕೋಟಿ ಮಠದ ಶ್ರೀ ಜಗದೀಶ್ವರ ಸ್ವಾಮೀಜಿ, ಮುಸ್ಟೂರು ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಸಮ್ಮುಖ ವಹಿಸಿದ್ದರು.

ಲೆಕ್ಕಪರಿಶೋಧಕರಾದ ಡಾ. ಅಥಣಿ ಎಸ್. ವೀರಣ್ಣ ಮಾತನಾಡಿದರು. ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ವೇಳೆ ಹಿರಿಯ ಪತ್ರಕರ್ತರೂ, ಸಾಹಿತಿಗಳಾದ ಬಾ.ಮ. ಬಸವರಾಜಯ್ಯ ಅವರನ್ನು ಗೌರವಿಸಲಾಯಿತು.

ದೂಡಾ ಮಾಜಿ ಅಧ್ಯಕ್ಷ ದೇವರಮನಿ ಶಿವಕುಮಾರ್, ಕೆ.ಬಿ.ಹನುಮಂತಪ್ಪ, ಎ.ಹೆಚ್. ಕುಬೇರಪ್ಪ, ಡಾ.ಬಿ.ಪಿ. ರಾಜೇಶ್, ಉಳುವಯ್ಯ, ಬನ್ನಯ್ಯಸ್ವಾಮಿ, ವಾಗೀಶ ಸ್ವಾಮಿ, ಟಿ.ಎಂ. ಪಂಚಾಕ್ಷರಯ್ಯ ನಾಗರಾಜ್, ಜ್ಯೋತಿ ಪ್ರಕಾಶ್, ಪರಮೇಶ್ವರಯ್ಯ ಮುಂತಾದವರಿದ್ದರು.

ಟಿ.ಹೆಚ್.ಎಂ. ಶಿವಕುಮಾರಸ್ವಾಮಿ, ಮಂಜುಳಾ ಬಸವಲಿಂಗಪ್ಪ ಮತ್ತು ಸಂಗಡಿಗರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಭಾರ್ಗವಿ ಮತ್ತು ಸೌಂದರ್ಯ ಭರತನಾಟ್ಯ ಪ್ರದರ್ಶಿಸಿದರು. ರಾಧೇಶ್ ಜಂಬಗಿ ಸ್ವಾಗತಿಸಿದರು. ಶಿವಯೋಗಿ ಹಿರೇಮಠ, ಸೌಭಾಗ್ಯ ನಿರೂಪಿಸಿದರು. ಶಿವಕುಮಾರ್ ಶೆಟ್ಟರ್ ಧ್ವಜವಂದನೆ ಕಾರ್ಯಕ್ರಮ ನಡೆಸಿಕೊಟ್ಟರು.

## ವಕ್ಫ್ ಸಮಿತಿ ಅಧ್ಯಕ್ಷರ ವಿರುದ್ಧ ವಿಪಕ್ಷಗಳ ದೂರು

ನವದೆಹಲಿ, ನ. 5 - ವಕ್ಫ್ ತಿದ್ದುಪಡಿ ಕುರಿತ ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಜಗದಂಬಿಕ ಪಾಲ್ ಅವರು ಏಕ ಪಕ್ಷೀಯವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ಸಮಿತಿಯ ಪ್ರತಿಪಕ್ಷಗಳ ಸದಸ್ಯರು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರನ್ನು ಭೇಟಿ ಮಾಡಿ ಪ್ರತಿಭಟನೆ ದಾಖಲಿಸಿದ್ದಾರೆ.

ಲೋಕಸಭಾಧ್ಯಕ್ಷರು ತಮ್ಮ ಮನವಿಯನ್ನು ಸಮಾಧಾನವಾಗಿ ಆಲಿಸಿದ್ದಾರೆ ಹಾಗೂ ಈ ಬಗ್ಗೆ ಶೀಘ್ರದಲ್ಲೇ ನಿರ್ಧಾರ ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ ಎಂದು ತೃಣಮೂಲ ಕಾಂಗ್ರೆಸ್ ಸಂಸದ ಕಲ್ಯಾಣ್ ಬ್ಯಾನರ್ಜಿ ತಿಳಿಸಿದ್ದಾರೆ.

## 5 ಸಾವಿರ ಕೋಟಿ ರೂ. ಷೇರು ಮಾರಾಟ

ನವದೆಹಲಿ, ನ. 5 - ಹಿಂದೂಸ್ತಾನ್ ಜಿಂಕ್ ಕಂಪನಿಯ ಶೇ.2.5ರ ಪಾಲುಗಾರಿಕೆಯನ್ನು ಕೇಂದ್ರ ಸರ್ಕಾರ ಮಾರಲಿದ್ದು, ಪ್ರತಿ ಷೇರಿಗೆ 505 ರೂ.ಗಳ ಬೆಲೆ ನಿಗದಿಪಡಿಸಲಾಗಿದೆ. ಈ ಮಾರಾಟದಿಂದ ಸರ್ಕಾರಕ್ಕೆ 5 ಸಾವಿರ ಕೋಟಿ ರೂ. ದೊರೆಯುವ ನಿರೀಕ್ಷೆ ಇದೆ. ಬುಧವಾರ ಸಾಂಸ್ಥಿಕ ಮಾರಾಟಗಾರರಿಗೆ ಹಾಗೂ ಗುರುವಾರ ಚಿಲ್ಲರೆ ಹೂಡಿಕೆದಾರರಿಗೆ ಷೇರುಗಳು ಲಭ್ಯವಾಗಲಿವೆ.

## ಸುಧಾರಣೆಯಿಂದ ಹಿಂದೆ ಸರಿದ ಶ್ರೀಲಂಕಾ

**ಐ.ಎಂ.ಎಫ್. ನೆರವು ಯೋಜನೆ ಮಧ್ಯೆಯೇ ಉಲ್ಟಾ ಹೊಡೆದ ಸರ್ಕಾರ**

ಕೊಲಂಬೋ, ನ. 5 - ಶ್ರೀಲಂಕಾದ ನ್ಯಾಷನಲ್ ಪೀಪಲ್ಸ್ ಪವರ್ (ಎನ್.ಪಿ.ಪಿ.) ಸರ್ಕಾರ ನಷ್ಟಕ್ಕೆ ಗುರಿಯಾಗಿರುವ ಸರ್ಕಾರಿ ಸ್ವಾಮ್ಯದ ಉದ್ಯಮಗಳ ಕುರಿತ ಪ್ರಮುಖ ಸುಧಾರಣಾ ಕ್ರಮವನ್ನು ವಾಪಸ್ ಪಡೆದಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಿಂದ ನೆರವು ಪಡೆಯುವ ಯೋಜನೆಯ ಮಧ್ಯದಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಈ ಹಿಂದೆ ರಾಣಿಲ್ ವಿಕ್ರಮಸಿಂಘೆ ಅವರು ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ವಿದ್ಯುತ್ ವಲಯ ಸುಧಾರಣೆಗಾಗಿ ಕಾಯ್ದೆಯೊಂದನ್ನು ಜಾರಿಗೆ ತರಲಾಗಿತ್ತು. ಈ ಮೂಲಕ ಸಿಲೋನ್ ಎಲೆಕ್ಟ್ರಿಸಿಟಿ ಬೋರ್ಡ್ (ಸಿ.ಇ.ಬಿ.) ನಲ್ಲಿ ಪ್ರಮುಖ ಸುಧಾರಣೆ ತರಲಾಗಿತ್ತು.

ಮಾರ್ಕ್ಸ್‌ವಾದಿ ಎನ್.ಪಿ.ಪಿ. ಕಾರ್ಮಿಕರ ಒಕ್ಕೂಟಗಳು ಈ ಮಸೂದೆಯ ವಿರುದ್ಧ ಪ್ರತಿಭಟನೆ ನಡೆಸಿದ್ದವು.

ಅದೀಗ ಸಿ.ಇ.ಬಿ. ಖಾಸಗೀಕರಣ ಯೋಜನೆಯನ್ನು ಕೈ ಬಿಡಲಾಗಿದೆ ಹಾಗೂ ಸಿ.ಇ.ಬಿ. ಸುಧಾರಣಾ ಕಾಯ್ದೆಗೆ ತಿದ್ದುಪಡಿ ತರಲು ನಿರ್ಧರಿಸಲಾಗಿದೆ.

ಸರ್ಕಾರಿ ಸ್ವಾಮ್ಯದ ವಿದ್ಯುತ್ ಘಟಕಗಳು, ವಿದ್ಯುತ್ ಸಾಗಣೆ ಸಂಸ್ಥೆಗಳು ಹಾಗೂ ವಿತರಣಾ ಪ್ರಕ್ರಿಯೆಗಳಲ್ಲಿ ಖಾಸಗೀಕರಣಕ್ಕೆ ಅವಕಾಶ ಇರುವುದಿಲ್ಲ ಎಂದು ತಿಳಿಸಲಾಗಿದೆ.

ಸಿ.ಇ.ಬಿ. ಸುಧಾರಣಾ ಕಾಯ್ದೆ, 2024ರ ಮೂಲಕ ವಿದ್ಯುತ್ ಉತ್ಪಾದನೆಯಲ್ಲಿ ಖಾಸಗಿ ವಲಯಕ್ಕೆ ದಾರಿ ಮಾಡಿಕೊಡಲಾಗಿತ್ತು. ಸರ್ಕಾರದ ಬೊಕ್ಕಸದ ಮೇಲಿರುವ ಹೊರೆ ತಗ್ಗಿಸಲು ಹಾಗೂ 2030ರ ವೇಳೆಗೆ ನವೀಕರಣ ವಿದ್ಯುತ್ ಪಾಲನ್ನು ಶೇ. 70ಕ್ಕೆ ಹೆಚ್ಚಿಸಲು ಈ ಕಾಯ್ದೆ ಜಾರಿಗೆ ತರಲಾಗಿತ್ತು.

2023ರಲ್ಲಿ ಐ.ಎಂ.ಎಫ್. ಜೊತೆ ಶ್ರೀಲಂಕಾ 3 ಶತಕೋಟಿ ಡಾಲರ್ ನೆರವಿನ ಒಪ್ಪಂದ ಮಾಡಿಕೊಂಡಿತ್ತು. ಈ ಒಪ್ಪಂದದ ಅನ್ವಯ ಸರ್ಕಾರಿ ಖಜಾನೆಗೆ ಆಗುವ ವೆಚ್ಚ ಕಡಿಮೆ ಮಾಡಲು ಸಿ.ಇ.ಬಿ. ಸುಧಾರಣೆ ಜಾರಿಗೆ ತರಲಾಗುವುದು ಎಂದು ಶ್ರೀಲಂಕಾ ಸರ್ಕಾರ ತಿಳಿಸಿತ್ತು.

ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಐ.ಎಂ.ಎಫ್.ನ ಮೂರನೇ ಕಂತಿನ ನೆರವು ವಿಳಂಬಗೊಳಿಸಲಾಗಿತ್ತು. ಅದರ ಬೆನ್ನಲ್ಲೇ ಸಿ.ಇ.ಬಿ. ಕಾಯ್ದೆಯನ್ನು ವಾಪಸ್ ಪಡೆಯುವ ನಿರ್ಧಾರ ಪ್ರಕಟಿಸಲಾಗಿದೆ. ಮೂರನೇ ಕಂತಿನ ಪರಿಶೀಲನೆ ಪೂರ್ಣಗೊಳ್ಳುವವರೆಗೂ ಐ.ಎಂ.ಎಫ್. ನಾಲ್ಕನೇ ಕಂತಿನ ನೆರವು ಬಿಡುಗಡೆಯಾಗುವುದಿಲ್ಲ.

ಕಳೆದ ಸೆಪ್ಟೆಂಬರ್ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದ ಎನ್.ಪಿ.ಪಿ. ನಾಯಕ ಅನುರ ಕುಮಾರ ಡಿಸ್ಸನಾಯಕೆ ಅವರು, ಸಿ.ಇ.ಬಿ. ಖಾಸಗೀಕರಣದ ವಿರುದ್ಧ ಜನಾದೇಶ ದೊರೆತಿದೆ ಎಂದಿದ್ದರು.

ಇದಕ್ಕೂ ಮುಂಚೆ ಎನ್.ಪಿ.ಪಿ. ಸರ್ಕಾರ ಶ್ರೀಲಂಕಾ ವಿಮಾನಯಾನ ಸಂಸ್ಥೆಗಳ ಖಾಸಗೀಕರಣ ಮಾಡುವುದಿಲ್ಲ ಎಂದು ಘೋಷಿಸಿತ್ತು.

## ಬುಲೆಟ್ ರೈಲು ಕಾಮಗಾರಿ ತಾಣದಲ್ಲಿ ಅವಘಡ : ಮೂವರ ಸಾವು

ಆನಂದ್, ನ. 5 - ಮುಂಬೈ ಅಹಮದಾಬಾದ್ ಬುಲೆಟ್ ರೈಲು ಕಾರಿಡಾರ್ ಯೋಜನೆಯ ನಿರ್ಮಾಣ ಕಾರ್ಯ ನಡೆಯುತ್ತಿದ್ದ ಗುಜರಾತ್‌ನ ಆನಂದ್ ಜಿಲ್ಲೆಯಲ್ಲಿ ಅವಘಡ ಸಂಭವಿಸಿ ಮೂವರು ಕಾರ್ಮಿಕರು ಸಾವನ್ನಪ್ಪಿದ್ದಾರೆ.

ವಸದ್ ಹಳ್ಳಿಯಲ್ಲಿ ನಿರ್ಮಿಸಲಾಗಿದ್ದ ತಾತ್ಕಾಲಿಕ ಕಟ್ಟಡ ಕುಸಿದಿದೆ. ಈ ತಾಣವು ವಡೋದರ ಬಳಿಯ ಮಾಹಿ ನದಿಯ ದಂಡೆಯಲ್ಲಿದೆ. ಈ ಘಟನೆಯಲ್ಲಿ ಮೂವರು ಸಾವನ್ನಪ್ಪಿದ್ದರೆ, ಇನ್ನೊಬ್ಬರಿಗೆ ಗಾಯಗಳಾಗಿವೆ.

## ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿಗೆ ಪ್ರಶಸ್ತಿ



ಸಾಣೇಹಳ್ಳಿ, ನ.5- ಇಲ್ಲಿನ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಂಗಳೂರಿನ ಡಾ.ರೊನಾಲ್ಡ್ ಕೊಲಾಸೊ ಸಾಮರಸ್ಯ ಪ್ರಶಸ್ತಿಗೆ ಭಾಜನ ರಾಗಿದ್ದಾರೆ.


ಕ್ರೈಸ್ತ ಸಮುದಾಯದ ಮುಖಂಡರಾದ ಡಾ.ರೊನಾಲ್ಡ್ ಕೊಲಾಸೊ ಅವರು ಅನೇಕ ಚರ್ಚ್‌ಗಳನ್ನು, ದೇವಾಲಯಗಳನ್ನು ಕಟ್ಟಿಸಿಕೊಟ್ಟಿದ್ದು, ಅವರ ಹೆಸರಿನ ಪ್ರಶಸ್ತಿಯನ್ನು ಆಮಿ ಆನಿ ಆಮ್ಚಿಂ (ನಾವು ಮತ್ತು ನಮ್ಮವರು) ಸಂಸ್ಥೆಯು ಈ ವರ್ಷದಿಂದ ಆರಂಭಿಸಿದೆ. ಮೊದಲ ಬಾರಿಯ ಪ್ರಶಸ್ತಿಗೆ ಶ್ರೀ ಪಂಡಿತಾರಾಧ್ಯ ಸ್ವಾಮೀಜಿಯವರನ್ನು ಆಯ್ಕೆ ಮಾಡಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಡೆನಿಸ್ ಡಿಸಿಲ್ವಾ ತಿಳಿಸಿದ್ದಾರೆ. ಪ್ರಶಸ್ತಿಯು ಒಂದು ಲಕ್ಷ ರೂಪಾಯಿ ನಗದು, ಸ್ಮರಣಿಕೆ ಒಳಗೊಂಡಿದ್ದು, ಪ್ರಶಸ್ತಿ ಪ್ರದಾನ ಸಮಾರಂಭ ಇದೇ ದಿನಾಂಕ 10ರಂದು ಸಂಜೆ 4 ಗಂಟೆಗೆ ಮಂಗಳೂರಿನ ನೀರು ಮಾರ್ಗದ ಕೊಲರ್ರೆ ಚರ್ಚ್‌ನಲ್ಲಿ ನಡೆಯಲಿದೆ.

## ನ.25ರಿಂದ ಸಂಸತ್ ಅಧಿವೇಶನ

ನವದೆಹಲಿ, ನ. 5 - ಬರುವ ನವೆಂಬರ್ 25 ರಿಂದ ಸಂಸತ್ತಿನ ಚಳಿಗಾಲದ ಅಧಿವೇಶನ ಆರಂಭವಾಗಲಿದೆ. ಡಿಸೆಂಬರ್ 20ರವರೆಗೆ ಅಧಿವೇಶನ ಮುಂದುವರೆಯಲಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಖಾತೆ ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ. ಸಂವಿಧಾನ ಅಂಗೀಕಾರಗೊಂಡು 75 ವರ್ಷ ತುಂಬುತ್ತಿ ರುವ ಹಿನ್ನೆಲೆಯಲ್ಲಿ ಸಂವಿಧಾನ ಸದನದ ಕೇಂದ್ರ ಹಾಲ್‌ನಲ್ಲಿ ನವೆಂಬರ್ 25ರಂದು ವಿಶೇಷ ಸಂಭ್ರಮಾಚರಣೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಚಿವರು ಹೇಳಿದ್ದಾರೆ. ಈ ಅಧಿವೇಶನದ ನಡುವೆ ನವೆಂಬರ್ 20ರಂದು ವಕ್ಫ್ ತಿದ್ದುಪಡಿ ಕುರಿತ ಜಂಟಿ ಸಮಿತಿಯು ತನ್ನ ವರದಿಯನ್ನು ಸಂಸತ್ತಿಗೆ ಸಲ್ಲಿಸುವ ನಿರೀಕ್ಷೆ ಇದೆ.


॥ ಶ್ರೀ ಮುರುಡ ಬಸವೇಶ್ವರ ಪ್ರಸನ್ನ ॥ ॥ ಶ್ರೀ ಗುರು ಬಕ್ಕೇಶ್ವರ ಮಹಾಸ್ವಾಮಿ ಪ್ರಸನ್ನ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



ಶ್ರೀಮತಿ ಜಯಶೀಲಾ ಶಿವಾನಂದಪ್ಪ ಮಾಗಾನಹಳ್ಳಿ ಮತ್ತು ಮಕ್ಕಳು, ದಾವಣಗೆರೆ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 29.10.2024ನೇ ಮಂಗಳವಾರ ಮಧ್ಯಾಹ್ನ 12-00 ಗಂಟೆಗೆ ನಮ್ಮ ಪೂಜ್ಯ ಪತಿಯವರಾದ
**ಶ್ರೀ ಶಿವಾನಂದಪ್ಪ ಮಾಗಾನಹಳ್ಳಿ**
ಎಂ.ಬಿ.ಎಸ್. ವಕೀಲರು
(ದಿ. ಶ್ರೀ ಎಂ.ಎಸ್. ಬಸವರಾಜಪ್ಪನವರ ಮಗ)
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ : 06.11.2024ನೇ ಬುಧವಾರ ಮಧ್ಯಾಹ್ನ 12.30ಕ್ಕೆ ದಾವಣಗೆರೆ ಎಸ್.ಎಸ್. ಲೇ ಔಟ್ ಬಿ ಬ್ಲಾಕ್, 3ನೇ ಕ್ರಾಸ್‌ನಲ್ಲಿರುವ ನಂ. 4943/52, ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕೆಂದು ವಿನಂತಿ.
ಇಂತಿ ದುಃಖತಪ್ತರು : ಶ್ರೀಮತಿ ಜಯಶೀಲಾ ಶಿವಾನಂದಪ್ಪ ಮಾಗಾನಹಳ್ಳಿ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಮಾಗಾನಹಳ್ಳಿ ಬಂಧುಗಳು, ರಾಣೇಬೆನ್ನೂರು ಬೆಲ್ಲದ್ ಬಂಧುಗಳು ಹಾಗೂ ಮಿತ್ರರು. 93801 90767
ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


## ಶಿಗ್ಗಾಂವಿ- ಸವಣೂರು ಉಪ ಚುನಾವಣೆ : ಎಸ್ಸೆಸ್ಸೆಂ ಪ್ರಚಾರ



ಹಾವೇರಿ, ನ.5-ಶಿಗ್ಗಾಂವಿ-ಸವಣೂರು ವಿಧಾನಸಭೆಯ ಉಪ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಕಾಂಗ್ರೆಸ್ ಅಭ್ಯರ್ಥಿ ಪರ ಮತಯಾಚನೆ ಮಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಕ್ಷೇತ್ರದ ಚಿಲ್ಲೂರ-ಬಡ್ನಿ ಗ್ರಾಮಗಳಲ್ಲಿ ಚುನಾವಣಾ ಪ್ರಚಾರ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಯಾಸಿನ್ ಅಹ್ಮದ್ ಖಾನ್ ಪಠಾಣ್ ಪರ ಮತಯಾಚಿಸಿದರು.

ಕಾಂಗ್ರೆಸ್ ಪಕ್ಷವು ಜನಪರ ಪಕ್ಷವಾಗಿದೆ. ಪಕ್ಷದ ಗ್ಯಾರಂಟಿ ಯೋಜನೆಗಳು ಜನತೆಗೆ ಅನುಕೂಲ ನೀಡಿವೆ. ಕೊಟ್ಟ ಮಾತಿನಂತೆ ನಡೆಯುವ ಪಕ್ಷ ಕಾಂಗ್ರೆಸ್ ಪಕ್ಷವಾಗಿದ್ದು ಉಪ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯ ಗೆಲುವಿಗೆ ಮತದಾರರ ಮತ ನೀಡುವಂತೆ ಕೋರಿದರು.

ಈ ಸಂದರ್ಭದಲ್ಲಿ ಸಚಿವರಾದ ಈಶ್ವರ ಖಂಡ್ರೆ, ಮಾಜಿ ಸಚಿವ ಹೆಚ್. ಆಂಜನೇಯ, ಶಾಸಕರಾದ ಲಕ್ಷ್ಮಣ ಸವದಿ, ಬಸವಂತಪ್ಪ, ಪಕ್ಷದ ಅಭ್ಯರ್ಥಿ ಯಾಸಿನ್ ಅಹ್ಮದ್ ಖಾನ್ ಪಠಾಣ್, ಮಹಾನಗರ ಪಾಲಿಕೆ ಮೇಯರ್ ಚಮನ್ ಸಾಬ್, ಉಪ ಮೇಯರ್ ಸೋಗಿ ಶಾಂತಕುಮಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಖಾನ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಬಸವರಾಜ್, ಗ್ರಾಮಾಂತರ ಬ್ಲಾಕ್ ವಿಭಾಗದ ಅಧ್ಯಕ್ಷ ಮಾಗಾನಹಳ್ಳಿ ಪರಶುರಾಮ್ ಹಾಗೂ ಇತರರು ಇದ್ದರು.

## ಸೈನ್ಯಕ್ಕೆ ದೇಶೀಯ ನಿರ್ಮಿತ ಮಷೀನ್ ಪಿಸ್ತೂಲ್ ಸೇರ್ಪಡೆ

ಜಮ್ಮು, ಅ. 5 - ಭಾರತೀಯ ಸೇನಾಪಡೆಗೆ ದೇಶಿಯವಾಗಿ ನಿರ್ಮಿಸಲಾದ ಅಸ್ಮಿ ಮಷೀನ್ ಪಿಸ್ತೂಲ್‌ಗಳನ್ನು ಸೇರ್ಪಡೆ ಮಾಡಲಾಗಿದೆ. ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್‌ನಲ್ಲಿ ಕಾರ್ಯನಿರ್ವಹಿಸುವ ನಾರ್ತರ್ನ್ ಕಮಾಂಡ್‌ಗೆ ಈ ಶಸ್ತ್ರಗಳನ್ನು ಪೂರೈಸಲಾಗಿದೆ.

ಇವುಗಳನ್ನು ಸಂಪೂರ್ಣವಾಗಿ ಭಾರತದಲ್ಲಿ ನಿರ್ಮಿಸಲಾಗಿದೆ. 550 ಮಷೀನ್ ಪಿಸ್ತೂಲ್‌ಗಳನ್ನು ಸೈನ್ಯಕ್ಕೆ ಪೂರೈಸಲಾಗಿದೆ. ಇದನ್ನು ಪಿಸ್ತೂಲ್ ಹಾಗೂ ಸಬ್ ಮಷೀನ್ ಗನ್ ಎರಡೂ ರೀತಿಯಲ್ಲಿ ಬಳಸಬಹುದು.


**ಜಿಎಂ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ**
ಆಡಳಿತ ಕಛೇರಿ: #652, ಸೂರಜ್ ಆರ್ಕೇಡ್, ಮಂಡಿಪೇಟೆ, ದಾವಣಗೆರೆ-01.
Ph: 08192-295511 E-Mail: gmsouhardadvg@gmail.com
ನೋಂದಣಿ ಸಂಖ್ಯೆ: ಆರ್.ಎಸ್.ಆರ್./ಸೌಕಾ/41/113/2008-09

ನಮ್ಮ ಸಹಕಾರಿಯ ಭೀಮಸಮುದ್ರ (ಚಿತ್ರದುರ್ಗ ಜಿಲ್ಲೆ), ಸಂಗೂರು (ಹಾವೇರಿ ಜಿಲ್ಲೆ), ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ, ಮಲ್ಲೇಶ್ವರಂ ಬೆಂಗಳೂರು ಹಾಗೂ ಹೊಸದಾಗಿ ಪ್ರಾರಂಭವಾಗುವ ಬ್ಯಾಡಗಿ (ಹಾವೇರಿ ಜಿಲ್ಲೆ) ಶಾಖೆಗಳಲ್ಲಿ ಕೆಲಸ ನಿರ್ವಹಿಸಲು ಖಾಲಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ

**ನೇರ ಸಂದರ್ಶನ ಪ್ರಕ್ರಿಯೆ ಪ್ರಕಟಣೆ**

| ಖಾಲಿ ಹುದ್ದೆ | ವಿದ್ಯಾರ್ಹತೆ |
|---|---|
| ಸಿಸ್ಟಮ್ ಅಡ್ಮಿನಿಸ್ಟ್ರೇಟರ್ (System Administrator for CBS Incharge) | M.Sc; (cs). BE; (cs), MCA |
| ಲೋನ್ಸ್ ಆಫೀಸರ್ (Loans Officer) | B.com / M.com, MBA in Finance. |
| ಆಂತರಿಕ ಲೆಕ್ಕ ಪರಿಶೋಧಕರು (Internal Auditor) | Any Graduates |
| ಹಿರಿಯ ಲೆಕ್ಕಾಧಿಕಾರಿಗಳು (Senior Accountants) | B.Sc/M.Sc, B.com/M.com, BBM; BBA/MBA, BCA/MCA. |
| ಕಿರಿಯ ಲೆಕ್ಕಾಧಿಕಾರಿಗಳು (Junior Accountants) | B.Sc. B.com. BCA. BBM. BBA. BBM. |


ಷರತ್ತುಗಳು : 1) ಎಲ್ಲಾ ಹುದ್ದೆಗಳಿಗೆ ಕಂಪ್ಯೂಟರ್ ಅನುಭವ ಕಡ್ಡಾಯ. 2) ಸಿಸ್ಟಮ್ ಅಡ್ಮಿನಿಸ್ಟ್ರೇಟರ್ (System Administrator for CBS Incharge) ಹುದ್ದೆಗೆ ಅರ್ಜಿ ಸಲ್ಲಿಸುವವರು ಕಂಪ್ಯೂಟರ್ ಕ್ಷೇತ್ರದಲ್ಲಿ 3 ವರ್ಷಗಳ ಅನುಭವ ಹೊಂದಿರಬೇಕು. 3) ಕ್ರಮ ಸಂಖ್ಯೆ-03 ರಲ್ಲಿ ನಮೂದಿಸಿರುವ ಆಂತರಿಕ ಲೆಕ್ಕ ಪರಿಶೋಧಕರ ಹುದ್ದೆಗೆ ಭಾರತದಲ್ಲಿ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಪಡೆದ ಯಾವುದೇ ಪದವೀಧರರಾಗಿರತಕ್ಕದ್ದು ಮತ್ತು ಯಾವುದೇ ಬ್ಯಾಂಕುಗಳಲ್ಲಿ ಬ್ಯಾಂಕ್ ಇನ್ಸ್‌ಪೆಕ್ಟರ್/ಆಫೀಸರ್/ಮ್ಯಾನೇಜರ್ ಹುದ್ದೆಗಳಲ್ಲಿ ಕೆಲಸ ನಿರ್ವಹಿಸಿ ನಿವೃತ್ತರಾಗಿರತಕ್ಕದ್ದು. ಮೇಲ್ಕಂಡ ಹುದ್ದೆಗೆ ವಯೋಮಿತಿ 60 ವರ್ಷದಿಂದ 65 ವರ್ಷ ತುಂಬಿದವರಿಗೆ ಮಾತ್ರ. 4) ಲೋನ್ಸ್ ಆಫೀಸರ್ (Loans Officer)ಹುದ್ದೆಗೆ ಅರ್ಜಿ ಸಲ್ಲಿಸುವವರು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನುಭವ ಹೊಂದಿರಬೇಕು, ವಿಶೇಷವಾಗಿ ಸಾಲದ ಪೋರ್ಟ್‌ಫೋಲಿಯೊದಲ್ಲಿ (Portfolio) ಕನಿಷ್ಠ 5 ವರ್ಷ ಅನುಭವ ಹೊಂದಿರಬೇಕು. 5) ವಯೋಮಿತಿಯನ್ನು ನಮ್ಮ ಬೈಲಾದಲ್ಲಿರುವಂತೆ ಪರಿಗಣಿಸಲಾಗುವುದು ಮತ್ತು ಸಹಕಾರಿ/ಸೌಹಾರ್ದ ಸಂಘಗಳಲ್ಲಿ ಹೆಚ್ಚಿನ ಸೇವೆ ಸಲ್ಲಿಸಿದವರಿಗೆ ರಿಯಾಯಿತಿ ನೀಡಲಾಗುವುದು. 6) ಆಡಳಿತ ಮಂಡಳಿ ಈ ಬಗ್ಗೆ ವಿಧಿಸಬಹುದಾದ ಇತರೆ ಷರತ್ತುಗಳು.

ಆಸಕ್ತರು ತಮ್ಮ ಇತ್ತೀಚಿನ ಭಾವಚಿತ್ರದೊಂದಿಗೆ (Photo) ಸ್ವ-ವಿವರಗಳ (Bio-Data) ಹಾಗೂ ಮೂಲ ದಾಖಲೆಗಳ ಪ್ರತಿಗಳನ್ನು ದಿನಾಂಕ: 15-11-2024 ರಂದು ಸಂಜೆ 5 ಗಂಟೆಯೊಳಗಾಗಿ ನಮ್ಮ ಸಹಕಾರಿಯ ಆಡಳಿತ ಕಛೇರಿಯ ವಿಳಾಸಕ್ಕೆ ಮುದ್ದಾಂ ಅಥವಾ ಅಂಚೆ ಮೂಲಕ ಕಳುಹಿಸುವುದು. ಅಭ್ಯರ್ಥಿಯು ಪೂರ್ಣ ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು ಹಾಗೂ ಇಮೇಲ್ ಐಡಿ ನೀಡುವುದು ಕಡ್ಡಾಯ. ಅರ್ಜಿಗಳನ್ನು ಪರಿಶೀಲಿಸಿದ ನಂತರ "ನೇರ ಸಂದರ್ಶನದ" ದಿನಾಂಕವನ್ನು ನಿಗದಿಪಡಿಸಿ ಅಭ್ಯರ್ಥಿಗಳಿಗೆ ತಿಳಿಸಲಾಗುವುದು

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ

ಸಹಿ/- ಅಧ್ಯಕ್ಷರು    ಸಹಿ/- ಉಪಾಧ್ಯಕ್ಷರು    ಸಹಿ/- ಪ್ರಧಾನ ವ್ಯವಸ್ಥಾಪಕರು







KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas